ಪ್ರಕಟಣೆಯ ೩೪ ನೆಯ ವರ್ಷ : ೧೯೯೯

೩೨೨

ಸಂಕ್ರಮಣ

ಪ್ರಾಥಮಿಕ ಶಿಕ್ಷಣ ಮಾಧ್ಯಮ
ಮಧ್ಯಂತರ ವರದಿ

ಶಿವರಾಮಯ್ಯ
ಜನ್ನನ ಅಮೃತ ಮತಿ - ಅಷ್ಟಾವಂಕರ ಪ್ರಸಂಗ :
ವೈದ್ಯವಿಜ್ಞಾನದ ನೆಲೆಯಿಂದ

ಶ್ರೀಧರ ವಿ.
ಭೂತಾರಾಧನೆಯ ಕೆಲವು ವಿಚಾರಗಳು

ಪ್ರಹ್ಲಾದ ಮುದಗಲ್ಲ
ಚುರುಮುರಿ : ಬಸವಪ್ಪ ಶಾಸ್ತ್ರಿ

ನಾ . ದಾಮೋದರ ಶೆಟ್ಟಿ
ಅಭಾಧಿತ "ಇಗ್ಗಪ್ಪ ಹೆಗ್ಗಡೇ "

ಎನ್ .ವಿ .ಕರುಣಾಕರ , ವಿಠ್ಠಲ ಪೇರುಮನೆ , ಈರೋಡು ತಮಿಳ್ವನ್
ಇವರ ಕವನುಗಳು

ಚಂಪಾಕಾಲಂ
ಮತಾಂತರ ಮತ್ತು ಮೇರಾ ಭಾರತ ಮಹಾನ್

ಸಂಪುಟ : ೩೪
ಸಂಚಿಕೆ : ೬

ಜೂನ
೧೯೯೯

ಸಂಕ್ರಮಣ

ಸಾಹಿತ್ಯಿಕ ಮಾಸಿಕ

ಸಂಪಾದಕಿ
ನೀಲಾ ಪಾಟೀಲ
ಸಲಹಾ ಸಂಪಾದಕ
ಚಂದ್ರಶೇಖರ ಪಾಟೀಲ

ಈ ಸಂಚಿಕೆಯಲ್ಲಿ

ಮತಾಂತರ ಮತ್ತು ಮೇರಾ ಭಾರತ ಮಹಾನ್ — ಚಂದ್ರಶೇಖರ ಪಾಟೀಲ ೧
ಪ್ರಾಥಮಿಕ ಶಿಕ್ಷಣ ಮಾಧ್ಯಮ: ಮಧ್ಯಂತರ ವರದಿ — ೯
ಜನ್ನನ ಅಮೃತಮತಿ - ಅಷ್ಟಾವಂಕರ ಪ್ರಸಂಗ : — ಶಿವರಾಮಯ್ಯ ೨೧
ವೈದ್ಯವಿಜ್ಞಾನದ ನೆಲೆಯಿಂದ
ಭೂತಾರಾಧನೆ ಕೆಲವು ವಿಚಾರಗಳು — ಶ್ರೀಧರ ವಿ . ೨೯
ಚುರುಮುರಿ : ಬಸವಪ್ಪ ಶಾಸ್ತ್ರಿ — ಪ್ರಹ್ಲಾದ ಮುದಗಲ್ಲ ೩೯
ಅಬಾಧಿತ "ಇಗ್ಗಪ್ಪ ಹೆಗ್ಗಡೇ" — ನಾ . ದಾಮೋದರ ಶೆಟ್ಟಿ ೪೭

ಕಾವ್ಯ
ಗೆದ್ದಲು — ಎನ್.ವಿ. ಕರುಣಾಕರ ೧೯
ಗುಲ್‌ನಾರಿ ಪಲ್ಲಂಗದ ಹಾಡು — ವಿಠ್ಠಲ ಪೇರುಮನೆ ೩೮
ಪೆರಿಯಾರ ಬಿಟ್ಟುಹೋದ ಊರುಗೋಲು — ಈರೋಡು ತಮಿಳ್ಬನ್ ೬೧

ಸಂಕ್ರಮಣ ಪ್ರಕಾಶನ
(ಸಂಪರ್ಕ ವಿಳಾಸ)
ನಂ. ೧೮೯೪/೧, ३೧ ನೇ ಕ್ರಾಸ್, ೨ ನೇ ಸ್ಟೇಜ್, ಬನಶಂಕರಿ
ಬೆಂಗಳೂರು ೫೬೦ ೦೭೦ ಫೋನು : ೦೮೦-೬೭೧೦೫೨೩
ಸಂಕ್ರಮಣದ ವಾರ್ಷಿಕ ಚಂದಾ : ಒಂದು ನೂರು ರೂ.

ಮತಾಂತರ ಮತ್ತು ಮೇರಾ ಭಾರತ ಮಹಾನ್

ಚಂದ್ರಶೇಖರ ಪಾಟೀಲ

ನಿಮ್ಮನ್ನು ಭೆಟ್ಟಿಯಾಗಲು ಯಾರೋ ಹೊಸಬರು ಬಂದಿರುತ್ತಾರೆ. ಅಥವಾ ಟ್ರೇನಿನಲ್ಲೋ-ಬಸ್ಸಿನಲ್ಲೋ ಯಾರೋ ಸಿಗುತ್ತಾರೆ. ಅದು ಇದು ಪ್ರಾಥಮಿಕ ಹಂತದ ಪರಿಚಯ ಮುಗಿದ ಮೇಲೆ ಒಂದು ಪ್ರಶ್ನೆ ಮೆದುಳಿನ ಮೂಲೆಯಲ್ಲಿ ಹೆಡೆಯಾಡಲು ಸುರು ಮಾಡುತ್ತದೆ. ಈ ಆಸಾಮಿಯ ಜಾತಿ ಯಾವುದಿರಬಹುದು? ಒಮ್ಮೊಮ್ಮೆ ವ್ಯಕ್ತಿಯ ಹೆಸರು, ಅಡ್ಡಹೆಸರುಗಳಿಂದಲೇ ಅದು ಗೊತ್ತಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಸಂಭವಿಸುತ್ತಿರುವ 'ನಾಮಾಂತರ' ಆಂದೋಲನದಿಂದಾಗಿ ಈ ಬಗೆಯ ಅನುಕೂಲ ತಪ್ಪಿ ಹೋಗುತ್ತಿರುವುದರಿಂದ, ಒಬ್ಬರ ಜಾತಿ - (ಅದರ ನಂತರ ಉಪಜಾತಿ) - ತಿಳಿಯಲು ಅನೇಕ ಸಾಂದರ್ಭಿಕ ಪುರಾವೆಗಳನ್ನು ಹುಡುಕಬೇಕಾಗುತ್ತದೆ. ಉದಾ : ಅವನ ಹೆಸರಿನ ಇನಿಶಿಯಲ್ಸುಗಳ ವಿಸ್ತೃತರೂಪ ,ಹಾವ ,ಭಾವ , ಆಕಾರ , ವಿಕಾರ , ಮಾತಿನ ರೀತಿ , ಬಳಸುವ ಶಬ್ದಗಳು , ಕ್ರಿಯಾಪದಗಳು , ಊಟ - ತಿಂಡಿಗಳ ವಿವರಗಳು , ರಾಜಕೀಯ ವಿಚಾರಗಳು ..... ಇತ್ಯಾದಿ .

ಇದೆಲ್ಲಾ ನಮ್ಮಂಥ ನಾಗರಿಕ ಪ್ರಜ್ಞೆಯ, ಸುಶಿಕ್ಷಿತರ, ಸುಸಂಸ್ಕೃತರ, ಪಡಿಪಾಟಲು . ವೇಳೆ , ಶ್ರಮ ಎರಡೂ ಹಾಳು . ನಮ್ಮ ಹಳ್ಳಿಯ ಮಂದಿಗೆ ಇಂಥ ಪೀಕಲಾಟವಿಲ್ಲ. ' ಪರಿಚಯ ' ಕ್ಕಾಗಿ ಅವರ ಮೊದಲ ಪ್ರಶ್ನೆ : ಯಾವ ಊರು? ಎರಡನೆಯ ಪ್ರಶ್ನೆಯೇ - ನಿಮ್ಮದು ಯಾವ ಜಾತಿ? ..... ವ್ಯವಹಾರ ಮುಗಿಯಿತು.

ಒಬ್ಬ ವ್ಯಕ್ತಿಯ ಆಚಾರ - ವಿಚಾರ , ಡ್ರೆಸ್ಸು - ಊಟ , ಹಾವಭಾವ - ಆಕಾರಗಳಿಗೆ ಸ್ಪಷ್ಟ ದಿಕ್ಸೂಚಿಯಾಗಿರುವ ಈ 'ಜಾತಿ ' ಎಂಬುದು ನಮ್ಮದೇಶದ ' ಹಿಂದೂ ಎಂಬ ಧರ್ಮ' ದ - (' ಪ್ರವಾಹ ಪತಿತರ ಕರ್ಮ': ಶಂಬಾ ವ್ಯಾಖ್ಯೆ) - ಅಡಿಪಾಯ , ಬುನಾದಿ . ಸಹಪ್ರಯಾಣ , ಸಹಭೋಜನ , ಸಹ-ವಾಸ

ಇತ್ಯಾದಿಗಳಿಂದ ಈ ಅಡಿಪಾಯ ಸಡಿಲಾಗುತ್ತಿದ್ದರೂ ಇಂಡಿಯಾದ ಮನಸ್ಸಿನ ಯಾವುದೋ ಮೂಲೆಯಲ್ಲಿ ಜಾತಿ ಪ್ರಜ್ಞೆಯ ಏಕತಾರಿ ಮಿಡಿಯುತ್ತಿರುವುದು ನಮ್ಮ ನಿತ್ಯದ ಅನುಭವ .

*

ಈ ಲಹರಿಯಲ್ಲಿ ನನಗೆ ಮಾತಾಡಲು ಅವಕಾಶವಿತ್ತವರು ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರ, ಪ್ರೊ .ಬಿ . ಕೃಷ್ಣಪ್ಪ ಟ್ರಸ್ಟ್ ಮತ್ತು ಶಿವಮೊಗ್ಗೆಯ ಪ್ರೊ .ಬಿ . ಕೃಷ್ಣಪ್ಪ ಗೆಳೆಯರ ಬಳಗದ ಸಂಗಾತಿಗಳು . ಜೂನ ೧೩, ೧೯೯೯ರಂದು ಶಿವಮೊಗ್ಗೆಯ ಕಮಲಾ ನೆಹರು ಕಾಲೇಜಿನ ಸಭಾಂಗಣದಲ್ಲಿ ಕೃಷ್ಣಪ್ಪ ನೆನಪಿನಲ್ಲಿ ಹಮ್ಮಿಕೊಂಡ ' ಮತಾಂತರ ' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸುವ ಕೆಲಸ ನನ್ನದಾಗಿತ್ತು . ಪಾಲುಗೊಂಡ ಇತರರು : ಶ್ರೀ ನೊ . ಸಂ .ತಿಮ್ಮೇಗೌಡ, ಡಾ .ನಿ . ಮುರಾರಿ ಬಲ್ಲಾಳ , ಶ್ರೀಮತಿ ಬಾನು ಮುಸ್ತಾಕ್ ಮತ್ತು ಪ್ರೊ.ಎಸ್.ಎ. ಬಾರಿ ಅವರು .

ಪ್ರೊ .ಬಿ .ಕೃಷ್ಣಪ್ಪ (ಬೀಕೆ) : ಕಳೆದ ಎರಡೂವರೆ ದಶಕಗಳಿಂದ ದಲಿತ ಚಳುವಳಿಯ ಸಂದರ್ಭದ ಬಹಳ ಮುಖ್ಯ ಹೆಸರು . ೧೯೭೦ ರ ದಶಕದಲ್ಲಿ , ಮುಖ್ಯವಾಗಿ ಭೂಸಾ ಪ್ರಕರಣದಿಂದಾಗಿ , ಸಿಡಿದು ನಿಂತ ದಲಿತ ಶಕ್ತಿಯ ಮಹಾ ಪ್ರವಾಹಕ್ಕೆ ದಿಕ್ಕು- ದೆಸೆ - ಅರ್ಥ ತೋರಿದವರು ಬಿ .ಕೃಷ್ಣಪ್ಪ , ದೇವನೂರು ಮಹಾದೇವ , ದೇವಯ್ಯ ಹರವೆ , ಸಿದ್ದಲಿಂಗಯ್ಯ ಮುಂತಾದವರು . ಒಟ್ಟಾರೆ ಜನಪರ ಆಂದೋಲನದ ಅಂಗವಾಗಿ ಬೆಳೆದು ಬಂದ ದಲಿತ ಸಂಘರ್ಷ ಸಮಿತಿ ಈ ಇಪ್ಪತ್ತು ವರ್ಷಗಳಲ್ಲಿ ಅನೇಕ ಅವತಾರಗಳನ್ನು ಕಂಡಿದೆ. ಮೊದಲ ಪೀಳಿಗೆಯ ದೇವನೂರ , ಸಿದ್ದಲಿಂಗಯ್ಯ ಮುಂತಾದವರು ತಮ್ಮ ತಮ್ಮ 'ಸಾಹಿತ್ಯಿಕ ' ತವರು ಮನೆಗೆ ಮರಳಿದಾಗ , ದಲಿತ ಯುವಕರಲ್ಲಿ ಅಂಬೇಡ್ಕರ್ ವಿಚಾರಧಾರೆಯ ಬಗ್ಗೆ ಅರಿವು ಮೂಡಿಸುತ್ತಲೇ ಸಂಘಟನೆ - ಶಿಕ್ಷಣ - ಸಂಘರ್ಷಗಳ ಮೂಲಕ ಅವರನ್ನು ಕ್ರಿಯೆಯಲ್ಲಿ ತೊಡಗಿಸುವ ಜವಾಬ್ದಾರಿ ಹೊತ್ತವರು ಕೃಷ್ಣಪ್ಪ . ದಲಿತ ಶಕ್ತಿ ' ರಾಜಕೀಯ ' ಶಕ್ತಿಯಾಗುವುದು ಅನಿವಾರ್ಯವೆಂಬ ನಂಬಿಕೆಯಿಂದ ಬಹುಜನ ಸಮಾಜ ಪಾರ್ಟಿಯನ್ನು ಸೇರಿದರು ಅವರು . .... ಸಂಘಟನೆಯ ಕಾರ್ಯದಲ್ಲಿ ತೊಡಗಿದಾಗಲೇ ಗದಗಿನ ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡುವಾಗ ಆಕಸ್ಮಿಕ ನಿಧನಕ್ಕೆ ತುತ್ತಾದರು .

"ನಾನು ದಲಿತರ ಗುಡಿಸಲುಗಳಲ್ಲಿ ಹೋರಾಟದ ಹಣತೆಯನ್ನು ಹಚ್ಚಿದ್ದೇನೆ.ಅದು ಎಂದೂ ಆರದಂತೆ ನೋಡಿಕೊಳ್ಳಿರಿ. "- ಇದು ಕೃಷ್ಣಪ್ಪನವರ ಸಂದೇಶ .

ಶಿವಮೊಗ್ಗೆಯ ಕಾರ್ಯಕ್ರಮದಲ್ಲಿ ಕೃಷ್ಣಪ್ಪನವರ ಬದುಕನ್ನೇ ಹಾಡಾಗಿಸಿದ ಸಂಗಾತಿಗಳು ತಮ್ಮ ಗುರುವಿಗೆ ಹಸಿರು - ವಂದನೆ ಸಲ್ಲಿಸಿದ್ದು ಮನ ಮಿಡಿಯುವಂತಿತ್ತು .

ನಮ್ಮ ಸಂವಿಧಾನದ ೨೫ ನೇ ವಿಧಿಯ ಪ್ರಕಾರ ಇಂಡಿಯಾ ದೇಶದ ನಾಗರಿಕರು ತಮ್ಮ ಆಯ್ಕೆಯ ಧಾರ್ಮಿಕ ನಂಬಿಕೆ (ಫೇಥ್) ಯನ್ನು ಸ್ವೀಕರಿಸಲು , ಆಚರಿಸಲು ಮತ್ತು ಪ್ರಚಾರ ಮಾಡಲು ಮೂಲಭೂತ ಹಕ್ಕನ್ನು ಪಡೆದಿರುವಾಗ ; ಇಂಥ ನಂಬಿಕೆಯನ್ನು ಬದಲಿಸುವ 'ಮತಾಂತರ'ದ ಸ್ವಾತಂತ್ರ್ಯವನ್ನು ಹೊಂದಿರುವಾಗ, ಅದರ ಬಗ್ಗೆ 'ಚರ್ಚಿಸುವುದು' ಏನಿದೆ ? ಇಂಥ ಚರ್ಚೆ , ವಿಚಾರ ಸಂಕಿರಣಗಳು ಅನಗತ್ಯ ಮತ್ತು ಅಪ್ರಸ್ತುತ . ಆದರೂ ಇಂಥ ವಾತಾವರಣ ನಿರ್ಮಿಸಿದವರು ಇಂಡಿಯಾ ದೇಶದ ಪ್ರಧಾನಿ ಅಟಲ ಬಿಹಾರಿ ವಾಜಪೇಯಿ ಅವರು . ಸಂಘ ಪರಿವಾರದವರು ದೇಶದ ಎಲ್ಲೆಡೆ ಕ್ರೈಸ್ತ ಸಮುದಾಯದ ಮೇಲೆ ದಾಳಿ ಪ್ರಾರಂಭಿಸಿ,ಒಡಿಸಾದಲ್ಲಿ ಕ್ರೈಸ್ತ ಪಾದ್ರಿಯೊಬ್ಬರನ್ನು ಅವರ ಎಳೆ ಮಕ್ಕಳ ಸಮೇತ ಸುಟ್ಟು ಬೂದಿ ಮಾಡಿದರು ; ಗುಜರಾತಿನಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ ಸಂಭವಿಸಿತು . ಆದರೆ ' ಸಂವಿಧಾನ - ರಕ್ಷಕ ' ಪ್ರಧಾನಿ ಮಾತ್ರ ' ಮತಾಂತರ ' ದ ಬಗ್ಗೆ ರಾಷ್ಟ್ರೀಯ ಚರ್ಚೆ ಆಗಬೇಕೆಂದು ಅಪ್ಪಣೆ ಕೊಡಿಸಿದರು !

ಸ್ವಾತಂತ್ರ್ಯ ಎಂಬುದು ಸಿಕ್ಕು ಅರ್ಧಶತಮಾನವೇ ಕಳೆದು ಹೋದರೂ ಈ ದೇಶಡಲ್ಲಿ ಇಂದಿಗೂ 'ಚರ್ಚೆ' ಗೊಳಪಡಬೇಕಾದ ವಿಷಯಗಳ ರಾಶಿಯೇ ನಮ್ಮ ಮುಂದಿದೆ : ಬಡತನ, ಅನಕ್ಷರತೆ , ನಿರುದ್ಯೋಗ , ಆರೋಗ್ಯರಕ್ಷಣೆ ಮುಂ. ಆದರೆ ವಾಜಪೇಯಿ ಅವರ ಆದ್ಯತಾ ಪಟ್ಟಿಯೇ ಬೇರೆ . ಅವರನ್ನೇನೂ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗಿಲ್ಲ ಎಂದ (ಸೆಮಿನಾರಿನ ಅಧ್ಯಕ್ಷತೆ ವಹಿಸಿದ್ದ) ಪ್ರೊ . ಎಸ್ . ಎ . ಬಾರಿ ಅವರು ಪ್ರಧಾನಿ ಅವರ ಮತ್ತೊಂದು "ಅದ್ಭುತ "ಪ್ರಸ್ತಾವನೆಯತ್ತ ಸಭಿಕರ ಗಮನ ಸೆಳೆದರು . ಅದು, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗಾಗಿ ಜೀವವಿಮಾ ಯೋಜನೆ .(ರೇಪ್ ವಿಕ್ಟಿಮ್ ಇನ್ಸುರನ್ಸ್ ಪಾಲಿಸಿ .) ಅಂದರೆ : ಹೆಣ್ಣು ಮಗು ಹುಟ್ಟಿದೊಡನೆ ಪಾಲಕರು ಅವಳಿಗಾಗಿ ವಿಮಾಕಂತು ತುಂಬಲು ಪ್ರಾರಂಭಿಸ ಬೇಕು!'ಅತ್ಯಾಚಾರ' ಕ್ಕೆ ಒಳಗಾದರೆ 'ಹಣ' ಸಿಗುತ್ತದಲ್ಲ! ಬಡವರಿಗೆ ಪ್ರಲೋಭನೆ, ಶ್ರೀಮಂತರಿಗೆ ಪ್ರಚೋದನೆ .

3

ಇದು ನಮ್ಮ 'ರಾಷ್ಟ್ರೀಯ' ನಾಯಕರ ವಿಚಾರ ಲಹರಿ . ಹೇಗಿದೆ ?

*

ಅನೇಕ ಗೊಂದಲಗಳಿರುವ ನಮ್ಮ ಬದುಕಿನ ವಿನ್ಯಾಸದಲ್ಲಿ ನಮ್ಮ 'ಭಾಷೆ' ಯಲ್ಲೂ ಗೊಂದಲಗಳಿರುವುದು ಸಹಜ .' ಮತಾಂತರ ' ಎಂಬುದು ಧಾರ್ಮಿಕ ನಂಬಿಕೆಯ ಬದಲಾವಣೆಗೆ ನಾವು ಕನ್ನಡದಲ್ಲಿ ಬಳಸುತ್ತಿರುವ ಶಬ್ದ .(ರಿಲಿಜಸ್ ಕನ್‌ವರ್ಜನ್) ಆದರೆ ಆಡುಮಾತಿನಲ್ಲಿ 'ಮತ' ಎಂಬುದಕ್ಕೆ ಧರ್ಮ ,ಕೋಮು, ಜಾತಿ , ಎಂಬ ಅರ್ಥವೂ ಇದೆ. ಈ ಶಬ್ದಕ್ಕೆ ಇರುವ 'ಅಭಿಪ್ರಾಯ' ಎಂಬರ್ಥದ ಹಿನ್ನೆಲೆಯಲ್ಲಿ , ನಮ್ಮ ವಿಮರ್ಶಾ ಕ್ಷೇತ್ರದಲ್ಲಿ ಅನೇಕರು ಆಗಿಂದಾಗ ಮಾಡುವ ಮತಾಂತರ ಕುತೂಹಲಕಾರಿಯಾಗಿದೆ . ಸಾಗರದ ಜಗತ್‌ಪ್ರಸಿದ್ಧ ವಿಮರ್ಶಕರೊಬ್ಬರು ಕೃತಿಯೊಂದನ್ನು ಹೊಗಳಿ ಬರೆದ ನಂತರ, ಕೃತಿಕಾರನ 'ಮತ' (ಜಾತಿ)ದ ಮಾಹಿತಿ ದೊರಕಿತಂತೆ . ಆಗ ಅವರು ಆ ಕೃತಿಯ ಬಗ್ಗೆ ತಮ್ಮ 'ಮತ'(ಅಭಿಪ್ರಾಯ) ವನ್ನು ಬದಲಿಸಿದರಂತೆ . ಸಾಹಿತಿಯ ಜಾತಿ - ಕುಲ- ಧರ್ಮ , ಸ್ಥಾನ - ಮಾನ , ಪುರಸ್ಕಾರ - ಪ್ರಶಸ್ತಿಗಳಿಗನುಗುಣವಾಗಿ ನಮ್ಮ ಪ್ರಸಿದ್ಧ ವಿಮರ್ಶಕರನೇಕರು ಆಗಾಗ ಇಂಥ ' ಮತಾಂತರ 'ಮಾಡುತ್ತಾರೆ - ಮರುಪರಿಶೀಲನೆ, ಪುನರ್ ಮೌಲ್ಯೀಕರಣಗಳ ಹೆಸರಿನಲ್ಲಿ !

'ಮತಾಂತರ' "ಅಂತರ" ದಲ್ಲಿಯ ಕೂಡ ಇದ್ದುದನ್ನು ತೊರೆದು ಇನ್ನೊಂದರತ್ತ ತೆರಳುವದು ಎಂಬ ಅರ್ಥ ಹೊಂದಿದೆ : ದೇಶಾಂತರ , ಪಕ್ಷಾಂತರ ಮುಂ. (' ಗಂಡಾಂತರ ' ವನ್ನು ಕೂಡ , ಬೇರೆ ' ಗಂಡ ' ನ್ನು ಅಥವಾ ' ಗಂಡ 'ನನ್ನು ಅರಸಿಕೊಂಡು ಹೊಗುವುದೇ , ಎಂದು ಕಿಡಿಗೇಡಿಗಳು ಅರ್ಥೈಸಬಹುದು.)

ಇಂಥ ಮತಾಂತರಗಳ ಸಂದರ್ಭಗಳೇನು, ಪ್ರಚೋದನೆಗಳೇನು , ಪರಿಣಾಮಗಳೇನು - ಇತ್ಯಾದಿ ಆಯಾಮಗಳ ಬಗ್ಗೆ ಸೆಮಿನಾರಿನಲ್ಲಿ ತುಂಬ ಗಂಭೀರವಾಗಿ ಚರ್ಚೆಯಾದದ್ದು , ಕೃಷ್ಣಪ್ಪನವರ ನೆನಪಿನ ಸುತ್ತ ಮುತ್ತ ಹಮ್ಮಿಕೊಂಡ ಕಾರ್ಯಕ್ರಮಗಳ ಅರ್ಥವಂತಿಕೆಗೆ ಸಾಕ್ಷಿಯಾಗಿತ್ತು .

ಪ್ರಸ್ತಾವನೆ ಮಾಡಿದವರು ಕುವೆಂಪು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ನೊ . ಸಂ . ತಿಮ್ಮೇಗೌಡರು (ನೊ ಸಂ ತಿ.) . ಮತಾಂತರ ಎಂಬುದು ಇತಿಹಾಸದುದ್ದಕ್ಕೂ ನಡೆದುಕೊಂಡೇ ಬಂದಿರುವ ನಿರಂತರ ಪ್ರಕ್ರಿಯೆ ಎಂದು ಗುರುತಿಸಿದ ಅವರು , ಹೊರಗಿನಿಂದ ನಮ್ಮ ದೇಶಕ್ಕೆ ಬಂದ ಆರ್ಯ

ಜನಾಂಗದ ವೈದಿಕ ಧರ್ಮ ಸ್ಥಳೀಯ ಬುಡಕಟ್ಟುಗಳ ಸಂಸ್ಕೃತಿಗಳನ್ನು ನಾಶ ಮಾಡಿ ಶ್ರೇಣೀಕರಣದ ಚಾತುರ್ವರ್ಣ ಪದ್ಧತಿಯನ್ನು ಹೇರಿದ್ದು ; ಅದನ್ನು ವಿರೋಧಿಸಿ ತಲೆ ಎತ್ತಿದ ಜೈನ , ಬೌದ್ಧ ಧರ್ಮಗಳು ಎಂಟುನೂರು ವರ್ಷ ಚಾಲ್ತಿಯಲ್ಲಿದ್ದರೂ ಮತ್ತೆ ನಾಗಾರ್ಜುನ ಕೊಂಡದಲ್ಲಿ ಬಲಿಯಾಗಿ ವೈದಿಕಶಾಹಿ ವಿಜೃಂಭಿಸಿದ್ದು; ೧೨ ನೇ ಶತಮಾನದ ವೀರಶೈವ ಧರ್ಮ ಬರಬರುತ್ತ ಬ್ರಾಹ್ಮಣೀಕರಣ ಗೊಂಡದ್ದು; ದರ್ಗಾ ಸಂಸ್ಕೃತಿಯ ಮೂಲಕ ಭಾರತೀಕರಣಗೊಂಡ ಇಸ್ಲಾಂ ಧರ್ಮವು 'ಹಿಂದೂ' ಕಣ್ಣಿನಲ್ಲಿ ಪರಧರ್ಮವಾಗಿಯೇ ಉಳಿದು ಡಿಸೆಂಬರ್ ಆರ ರಂದು ಬಾಬ್ರಿ ಮಸೀದಿ ಧ್ವಂಸಗೊಂಡಿದ್ದು;ಸಮನ್ವಯ ದ ಸಂಕೇತವಾಗಿರುವ ಕರ್ನಾಟಕದ ಬಾಬಾಬುಡನ್‌ಗಿರಿ ವಿವಾದದ ಸ್ಥಳವಾಗಿದ್ದು - ಹೀಗೆ ಇತಿಹಾಸದ ಹಾದಿಯಲ್ಲಿ ಸಭಿಕರನ್ನು ಕರೆದೊಯ್ದ ನೊಸಂತಿ , ಹಿಂದು ಎಂಬ ಧರ್ಮದ ಗುಮ್ಮನ ಹೆಸರಿನಲ್ಲಿ ಈ ದೇಶದ ಕ್ರಿಶ್ಚನ್ ಮತ್ತು ಇಸ್ಲಾಂ ಧರ್ಮೀಯರ ಬಲಿಗಾಗಿ ಹಾತೊರೆಯುತ್ತಿರುವವರ ಹುನ್ನಾರಗಳನ್ನು ಯಶಸ್ವಿಯಾಗಿ ಬಯಲಿಗೆಳೆದರು . ತನ್ನ ಆಂತರಿಕ ವೈರುಧ್ಯಗಳನ್ನು , ಅಸಮಾನತೆಯ ಮೂಲ ನೆಲೆಗಳನ್ನು ಎದುರಿಸಲಾರದ ವೈದಿಕ ಧರ್ಮ , ಇತರ ಧರ್ಮಗಳೊಂದಿಗೆ ಹೋರಾಟ ಮಾಡುವುದೇ ನಿಜವಾದ 'ರಾಷ್ಟ್ರ ಪ್ರೇಮ' ಎಂದು ಬಿಂಬಿಸುತ್ತಿರುವುದು ಇಂದಿನ ವಾಸ್ತವದ ವ್ಯಂಗ್ಯವಾಗಿದೆ - ಎಂಬುದು ನೊಸಂತಿ ವಾದದ ತಿರುಳಾಗಿತ್ತು .

*

ತಮ್ಮ ಆಳವಾದ ಅಧ್ಯಯನ ಮತ್ತು ಒಳನೋಟಗಳಿಂದಾಗಿ ಖ್ಯಾತರಾಗಿರುವ ಡಾ.ನಿ. ಮುರಾರಿ ಬಲ್ಲಾಳ ಅವರು 'ಮತಾಂತರ' ದ ವಿಷಯವನ್ನು ಸಮಕಾಲೀನ ಜಾಗತಿಕ ವಿದ್ಯಮಾನಗಳ ಚೌಕಟ್ಟಿನಲ್ಲಿ ಇಟ್ಟು ತಮ್ಮ ವಿಚಾರ ಮಂಡಿಸಿದರು . ಜಾಗತೀಕರಣ , ಉದಾರೀಕರಣ , ಖಾಸಗೀಕರಣಗಳ ಹಂತ ಪ್ರವೇಶಿಸಿರುವ ಇಂದಿನ ಜಗತ್ತಿನಲ್ಲಿ 'ಬಲವಿದ್ದವನೇ ಸರಿ', (ಮೈಟ್ ಇಜ್ ರೈಟ್,- ಸರ್ವೈವಲ್ ಅಫ್ ದ ಫಿಟೆಸ್ಟ್) ಎಂಬ ಸಿದ್ಧಾಂತ ಮುಂಚೂಣಿಗೆ ಬಂದು , ಅವಕಾಶವಿಹೀನ ದುರ್ಬಲರು ಮತ್ತಷ್ಟು ದುರ್ಬಲರಾಗುವ ದುರಂತವನ್ನು ಪ್ರಸ್ತಾಪಿಸಿದ ಬಲ್ಲಾಳರು , ಮತೀಯ ಮೂಲಭೂತವಾದ ಮತ್ತು ಕೋಮುವಾದಗಳು ಇನ್ನೂ ಹೆಚ್ಚು ಬಲಗೊಳ್ಳಲಿವೆ ಎಂಬ ಎಚ್ಚರಿಕೆ ಇತ್ತರು .

ನಂಬಿಕೆ (ಫೇಥ್) ಎನ್ನುವುದು ಸಾರ್ವತ್ರಿಕ ಮೌಲ್ಯವಲ್ಲ. ನಂಬಿಕೆಯ ಸ್ವಾತಂತ್ರ್ಯವೇ ಎಲ್ಲ ಸ್ವಾತಂತ್ರ್ಯಗಳ ಅಸ್ತಿಭಾರ . ನಂಬಿಕೆ ಬದಲಿಸುವ ಹಕ್ಕು ನಿಷಿದ್ಧವೂ ಅಲ್ಲ;

ತನ್ನ ನಂಬಿಕೆಯ ಶ್ರೇಷ್ಠತೆಯ ಬಗ್ಗೆ ಜಾಹೀರಾತು ಮಾಡುವುದು , ಪುಸಲಾಯಿಸುವುದು ಅಪರಾಧವೂ ಅಲ್ಲ- ಎಂದು ಸ್ಪಷ್ಟಪಡಿಸಿದ ಬಲ್ಲಾಳರು, 'ಮತಾಂತರದ' ಚರ್ಚೆ ಹುಟ್ಟುಹಾಕಿದ ಚರ್ಚೆಯೇ ಹೊರತು ಸಹಜವಾದ, ಅನಿವಾರ್ಯವಾದ ಚರ್ಚೆಯಲ್ಲ ಎಂದು ಸ್ಪಷ್ಟಪಡಿಸಿದರು .

ಮತಾಂತರ ಎಂಬುದಕ್ಕೆ ಸಾಮಾಜಿಕ , ಆರ್ಥಿಕ , ಸಾಂಸ್ಕೃತಿಕ ಸಂದರ್ಭಗಳ ಹಿನ್ನೆಲೆ ಇರುತ್ತದೆ. ಮೇಲುವರ್ಗದವರು, ಕೂಡ -(ಉದಾಹರಣೆಗೆ ಬ್ರಾಹ್ಮಣರು ವೀರಶೈವರು) - ಹೊಸ ಆರ್ಥಿಕ ಅವಕಾಶಗಳಿಗಾಗಿ , ರಾಜಕೀಯ ಅಧಿಕಾರಕ್ಕಾಗಿ ಮತ್ತು 'ಶಿಷ್ಟ' ಸಂಸ್ಕೃತಿಯ ಪ್ರತಿಷ್ಠೆಗಾಗಿ , ಬ್ರಿಟಿಶ್ ಆಳರಸರ ಸಾನ್ನಿಧ್ಯಕ್ಕಾಗಿ ಕ್ರಿಶ್ಚನ್ ಧರ್ಮ ಸ್ವೀಕರಿಸಿದ ಪ್ರಸಂಗಗಳಿವೆ.ಆದರೆ ಇಂಡಿಯಾ ದೇಶದ ಕೆಳವರ್ಗದ ದಲಿತರು ಮತ್ತು ಹಿಂದುಳಿದವರು ಬೇರೆಬೇರೆ ಕಾಲ ಘಟ್ಟಗಳಲ್ಲಿ ಮತಾಂತರ ಹೊಂದಿದ್ದು : ಬೆಳಗು ಹರಿಯುವುದರೊಳಗೆ ತಮ್ಮ ಬಡತನ ಹೋದೀತು , ತಮಗೂ ಅಧಿಕಾರದಲ್ಲಿ ಪಾಲು ಸಿಕ್ಕೀತು ಎಂಬ ಭ್ರಮೆಯಿಲ್ಲ; ತಮ್ಮನ್ನು 'ಮನುಷ್ಯ' ರನ್ನಾಗಿ ಪರಿಗಣಿಸದ ವೈದಿಕ ಧರ್ಮದ ಸೆರೆಮನೆಗಳಿಂದ ಪರಾರಿಯಾಗಿ ಹೊರಗೆ ಪ್ರೀತಿ , ವಿಶ್ವಾಸ , ಸಹೋದರತ್ವ , ಸಮಾನತೆಗಳ ಚೂರು ಗಾಳಿಯನ್ನಾದರೂ ಕುಡಿದೇವು ಎಂಬ ಪ್ರಾಮಾಣಿಕ ನಂಬಿಕೆಯಿಂದ .

ಮತಾಂತರದ ಪ್ರಯತ್ನಗಳು ಶೋಷಣೆಯ ವಿರುದ್ಧದ ಪ್ರತಿಭಟನೆಗಳು; ಪ್ರಧಾನ ಸಂಸ್ಕೃತಿಯ ಮೇಲೆ ಮಾಡಲಾದ 'ಟಿಪ್ಪಣಿ' ಗಳು (ಸ್ಟೇಟ್‌ಮೆಂಟ್ಸ್) ಇಂಥ 'ಅರಿವು' ಮೂಡಿದಾಗ ಮಾತ್ರ ಹಿಂದೂ ಧರ್ಮದ 'ರಿಪೇರಿ' ಸಾಧ್ಯ. ಈ ಧರ್ಮ ಏಕಶಿಲಾಕೃತಿಯಂಥ ,ಮೊನೊಲಿಥಿಕ್ ಧರ್ಮವಾಗಿರದೆ , ಅದರ ಒಡಲಲ್ಲೂ ಪರಿವರ್ತನೇಯ ಅವಕಾಶಗಳಿವೆ - ಎಂದು ಬಲವಾಗಿ ಪ್ರತಿಪಾದಿಸಿದ ಮುರಾರಿ ಬಲ್ಲಾಳ ಅವರು , "ಆಧ್ಯಾತ್ಮಿಕತೆ "(ರಿಲಿಜಿಯಾಸಿಟಿ) ಮತ್ತು 'ಧರ್ಮ' (ರಿಲಿಜನ್)ಗಳ ವ್ಯತ್ಯಾಸ ಸ್ಪಷ್ಟಪಡಿಸಿದರು ಉಪನಿಷತ್‌ಗಳು ಹೇಳುವುದು ಪ್ರೀತಿ, ದಯೆ , ನ್ಯಾಯ , ಮುಂತಾದ ಸಾರ್ವತ್ರಿಕ ಮೌಲ್ಯಗಳ ಆಧ್ಯತ್ಮಿಕತೆಯನ್ನು; ಅನಂತರ ಧರ್ಮ, ಮತ , ಕೋಮುಗಳನ್ನು ತಂದವರು ಮುಲ್ಲಾಗಳು , ಸ್ವಾಮಿಗಳು, ಪಾದ್ರಿಗಳು . ಇಂಥ ಆಧ್ಯಾತ್ಮಿಕತೆಯ ಬಗ್ಗೆ ವಾದಿಸುವವರನ್ನು ಕೆಲವು ಒಣ - ವೈಚಾರಿಕರು (ಡ್ರಾಯರ್‍ಯಾಶನಲಿಸ್ಟ) ಸಂಸ್ಕೃತಿಯ ಪುನರ್ ವ್ಯಾಖ್ಯಾನಕಾರರೆಂದೂ ,ಪ್ರತಿಗಾಮಿಗಳೆಂದೂ ದೂಷಿಸುವುದು ಆತಂಕದ ವಿಷಯ ಎಂದರವರು . ಇದರಿಂದಾಗಿ ಮೂಲಭೂತವಾದಿಗಳ ವಾದಕ್ಕೇ ಪುಷ್ಟಿ

ದೊರೆಯುತ್ತದೆ ಎಂಬ ಸೂಕ್ಷ್ಮವನ್ನು ಬಲ್ಲಾಳರು ಸಭೆಯ ಮುಂದಿಟ್ಟರು .

*

ಬಂಡಾಯ ಸಾಹಿತ್ಯದ ಚಳುವಳಿಯ ಪರಿಣಾಮ : ದಲಿತರು, ಮಹಿಳೆಯರು , ಮುಸ್ಲಿಮರು ಅದುಮಿಟ್ಟುಕೊಂಡ ಅನುಭವಗಳನ್ನು ಸಹಜವಾಗಿ ಇತರರೊಂದಿಗೆ ಹಂಚಿಕೊಳ್ಳುವ ವಾತಾವರಣದ ಸೃಷ್ಟಿ . ಅಕಬರ್ ಅಲಿ , ನಿಸಾರ , ಸನದಿ ಅವರಿಗಿಂತ ತೀರ ಭಿನ್ನವಾಗಿ, ಮುಕ್ತವಾಗಿ ಬರೆಯಲು ಪ್ರಾರಂಭಿಸಿದ , ಎಂಬತ್ತರ ದಶಕದ ಮುಸ್ಲಿಂ ಸಾಹಿತಿಗಳಲ್ಲಿ ಸಾರಾ ಅಬೂಬಕರ ಮತ್ತು ಬಾನು ಮುಷ್ತಾಕ್ ಪ್ರಮುಖರು . ಇಂಡಿಯಾದ ಸಂದರ್ಭದಲ್ಲಿ ಇವರು 'ಮುಸ್ಲಿಮ' ರಾಗಿ 'ಅನ್ಯ'ರು; 'ಮಹಿಳೆ' ಯಾಗಿ 'ದಲಿತ ' ರು .

ಬಾನು ಅವರ ಬರಹಗಳನ್ನು ಖಚಿತವಾಗಿ ರೂಪಿಸಿದ ಅವರ ವೈಚಾರಿಕತೆ , ಶಿವಮೊಗ್ಗೆಯ ಸೆಮಿನಾರಿನಲ್ಲಿ ಅವರು ಮಂಡಿಸಿದ ವಿಚಾರಗಳಲ್ಲಿ , ಅಭಿವ್ಯಕ್ತಿಯ ಸ್ಪಷ್ಟತೆಯಲ್ಲಿ ಒಡೆದು ಕಾಣುವಂತಿತ್ತು . "ನಾನು ಹಿಂದೂ ಧರ್ಮ ಎಂದು ಇಡಿಯಾಗಿ ಪ್ರಸ್ತಾಪಿಸುವುದಿಲ್ಲ; ಅದು ಇಡಿಯಾದ ಧರ್ಮವೂ ಅಲ್ಲ. ನಾನು ಪ್ರತ್ಯೇಕಿಸಿ ಹೇಳುವುದು ಹಿಂದೂ ಪುರೋಹಿತವಾದಿ ವರ್ಗವನ್ನು" - ಎಂದು ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿದರು ಬಾನು . ಮತಾಂತರ ಎಂಬುದು ಕೋಮುವಾದ ಎಂಬ ಮಹಾ ವೃಕ್ಷದ ಒಂದು ಟೊಂಗೆ ಮಾತ್ರ . ಅಸಮಾನತೆ,ಶೋಷಣೆ , ದಬ್ಬಾಳಿಕೆಯನ್ನು ಗರ್ಭದಲ್ಲಿಯೇ ಧರಿಸಿಕೊಂಡ 'ಧರ್ಮ' ವನ್ನು ತ್ಯಜಿಸಿ ಮತಾಂತರದ ಮೂಲಕ ಹೊರಗೆ ಹೋಗಲು ಯಾವುದೇ ಬಾಹ್ಯ ಶಕ್ತಿಯ ಬಲಾತ್ಕಾರ , ಆಮಿಷ , ಪುಸಲಾಯಿಸುವಿಕೆ ಬೇಕಾಗಿಲ್ಲ. ಪ್ರಭುತ್ವ, ರಾಜಕಾರಣ ಮತ್ತು ಧರ್ಮಗಳ ನಗ್ನ ನರ್ತನ ನಡೆದಿದ್ದು, ಈಗ ಹಿಂದೂಪುರೋಹಿತಶಾಹಿ ತನ್ನ ಆತ್ಮ ವಿಹೀನತೆಯ ಬಗ್ಗೆ ಆತ್ಮವಿಶ್ಲೇಷಣೆ ಮಾಡಿಕೊಳ್ಳಬೇಕು ಎಂದು ಬಾನು ಸೂಚನೆ .

ಇಂಡಿಯಾದ ಮಿಸ್ಲಿಮರ ಮೇಲೆ ದೊಡ್ಡ ಆರೋಪ ಪಟ್ಟಿ ಯೇ ಇದೆ. ಅವರ ಮೇಲೆ ಹಲ್ಲೆ ನಡೆದೇ ಇದೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಬೆರೆತು ಹೋಗಿರುವ ಕ್ರಿಶ್ಚನ್ ಸಮುದಾಯದ ಮೇಲೆ ,ಯಾವುದೇ ಆರೋಪ ಪಟ್ಟಿ ಇಲ್ಲದಿದ್ದರೂ , ಈಗ ಯಾಕೆ ದಬ್ಬಾಳಿಕೆ ಪ್ರಾರಂಭವಾಗಿದೆ ? ಇದೊಂದು ಮಾರ್ಮಿಕ ಪ್ರಶ್ನೆಯೇ.

ಇಂಡಿಯಾ ದೇಶವನ್ನು ಮುಸ್ಲಿಂ ದೊರೆಗಳು ಐದುನೂರು ವರ್ಷ ಆಳಿದರು .

ಅನಂತರ ಬಂದ ಬ್ರಿಟಿಷರು ಆಳಿದ್ದು ಮೂರುನೂರು ವರ್ಷ. ಇವರಿಬ್ಬರೂ ಮನಸ್ಸು ಮಾಡಿದ್ದರೆ ಎಂಟು ಶತಮಾನಗಳ ಬೀಸಿನಲ್ಲಿ ಇಡೀ ದೇಶವನ್ನು ಹಿಂದೂ ಅಲ್ಲದ ಬೇರೊಂದು ದೇಶವನ್ನಾಗಿ ಮಾಡಬಹುದಿತ್ತಲ್ಲವೆ? ಹಾಗೆ ಆಗಲಿಲ್ಲ. ಆದುದರಿಂದ ಮತಾಂತರದ ಮೂಲ ಪ್ರೇರಣೆ ಹಿಂದೂ ಧರ್ಮದ ಶೋಷಣೆ ಮತ್ತು ನಿರಾಕರಣೆ ಗಳಲ್ಲಿ ಇದೆಯೇ ಹೊರತು , ಪರಧರ್ಮಗಳ ಆಮಿಷ ಅಥವಾ ಬಲಾತ್ಕಾರಗಳಲ್ಲಿ ಇಲ್ಲ .

*

ಸೆಮಿನಾರಿನುದ್ದಕ್ಕೂ ಹರಿದು ಬಂದ ಎಳೆಗಳನ್ನು ಹೊಸೆದು ಹಗ್ಗ ಮಾಡಿದವರು ಅಧ್ಯಕ್ಷತೆ ವಹಿಸಿದ್ದ ಪ್ರೊ ಎಸ್. ಎ .ಬಾರಿ ಅವರು . ಕುವೆಂಪು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರು . ಮತದ ಆಯ್ಕೆ ವೈಯಕ್ತಿಕ ವಿಷಯವೇ ಹೊರತು , ಬೀದಿಯ ವಿಷಯವಲ್ಲ . ಅನೇಕ ಜನಾಂಗಗಳು ನಮ್ಮ ದೇಶಕ್ಕೆ ಸಾವಿರಾರು ವರ್ಷಗಳಿಂದ ಬಂದಿವೆ . ಈಗ ಜನಾಂಗೀಯ ಶುದ್ಧತೆ (ಪ್ಯೂರಿಟಿ ಆಫ್ ರೇಸ್) ಎಂಬುದು ಉಳಿದಿಲ್ಲ . ನಮ್ಮದೆಲ್ಲ ಮಿಶ್ರ ಜನಾಂಗ . ಆದರೆ ಈ ಅಂಶವನ್ನು ಮುಂದು ಮಾಡಿಯೇ ಇವರು ನಮ್ಮವರು , ಅವರು ಅನ್ಯರು ಎಂದು ಬೇರೆಬೇರೆ ಮಾಡಲಾಗುತ್ತಿದೆ . ಇದರಲ್ಲಿಯೂ ಆತ್ಮವಂಚನೆ ಹಿಪಾಕ್ರಿಸಿ ಪರಧರ್ಮೀಯರ ಮೇಲೆ ಎತ್ತಿ ಕಟ್ಟುವಾಗ " ನಾವೆಲ್ಲ ಹಿಂದೂ ನಾವು ನೀವು ಒಂದು ". ಆದರೆ ಮೀಸಲಾತಿಯ ಪ್ರಶ್ನೆ ಬಂದಾಗ ನಾವು ನೀವು ಬೇರೆ ನಿಮಗ್ಯಾಕೆ ಮೀಸಲಾತಿ ?

ನಾನು ಮೊದಲಲ್ಲಿಯೇ ಪ್ರಸ್ತಾಪಿಸಿದ ಒಂದು ಮಾತನ್ನು ಸಮರ್ಥಿಸುತ್ತ ತಮ್ಮ ಸ್ವಂತ ಅನುಭವವನ್ನು ಸ್ವಾರಸ್ಯಕರವಾಗಿ ನಿರೂಪಿಸಿದರು ಬಾರಿ . ದೇಶ ವಿದೇಶಗಳ ಅನೇಕ ಯುನಿವರ್ಸಿಟಿಗಳಿಗೆ ಹೋಗಿಬರುವ ಪ್ರಸಂಗ ಅವರಿಗೆ . ಹೋದಲ್ಲೆಲ್ಲ ಅವರ ಹೆಸರಿನ ಬಗ್ಗೇಯೆ ಎಲ್ಲರ ಗುಮಾನಿ. ಬಾರಿ ? ಇದೆಂಥಾ ಹೆಸರು? ಯಾರ ಪೈಕಿ ಈತ ? ಯಾವ ಜಾತಿ , ಯಾವ ಕುಲ , ಯಾವ ಧರ್ಮ? ಉತ್ತರ ಪಡೆಯಲು ಅದೇ ಪರೋಕ್ಷ ಬೇಹುಗಾರಿಕೆ . ಎಸ್ .ಎ .ಬಾರಿ . ಎಸ್ ಅಂದರೆ ಏನಿರಬಹುದು ? ಸತ್ಯನಾರಾಯಣ ,ಸ್ಯಾಮುಯಲ್.....?

ಬಾರಿ ಹೇಳುತ್ತಾರಂತೆ : ಎಸ್ ಫಾರ್ ಸೈಯ್ಯದ್ .
ಕೇಳಿದವರು ಸಮಾಧಾನದ ಉಸಿರು ಬಿಟ್ಟು : ಓ, ಹೀಗೋ ?

ಮುಂದೆ ಎಲ್ಲ ವ್ಯವಹಾರ ಸರಳ . ಪ್ರೊ . ಬಾರಿ ಮನನೊಂದು ನುಡಿದರು : ಇಂಥ ಸಂದಿಗ್ಧ ಎದುರಾಗುವುದು ಇಂಡಿಯಾ ದೇಶದ ಯುನಿವರ್ಸಿಟಿಗಳಲ್ಲಿ ಮಾತ್ರ . ವಿದೇಶಗಳಲ್ಲಿ ಇಂಥ ಅನುಭವ ಒದಗಿಲ್ಲ .

ಮೇರಾ ಭಾರತ ಮಹಾನ್ !

ಪ್ರಾಥಮಿಕ ಶಿಕ್ಷಣ ಮಾಧ್ಯಮ *

ಮಧ್ಯಂತರ ವರದಿ

ಪ್ರಸ್ತಾವನೆ

ಶಿಕ್ಷಣದಲ್ಲಿ ಮಾಧ್ಯಮದ ಪ್ರಶ್ನೆ ಮುಖ್ಯವಾದುದು ಮತ್ತು ಮೂಲಭೂತವಾದುದು. ಶೈಕ್ಷಣಿಕವಾಗಿ ಸ್ವೀಕೃತವಾದ ವಿಚಾರವೆಂದರೆ ತಾಯ್ನುಡಿ ಅಥವಾ ಮಗುವಿನ ಪರಿಸರದ ಭಾಷೆಯೇ ಶಿಕ್ಷಣ ಮಾಧ್ಯಮಕ್ಕೆ ಸೂಕ್ತ. ಇದೇ ಮಗುವಿನ ಸಹಜ ಚಿಂತನೆಯ, ಕಲ್ಪನೆಯ ಭಾಷೆ. ಯಾವುದೇ ಭಾಷೆ ಅರ್ಥ ಗ್ರಹಿಕೆಗಾಗಿ ತಕ್ಕುದಾದುದಾಗಬಹುದಾದರೂ ನಾವು ಬೆಳೆದು ಬಂದಿರುವ ಭಾಷೆ ಹಾಗೂ ಅದರ ಪರಿಸರವೇ ನಮ್ಮ ಚಿಂತನೆ ಹಾಗೂ ಅಭಿವ್ಯಕ್ತಿಗೆ ಹೇಳಿ ಮಾಡಿಸಿದ್ದು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಸ್ವಾತಂತ್ರ್ಯ ಪೂರ್ವದಲ್ಲೇ ಶಾಲೆಗಳಲ್ಲಿ ಕನ್ನಡ ಬಳಕೆಯಲ್ಲಿದ್ದಿತು. ಡೆಪ್ಯೂಟಿ ಚೆನ್ನಬಸಪ್ಪ, ಉತ್ತಂಗಿ ಚೆನ್ನಪ್ಪ ಮುಂತಾದ ವಿದ್ವಾಂಸರು ಕನ್ನಡ ಮಾಧ್ಯಮ ಶಾಲೆಗಳ ಪ್ರಾರಂಭಕ್ಕೆ ಹಾಗೂ ಏಳಿಗೆಗೆ ಕಾರಣೀಭೂತರಾದರು. ಸುಮಾರು ೮೦ ವರ್ಷಗಳ ಹಿಂದೆಯೇ ಕರ್ನಾಟಕದ ಪ್ರೌಢ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಜಾರಿಗೆ ಬಂದಿತು. ಶಿಕ್ಷಣ ಇಲಾಖೆಯ ಆಗಿನ ಮುಖ್ಯಾಧಿಕಾರಿಯಾದ ಶ್ರೀ ಎನ್.ಎಸ್.ಸುಬ್ಬರಾವ್ ಈ ನಿಯಮವನ್ನು ಜಾರಿಗೊಳಿಸಿದರು.

ಆದರೆ, ಸ್ವಾತಂತ್ರ್ಯಾನಂತರ ಕೆಲವೊಂದು ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸುವ ಪ್ರವೃತ್ತಿ ಆರಂಭವಾಗಿ [illegible] ವ್ಯಾಪಕವಾಗುತ್ತಾ ಬಂದಿತು. ಈ ಹಿನ್ನೆಲೆಯಲ್ಲಿ [illegible] ಮಾಡಬೇಕೆಂಬ ಒತ್ತಾಯ ಕೇಳಬರತೊಡಗಿತು. [illegible] ಅವರ ಅಧ್ಯಕ್ಷತೆಯ ಸಮಿತಿಯು ನೀಡಿದ ವರದಿ [illegible] ಮಟ್ಟದಲ್ಲಿ ಚಿಂತನೆಗೆ ಹಚ್ಚಿತು.

ವಾಸ್ತವವಾಗಿ, ಅದು ಪ್ರೌಢ ಶಾಲೆಯಲ್ಲಿ [illegible] ಬೇಕೆಂಬ ಬಗ್ಗೆ

---

* ಕನ್ನಡ ಅಭಿವೃದ್ಧಿ ಪ್ರಾಧಿಕಾರ [illegible] ೧೯೯೯ ರಂದು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿ.

ನೀಡಿದ ವರದಿಯಾದರೂ ಅದರಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗಬೇಕೆಂದು ಪ್ರತಿಪಾದಿಸಿ, ಅದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಕಲಿಯುವವರೆಲ್ಲರಿಗೂ ಕನ್ನಡದಲ್ಲಿ ಸಮಾನ ಪ್ರಭುತ್ವ ಇರಬೇಕೆಂದು ಕನ್ನಡಕ್ಕೆ ಪ್ರಥಮ ಭಾಷೆಯ ಸ್ಥಾನ ನೀಡಿ ಭಾಷಾ ಬೋಧನೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ನೀಡಲಾಯಿತು.

ಇದನ್ನು ಆಧರಿಸಿ ದಿನಾಂಕ ೩೦ ನೇ ಏಪ್ರಿಲ್ ೧೯೮೨ ರಂದು ಪ್ರೌಢ ಶಾಲಾ ಹಂತದಲ್ಲಿ ಕನ್ನಡವು ಪ್ರಥಮ ಭಾಷೆಯಾಗಬೇಕೆಂದು ನಿಗದಿಪಡಿಸಿ , ಸರ್ಕಾರವು ಆದೇಶವೊಂದನ್ನು ಹೊರಡಿಸಿತು.

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಆದೇಶವನ್ನು ಕೆಲವರು ಪ್ರಶ್ನಿಸಿದರು. ಆಗ ನ್ಯಾಯಾಲಯವು ಪ್ರಾಥಮಿಕ ಶಿಕ್ಷಣದ ಸಾಮಾನ್ಯ ಮಾದರಿಯಂತೆ ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸಿ ಪ್ರಾಥಮಿಕ ತರಗತಿಯಿಂದ ಎರಡು ಭಾಷೆಗಳ ಪೈಕಿ ಒಂದನ್ನಾಗಿ ಕನ್ನಡವನ್ನು ಬೋಧಿಸಲು ಮತ್ತು ಪ್ರೌಢಶಾಲಾ ಹಂತದಲ್ಲಿ ಕನ್ನಡವನ್ನು ಮೂರು ಭಾಷೆಗಳ ಪೈಕಿ ಒಂದು ಕಡ್ಡಾಯ ಭಾಷೆಯನ್ನಾಗಿ ಅಳವಡಿಸಲು ಸೂಕ್ತ ಆದೇಶ ಅಥವಾ ನಿಯಮವನ್ನು ರೂಪಿಸಿ, ಅದನ್ನು ಕನ್ನಡ ಮಾತೃಭಾಷೆಯಾದ ಎಲ್ಲರಿಗೂ ಮತ್ತು ರಾಜ್ಯದ ಶಾಶ್ವತ ನಿವಾಸಿಗಳಾದ ಮತ್ತು ಶಾಶ್ವತ ನಿವಾಸಿಗಳಾಗುವ ಭಾಷಾ ಅಲ್ಪ ಸಂಖ್ಯಾತರಿಗೂ ಅನ್ವಯಿಸಲು ರಾಜ್ಯ ಸರ್ಕಾರಕ್ಕೆ ಸ್ವಾತಂತ್ರ್ಯ ನೀಡಿತ್ತು.

ಉಚ್ಚ ನ್ಯಾಯಾಲಯದ ಈ ಆದೇಶದ ವಿರುದ್ಧ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಆದರೂ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕಾಯ್ದಿರಿಸಿ ರಾಜ್ಯ ಸರ್ಕಾರವು ದಿನಾಂಕ ೧೯ ನೇ ಜೂನ್ ೧೯೮೯ ರ ಆದೇಶದಲ್ಲಿ ಭಾಷಾ ನೀತಿಯನ್ನು ನಿರೂಪಿಸಿ ಆದೇಶ ಹೊರಡಿಸಿತು.

ಈ ಮಧ್ಯೆ ಸರ್ಕಾರವು ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳ ಸಮಸ್ಯೆ ಮತ್ತು ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ ಮಾಧ್ಯಮ ಹೊಂದುವ ಬಗ್ಗೆ ಪರಿಶೀಲಿಸಿ, ವರದಿ ಸಲ್ಲಿಸಲು ಡಾ. ಹೆಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆ (ಅಂದರೆ ಕನ್ನಡ)ಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಶಿಫಾರಸ್ಸು ಮಾಡಿತು.

ಅದೇ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ ೮ ನೇ ಡಿಸೆಂಬರ್ ೧೯೯೩ ರ ತೀರ್ಪಿನಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಮತ್ತು ಉಚ್ಚ ನ್ಯಾಯಾಲಯದ ಆದೇಶಾನುಸಾರ ಹೊರಡಿಸಿದ ದಿನಾಂಕ ೧೯ ನೇ ಜೂನ್ ೧೯೮೯ ರ ಸರ್ಕಾರಿ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿದಿದೆ. ಮುಂದುವರೆದು ಭಾಷಾ ನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ ಎಂದು ಹಾಗೂ ಇದರಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸಬಾರದು ಎಂದು ತೀರ್ಪಿತ್ತಿದೆ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅನುಸರಿಸಬೇಕಾದ ಭಾಷಾ ನೀತಿಯನ್ನು ಮತ್ತು ಪ್ರಾಥಮಿಕ ಹಂತದಲ್ಲಿ ಅನುಸರಿಸಬೇಕಾದ ಶಿಕ್ಷಣ ಮಾಧ್ಯಮ ನೀತಿಯನ್ನು ಕುರಿತು ಸಮಗ್ರವಾದ ಆದೇಶ ಹೊರಡಿಸುವ ಅಗತ್ಯವಿದೆ. ಆದರಂತೆ ದಿನಾಂಕ ೨೨ ನೇ ಏಪ್ರಿಲ್ ೧೯೯೪ ರ ಆದೇಶದಲ್ಲಿ ಪರಿಷ್ಕೃತ ಭಾಷಾ ನೀತಿಯನ್ನು ಪ್ರಕಟಿಸಲಾಯಿತು. ಭಾಷಾ ನೀತಿಯ ಕೆಲವು ಅಂಶಗಳು ದಿನಾಂಕ ೧೯ ನೇ ಜೂನ್ ೧೯೮೯ ಕ್ಕೆ ಮುಂಚೆ ಪ್ರಾರಂಭಿಸಿದ ಶಾಲೆಗಳಲ್ಲಿ ಅನ್ವಯಿಸುವದಿಲ್ಲವೆಂದು ಆ ಆದೇಶದಲ್ಲಿ ತಿಳಿಸಲಾಗಿತ್ತು. ಈ ನಿರ್ಬಂಧವನ್ನು ತೆಗೆದು ಹಾಕಿ ಭಾಷಾ ನೀತಿಯನ್ನು ಎಲ್ಲಾ ಅಂಗೀಕೃತ ಶಾಲೆಗಳಿಗೂ ಅನ್ವಯಿಸುವ ಅಗತ್ಯವಿದೆಯೆಂದು ಸರ್ಕಾರ ಭಾವಿಸಿ, ೨೯ ನೇ ಏಪ್ರಿಲ್ ೧೯೯೪ ರಂದು ಮತ್ತೊಂದು ಆದೇಶ ಹೊರಡಿಸಿತು.

ಈ ಆದೇಶ ಜಾರಿಗೆ ಬಂದ ನಂತರ ೧೯೮೯ ಕ್ಕೆ ಮುಂಚೆ ಪ್ರಾರಂಭವಾದ ಇಂಗ್ಲೀಷ್ ಮಾಧ್ಯಮ ಶಾಲೆಗಳು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಈ ಆದೇಶವನ್ನು ಪಶ್ನಿಸಿದವು. ಆಗ ರಾಜ್ಯದ ಉಚ್ಚ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಹ್ಯಾದ್ರಿ ಶಿಕ್ಷಣ ಸಂಸ್ಥೆಗೆ ಸಂಬಂಧಪಟ್ಟ ದಾವೆಯಲ್ಲಿ ತೀರ್ಪು ಬರುವವರೆಗೆ ೧೯೮೯ ಕ್ಕೆ ಮುಂಚೆ ಪ್ರಾರಂಭವಾದ ಶಾಲೆಗಳು ಹಿಂದಿನಂತೆಯೇ ಮುಂದುವರೆಯಲು ಅವಕಾಶ ನೀಡಿತು.

ಆದರೆ, ಈ ಆದೇಶ ಜಾರಿಗೆ ಬಂದ ನಂತರ ರಾಜ್ಯಾದ್ಯಂತ ಅಸ್ತಿತ್ವದಲ್ಲಿದ್ದ ಸಾವಿರಾರು ಅನಧಿಕೃತ ಇಂಗ್ಲೀಷ ಮಾಧ್ಯಮ ಶಾಲೆಗಳು ಒಂದರಿಂದ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆ / ಪ್ರಾದೇಶಿಕ ಭಾಷಾ ಮಾಧ್ಯಮವನ್ನು ಜಾರಿಗೆ ತರುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಸರ್ಕಾರದಿಂದ ಮಾನ್ಯತೆ ಪಡೆದವು.

ಆದರೆ, ಈ ಶಾಲೆಗಳು ಇಂಗ್ಲೀಷ್ ಮಾಧ್ಯಮದಲ್ಲೇ ಬಹುತೇಕ ಶಿಕ್ಷಣ ನೀಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಇಂತಹ ಎಲ್ಲಾ ಶಾಲೆಗಳಿಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಸದಾ ಕಾಲ ಭೇಟಿ ನೀಡುತ್ತಲೇ ಇರವುದು ವ್ಯಾವಹಾರಿಕವಾಗಿ ಕಾರ್ಯಸಾಧ್ಯವಿಲ್ಲ, ಜೊತೆಗೆ ಇಲಾಖೆಯ ಸಿಬ್ಬಂದಿ ಭ್ರಷ್ಟರಾಗಿದ್ದರೆ ಇಂತಹ ಶಾಲೆಗಳಿಗೆ ನಿರಾತಂಕ ಪರಿಸ್ಥಿತಿ ಬೇರೆ. ಇದರಿಂದಾಗಿ ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲೇ ಇರಬೇಕೆಂಬ ಸರ್ಕಾರದ ನೀತಿ ಕೇವಲ ಕಾಗದದ ಮೇಲೆ ಉಳಿಯಿತು.

ಇದಲ್ಲದೇ ಪ್ರಾಥಮಿಕ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣ ಎಂಬ ವಿಂಗಡನೆಯನ್ನು ಆಧರಿಸಿ, ಖಾಸಗಿ ಶಾಲೆಗಳಲ್ಲಿ ೫ ನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿಗಳಿಗೆ ಅವಕಾಶ ಕೊಡುವ ನೀತಿಯನ್ನು ಸರ್ಕಾರ ಪ್ರಾರಂಭಿಸಿತು. ಅದರ ವಿಸ್ತರಣೆಗಾಗಿ ಸರ್ಕಾರಿ ಶಾಲೆಗಳಲ್ಲೂ ೧೯೯೮ -೯೯ ನೇ ಸಾಲಿನಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಹೊರಟಿತು.

ಈ ಅವೈಜ್ಞಾನಿಕ ನೀತಿಯ ಬಗ್ಗೆ ನಾಡಿನ ಬುದ್ಧಿಜೀವಿಗಳಿಂದ ವ್ಯಕ್ತವಾದ ಪ್ರತಿಭಟನೆಯ ಹಿನ್ನೆಲೆಯಲ್ಲಿ, ಶೈಕ್ಷಣಿಕ ರಂಗದಲ್ಲಿ ಕನ್ನಡಕ್ಕೆ ಆದ್ಯತೆ ಮತ್ತು ಪ್ರೋತ್ಸಾಹ ಸಿಗುವಂತೆ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಹಾಗೂ ಜವಾಬ್ದಾರಿಯನ್ನು ಕರ್ನಾಟಕ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟ ಹಿನ್ನೆಲೆಯಲ್ಲಿ ಆಗಸ್ಟ್ ೧೧ , ೧೯೯೮ ರಂದು ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕರೆಯಲಾಯಿತು. ಈ ಸಭೆಯಲ್ಲಿ ಸನ್ಮಾನ್ಯ ಸಚಿವರಾದ ಹೆಚ್. ಜಿ. ಗೋವಿಂದೇಗೌಡ ಹಾಗೂ ಬಸವರಾಜ ಪಾಟೀಲ ಅಟ್ಟೂರ್ ಅವರು ಉಪಸ್ಥಿತರಿದ್ದರು.

ಮಾನ್ಯ ಸಚಿವರಾದ ಹೆಚ್. ಜಿ. ಗೋವಿಂದೇಗೌಡರು ಕರ್ನಾಟಕ ರಾಜ್ಯದ ಶೈಕ್ಷಣಿಕ ಕ್ಷೇತ್ರದ ವಿಷಯಗಳಿಗೆ ಸಂಬಂಧಿಸಿದಂತೆ. ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡಲು ಉಚ್ಚ ಮಟ್ಟದ ಶಿಕ್ಷಣ ತಜ್ಞರ ಸಲಹಾ ಸಮಿತಿಯನ್ನು ರಚಿಸಬೇಕೆಂದೂ ಅದರ ಶಿಫಾರಸ್ಸುಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರುವುದೆಂದೂ ಆಶ್ವಾಸನೆ ನೀಡಿದರು.

ಅದರಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ೧೨ ಜನ ಸದಸ್ಯರನ್ನೊಳಗೊಂಡ ಉನ್ನತ ಮಟ್ಟದ ಶಿಕ್ಷಣ ತಜ್ಞರ ಸಲಹಾ ಸಮಿತಿಯೊಂದನ್ನು ಈ ಕೆಳಗಿನಂತೆ ಆಗಸ್ಟ್ ೧೨, ೧೯೯೮ ರಂದು ಅಧಿಕೃತವಾಗಿ ರಚಿಸಲಾಯಿತು.

೧. ಪ್ರೊ. ಚಂದ್ರಶೇಖರ ಪಾಟೀಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು.	ಸಲಹಾ ಸಮಿತಿಯ ಅಧ್ಯಕ್ಷರು.
೨. ಡಾ. ಎಂ.ಐ. ಸವದತ್ತಿ ಯುಜಿಸಿ ಸದಸ್ಯರು ಮತ್ತು ಮಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು	ಸಲಹಾ ಸಮಿತಿಯ ಸದಸ್ಯರು
೩. ಡಾ. ಎಂ.ಎಂ. ಕಲಬುರ್ಗಿ ಕನ್ನಡ ವಿಶ್ವವಿದ್ಯಾಲಯ ಕುಲಪತಿಗಳು, ಹಂಪಿ.	ಸಲಹಾ ಸಮಿತಿಯ ಸದಸ್ಯರು
೪. ಶ್ರೀ ಪ್ರಭಾಕರ ರಾಣೆ ಕರ್ನಾಟಕ ಸರ್ಕಾರದ ಮಾಜಿ ಸಚಿವರು.	ಸಲಹಾ ಸಮಿತಿಯ ಸದಸ್ಯರು
೫. ಶ್ರೀಮತಿ ಬಿ.ಟಿ. ಲಲಿತಾನಾಯಕ್ ಕರ್ನಾಟಕ ಸರ್ಕಾರದ ಮಾಜಿ ಸಚಿವೆ.	ಸಲಹಾ ಸಮಿತಿಯ ಸದಸ್ಯರು

೭. ಡಾ. ಬಿ.ವಿ. ವಿವೇಕ ರೈ. ಸಲಹಾ ಸಮಿತಿಯ ಸದಸ್ಯರು
ಅಧ್ಯಕ್ಷರು ತುಳು ಸಾಹಿತ್ಯ ಅಕಾಡೆಮಿ.

೭. ಡಾ. ಸ.ಜ. ನಾಗಲೋಟಿಮಠ ಸಲಹಾ ಸಮಿತಿಯ ಸದಸ್ಯರು
ಸಂಚಾಲಕರು, ವಿಜ್ಞಾನ ವಸ್ತು ಭಂಡಾರ, ಬೆಳಗಾವಿ.

೮. ಶ್ರೀ ಶಿವಶಂಕರ ಹಿರೇಮಠ ಸಲಹಾ ಸಮಿತಿಯ ಸದಸ್ಯರು
ನಿವೃತ್ತ ಶಿಕ್ಷಣಾಧಿಕಾರಿಗಳು, ಧಾರವಾಡ

೯. ಶ್ರೀ ರಂಜಾನ ದರ್ಗಾ ಸಲಹಾ ಸಮಿತಿಯ ಸದಸ್ಯರು
ಪತ್ರಕರ್ತರು

೧೦. ಪ್ರೊ. ವಿಘ್ನೇಶ ಎನ್. ಭಟ್ ಸಲಹಾ ಸಮಿತಿಯ ಸದಸ್ಯರು
ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ

೧೧. ಶ್ರೀ ಸ. ರ. ಸುದರ್ಶನ ಸಲಹಾ ಸಮಿತಿಯ ಸದಸ್ಯರು
ಕಾರ್ಯದರ್ಶಿ , ಕನ್ನಡ ಕ್ರಿಯಾ ಸಮಿತಿ, ಮೈಸೂರು.

೧೨. ಶ್ರೀಮತಿ ಹೇಮಲತಾ ಮಹಿಷಿ ಸಲಹಾ ಸಮಿತಿಯ ಸದಸ್ಯರು
ನ್ಯಾಯವಾದಿಗಳು.

೧೩. ಶ್ರೀ ಟಿ.ವಿ. ಶ್ರೀನಾಥ ಶಾಸ್ತ್ರಿ ಸಲಹಾ ಸಮಿತಿಯ ಸದಸ್ಯರು
ಪ್ರಧಾನ ಕಾರ್ಯದರ್ಶಿ,
ಕನ್ನಡ ಗಣಕ ಪರಿಷತ್ತು, ಬೆಂಗಳೂರು.

ಈ ಸಮಿತಿಯು ಸಭೆ ಸೇರಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ವರೆಗೆ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಬೋಧನೆಯ ಬಗ್ಗೆ ನಿರ್ದಿಷ್ಟವಾದ ನೀತಿ ಏನಿರಬೇಕೆಂಬ ಬಗ್ಗೆ ವ್ಯಾಪಕವಾಗಿ ಚರ್ಚಿಸಿತು. ಆದರೆ ೧೯೯೯ - ೨೦೦೦ ದ ಸಾಲಿನ ಶೈಕ್ಷಣಿಕ ವರ್ಷವು ಸನಿಹದಲ್ಲಿರುವುದರಿಂದ ಸರ್ಕಾರ ಶೀಘ್ರವಾಗಿ ಶಿಕ್ಷಣ ಹಾಗೂ ಭಾಷಾ ನೀತಿಯನ್ನು ಸ್ಥೂಲವಾಗಿ ಪ್ರಕಟಿಸುವುದರ ಜೊತೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಕಲಿಕೆ ಬಗ್ಗೆ ಸ್ಪಷ್ಟ ಆದೇಶವನ್ನು ಹೊರಡಿಸಬೇಕೆಂಬ ಉದ್ದೇಶದಿಂದ

ಮಧ್ಯಂತರ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತವೆಂದು ತೀರ್ಮಾನಿಸಿ, ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡಿರುತ್ತದೆ.

ಶಿಫಾರಸ್ಸು ೧ : ಕರ್ನಾಟಕ ರಾಜ್ಯ ಸರ್ಕಾರವು ಶಿಕ್ಷಣ ಮಾಧ್ಯಮ ಮತ್ತು ಭಾಷಾ ಬೋಧನೆ ಕುರಿತಂತೆ ಒಂದು ಸ್ಪಷ್ಟವಾದ ಸಮಗ್ರ ನೀತಿಯನ್ನು ಪ್ರಕಟಿಸಬೇಕು. ನಿರ್ದಿಷ್ಟ ಕಾಲಮಿತಿಯೊಳಗೆ (ಹತ್ತು ವರ್ಷಗಳಲ್ಲಿ ಹಂತ ಹಂತವಾಗಿ) ತಾಂತ್ರಿಕ ಶಿಕ್ಷಣವೂ ಸೇರಿದಂತೆ ಸ್ನಾತಕೋತ್ತರ ಮಟ್ಟದವರೆಗೂ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ (ಅಂದರೆ ಕನ್ನಡ) ಯು ಶಿಕ್ಷಣ ಮಾಧ್ಯಮವಾಗಬೇಕು ಎಂಬುದು ಸರ್ಕಾರದ ನೀತಿಯಾಗಬೇಕು.

ವಿವರಣೆ : ಪ್ರಸ್ತುತ ಪ್ರಾಥಮಿಕ ಶಿಕ್ಷಣವು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿರಬೇಕೆಂಬುದು ಸರ್ಕಾರದ ನೀತಿಯಾಗಿದೆ. ಆದರೆ, ಹಿರಿಯ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಮಟ್ಟದವರೆಗೆ ಶಿಕ್ಷಣ ಮಾಧ್ಯಮ ಯಾವುದಿರಬೇಕೆಂಬುದು ಸರ್ಕಾರದ ನೀತಿಯಲ್ಲಿ ಸ್ಪಷ್ಟವಾಗಿಲ್ಲ. ಅದನ್ನು ನಿವಾರಿಸಲು ಮೇಲೆ ಹೇಳಿದಂತೆ ಸರ್ಕಾರ ಮುಂದಿನ ಹತ್ತು ವರ್ಷಗಳಲ್ಲಿ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಲು ಅಗತ್ಯವಾದ ಕ್ರಮಗಳನ್ನು ಅಣಿ ಮಾಡಿದಂತಾಗುತ್ತದೆ.

ಶಿಫಾರಸ್ಸು ೨ : ಈಗಿನಂತೆ ಪ್ರಾಥಮಿಕ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಎಂದು ವಿಂಗಡಣೆ ಮಾಡದೇ, ೧ ರಿಂದ ೭ ನೇ ತರಗತಿಯವರೆಗೆ ಸಮಗ್ರವಾಗಿ ಪ್ರಾಥಮಿಕ ಶಿಕ್ಷಣ ಎಂದು ಪರಿಗಣಿಸಬೇಕು. ಸದ್ಯ ೧ ರಿಂದ ೪ ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಕಡ್ಡಾಯ ಶಿಕ್ಷಣ ಮಾಧ್ಯಮವಾಗಿರಬೇಕೆಂಬುದು ಸರ್ಕಾರದ ಶೈಕ್ಷಣಿಕ ನೀತಿಯಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ(೧೯೯೯ -೨೦೦೦) ಪೂರ್ವ ಪ್ರಾಥಮಿಕವನ್ನೂ ಒಳಗೊಂಡು ೧ ರಿಂದ ೭ ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯ ಕಡ್ಡಾಯ ಶಿಕ್ಷಣ ಮಾಧ್ಯಮವೆಂದು ಘೋಷಿಸಿ, ಆದೇಶ ಹೊರಡಿಸಬೇಕು. ಅಂದರೆ, ಈ ವರೆಗೆ ೧ ರಿಂದ ೪ ನೇ ತರಗತಿಯವರೆಗೆ ಸರ್ಕಾರದ ನೀತಿಯನ್ನು ಒಪ್ಪಿರುವ ಅಂಗೀಕೃತ ಶಾಲೆಗಳು ೧೯೯೯ - ೨೦೦೦ ದ ಸಾಲಿನಿಂದ ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ ೭ ನೇ ತರಗತಿಯವರೆಗೆ ಅದನ್ನು ವಿಸ್ತರಿಸಬೇಕು.

ವಿವರಣೆ : ಪ್ರಸ್ತುತ ಸರ್ಕಾರವು ೧ ರಿಂದ ೪ ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕೆಂದು ೨೯ ನೇ ಏಪ್ರಿಲ್ ೧೯೯೪ ರಂದು ಇಡಿ ೨೮ ಪಿಜಿಸಿ ೯೪ ಸಂಖ್ಯೆಯ ಸರ್ಕಾರಿ ಆದೇಶವನ್ನು ಹೊರಡಿಸಿದೆ. ಆದರೆ, ಈ ನೀತಿಗೆ ಬದ್ಧವಾಗಿರುವುದಾಗಿ ಮುಚ್ಚಳಿಕೆ ಕೊಟ್ಟಿರುವ ಶಾಲೆಗಳೂ ಸೇರಿದಂತೆ ಸಾವಿರಾರು ಶಾಲೆಗಳು ಅನಧಿಕೃತವಾಗಿ ಇಂಗ್ಲೀಷ್ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿವೆ. ಈ ಎಲ್ಲಾ ಶಾಲೆಗಳಿಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಭೇಟಿ ನೀಡುತ್ತಲೇ ಇರವುದು

ವ್ಯಾವಹಾರಿಕವಾಗಿ ಕಾರ್ಯಸಾಧ್ಯವಲ್ಲ.

ಆದ್ದರಿಂದ , ಇಂತಹ ಶಾಲೆಗಳು ತಾವಾಗಿಯೇ ಅನಿವಾರ್ಯವಾಗಿ ಸರ್ಕಾರದ ನೀತಿಯನ್ನು ಅನುಸರಿಸಲೇಬೇಕಾದಂತಹ ವ್ಯವಸ್ಥೆಯಾಗಬೇಕು.

ಈಗ ೭ ನೇ ತರಗತಿಯ ಪರೀಕ್ಷೆ ಪಬ್ಲಿಕ್ ಪರೀಕ್ಷೆಯಾಗಿರುವುದರಿಂದ ಪ್ರಶ್ನೆ ಪತ್ರಿಕೆಗಳನ್ನು ಇಲಾಖೆಯೇ ಸಿದ್ಧಪಡಿಸುವುದರಿಂದ ಅದೇ ಭಾಷೆಯ ಶಿಕ್ಷಣ ಮಾಧ್ಯಮವನ್ನು ಇಂತಹ ಶಾಲೆಗಳು ಅನುಸರಿಸುವುದು ಅನಿವಾರ್ಯವಾಗುತ್ತದೆ.

ಕರ್ನಾಟಕ ಶಿಕ್ಷಣ ಮಸೂದೆಯ ನಿಯಮ ೩ (ಅ) ನೇ ಕಲಂನ ಪ್ರಕಾರ ೧ ರಿಂದ ೭ ನೇ ತರಗತಿಯವರೆಗೆ ಸಮಗ್ರವಾಗಿ ಪ್ರಾಥಮಿಕ ಶಿಕ್ಷಣ ಎಂದು ಪರಿಗಣಿಸಿರುವುದರಿಂದ ಕಾನೂನಿನ ಪ್ರಕಾರವೂ ಅದು ಸಿಂಧುವಾಗುತ್ತದೆ.

ಶಿಫಾರಸ್ಸು ೩ : ಈಗಾಗಲೇ ೫ ರಿಂದ ೭ ರವರೆಗೆ ಇಂಗ್ಲೀಷ ಮಾಧ್ಯಮಕ್ಕೆ ಅನುಮತಿ ಪಡೆದಿರುವ ಅಂಗೀಕೃತ ಶಾಲೆಗಳು ೧೯೯೯-೨೦೦೦ ನೇ ಸಾಲಿನಿಂದ ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ ಬದಲಾವಣೆ ಮಾಡಿ ಮೂರು ವರ್ಷಗಳಲ್ಲಿ ೭ನೇ ತರಗತಿಯವರೆಗೆ ಸರ್ಕಾರ ನೀತಿಯಂತೆ ಶಿಕ್ಷಣ ಮಾಧ್ಯಮವನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಈ ಶಾಲೆಗೆ ಸರ್ಕಾರ ನೀಡಿರುವ ಮಾನ್ಯತೆ ರದ್ದಾಗುತ್ತದೆ.

ಶಿಫಾರಸ್ಸು ೪ : ೧ ರಿಂದ ೭ ನೇ ತರಗತಿಯವರೆಗೆ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಿರಬೇಕೆಂಬ ನೀತಿಯನ್ನು ಅಂಗೀಕರಿಸಿದ ನಂತರ ಕಲಿಸುವ ಭಾಷೆಗಳಿಗೆ ಸಂಬಂಧಿಸಿದಂತೆ ಮುಂದೆ ಸೂಚಿತವಾದ ಭಾಷಾ ನೀತಿಯನ್ನು ಜಾರಿಗೆ ತರಬೇಕು.

ವಿವರಣೆ : ಈ ಸೂಚಿತ ಭಾಷಾ ನೀತಿಯಿಂದ ಅಪೇಕ್ಷೆ ಪಡುವ ಪೋಷಕರು ತಮ್ಮ ಮಕ್ಕಳಿಗೆ ಮೂರನೇ ತರಗತಿಯಿಂದ ಭಾಷೆ ೧ ರ ಅನ್ವಯ ಇಂಗ್ಲೀಷ/ ಹಿಂದಿ ಅಥವಾ ಬೇರಾವುದಾದರೂ ಭಾರತೀಯ ಭಾಷೆಯನ್ನು ಒಂದು " ವಿಷಯ "ವನ್ನಾಗಿ ಕಲಿಸುವುದು. ಭಾಷೆ ೧ ರ ಕಲಿಕೆ ಮಾತ್ರ ಕಡ್ಡಾಯವಾಗಿದ್ದು ಅದು ಪರೀಕ್ಷೆಗೆ ಕಡ್ಡಾಯವಲ್ಲದ್ದರಿಂದ ಭಾಷೆಯನ್ನು ಹೇರಿದಂತಾಗುವುದಿಲ್ಲ. ಭಾಷೆ ೨ ರ ಕಲಿಕೆ ಮತ್ತು ಪರೀಕ್ಷೆಗಳೆರಡೂ ಕಡ್ಡಾಯವಲ್ಲದ್ದರಿಂದ ತ್ರಿಭಾಷಾ ಸೂತ್ರವನ್ನು ಹೇರಿದಂತಾಗುವುದಿಲ್ಲ. ಜೊತೆಗೆ ಈ ಮಟ್ಟದಲ್ಲಿ ಈ ಭಾಷೆಗಳನ್ನು ಕಲಿಸಲು ಹೆಚ್ಚುವರಿ ಅಧ್ಯಾಪಕರ ನೇಮಕ ಅಗತ್ಯವಾಗುವುದಿಲ್ಲ.

೩ನೇ ತರಗತಿಯಿಂದಲೇ ಇಂಗ್ಲೀಷ ಭಾಷೆಯನ್ನು ಕಲಿಯುವ ಅವಕಾಶ ಕಲ್ಪಿಸುವುದರಿಂದ ಜಾಗತೀಕರಣ ಮತ್ತು ಉದಾರೀಕರಣದ ಹಿನ್ನೆಲೆಯಲ್ಲಿ , ಅನಗತ್ಯವಾದರೂ ಪೋಷಕರಲ್ಲಿ ಮನೆ ಮಾಡಿರುವ - ಇಂಗ್ಲೀಷ ಕಲಿಕೆಯಿಂದ ನಮ್ಮ ಮಕ್ಕಳು ವಂಚಿತರಾಗುತ್ತಾರೆಂಬ - ಆತಂಕವನ್ನು ದೂರ ಮಾಡಿದಂತಾಗುತ್ತದೆ.

ಸೂಚಿತ ಭಾಷಾ ನೀತಿ

[illegible] (ಕನ್ನಡ) ಮಾಧ್ಯಮದವರೆಗೆ	(ಕನ್ನಡೇತರ) ಮಾತೃಭಾಷಾ ಮಾಧ್ಯಮದವರೆಗೆ
[illegible] ಅ.) ಕನ್ನಡ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ)	ಅ.) ಮಾತೃಭಾಷೆ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ)
[illegible] ಅ.) ಕನ್ನಡ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ)	ಅ) ಮಾತೃಭಾಷೆ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ)
ಇ.) ಭಾಷೆ ೧: ಇಂಗ್ಲೀಷ್ - ಹಿಂದಿ ಮುಂತಾದ ಇತರ ಭಾರತೀಯ ಭಾಷೆಗಳಲ್ಲಿ ಒಂದು [illegible] (ಕಲಿಕೆ ಮತ್ತು ಪರೀಕ್ಷೆ ಎರಡೂ ಐಚ್ಛಿಕ)	ಇ.) ಭಾಷೆ ೧ - ಕನ್ನಡ (ಕಲಿಕೆ ಕಡ್ಡಾಯ ಪರೀಕ್ಷೆ ಐಚ್ಛಿಕ) ಈ.) ಭಾಷೆ ೨: ಮೇಲೆ ತೆಗೆದುಕೊಂಡ ಭಾಷೆಗಳನ್ನು ಬಿಟ್ಟು ಇನ್ನೊಂದು ಭಾಷೆ (ಕಲಿಕೆ ಮತ್ತು ಪರೀಕ್ಷೆ ಎರಡೂ ಐಚ್ಛಿಕ)
[illegible] ಅ.) ಕನ್ನಡ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ) ಊ.) ಭಾಷೆ ೧: ಇಂಗ್ಲೀಷ - ಹಿಂದಿ ಮುಂತಾದ ಇತರ ಭಾರತೀಯ ಭಾಷೆಗಳಲ್ಲಿ ಒಂದು (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ) ಉ) ಭಾಷೆ ೨ ಮೇಲೆ ತೆಗೆದುಕೊಂಡ ಭಾಷೆಗಳನ್ನು ಬಿಟ್ಟು ಇನ್ನೊಂದು ಭಾಷೆ ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ	ಅ.) ಮಾತೃಭಾಷೆ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ) ಊ.) ಭಾಷೆ ಕನ್ನಡ (ಕಲಿಕೆ ಮತ್ತು ಪರೀಕ್ಷೆ, ಕಡ್ಡಾಯ) ಋ.) ಭಾಷೆ ೨ ಮೇಲೆ ತೆಗೆದುಕೊಂಡ ಭಾಷೆಗಳನ್ನು ಬಿಟ್ಟು ಇನ್ನೊಂದು ಭಾಷೆ (ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ)
ಉದಾಹರಣೆಗಾಗಿ	ಉರ್ದು
ಕನ್ನಡ ಮಾಧ್ಯಮದ ವಿದ್ಯಾರ್ಥಿ	ಕನ್ನಡೇತರ ಮಾಧ್ಯಮದ ವಿದ್ಯಾರ್ಥಿ
ತರಗತಿ ೧ ರಿಂದ ೨ :ಕನ್ನಡ	ತರಗತಿ ೧ ರಿಂದ ೨ ಉರ್ದು
ತರಗತಿ ೨ ರಿಂದ ೪ ಕನ್ನಡ + ಇಂಗ್ಲೀಷ್ + (ಹಿಂದಿ)	ತರಗತಿ ೩ ರಿಂದ ೪ ಉರ್ದು + ಕನ್ನಡ +(ಇಂಗ್ಲೀಷ್ /ಹಿಂದಿ)
ತರಗತಿ ೫ ರಿಂದ ೭ : ಕನ್ನಡ + ಇಂಗ್ಲೀಷ್ +(ಹಿಂದಿ)	ತರಗತಿ ೫ ರಿಂದ ೭ : ಉರ್ದು + ಕನ್ನಡ +(ಇಂಗ್ಲೀಷ್ ಹಿಂದಿ)

ಎ. ಸೂ. ೫ ರಿಂದ ೭ ನೇ ತರಗತಿಯವರೆಗೆ ಮೂರು ಭಾಷೆಗಳ ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ. ಆದರೆ ಕನ್ನಡವೂ ಸೇರಿದಂತೆ, ಯಾವುದಾದರೂ ಎರಡು ಭಾಷೆಗಳಲ್ಲಿ ತೇರ್ಗಡೆಯ ಅಂಕಗಳನ್ನು ಪಡೆಯಬೇಕು.

೩ ನೇ ತರಗತಿಯಿಂದಲೇ ಸರ್ಕಾರಿ ಶಾಲೆಗಳಲ್ಲೂ ಇಂಗ್ಲೀಷ್ ಕಲಿಸುವ ನಿರ್ಧಾರವನ್ನು ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರವುದನ್ನು ಇಲ್ಲಿ ಉಲ್ಲೇಖಿಸಬಹುದು.

ಶಿಫಾರಸ್ಸು ೫ : ಈಗಾಗಲೇ ಆರಂಭವಾಗಿರುವ / ಮುಂದೆ ಆರಂಭವಾಗಲಿರುವ ಐಸಿಎಸ್‌ಇ ಮತ್ತು ಸಿಬಿಎಸ್‌ಇ ಶಾಲೆಗಳಲ್ಲಿ ಪ್ರವೇಶಾವಕಾಶವನ್ನು ಇನ್ನು ಮುಂದೆ ಏಪ್ರಿಲ್ ೨೯, ೧೯೯೪ ರ ಸರ್ಕಾರಿ ಆದೇಶ ಸಂಖ್ಯೆ: ಇಡಿ ೨೮ ಪಿಜಿಸಿ ೯೪ ರ ಪ್ರಕಾರ ಕಲಂ ೯ (ಅ, ಆ,ಇ,) ಪ್ರಕಾರ ಅಂತರರಾಜ್ಯ ವರ್ಗಾವಣೆಯ ಪೋಷಕರಿಗೆ ಮಾತ್ರ ನಿರ್ಬಂಧಿಸಿ, ಅದನ್ನು ಉಲ್ಲಂಘಿಸುವ ಶಾಲೆಗಳಿಗೆ ಈಗಾಗಲೇ ಲಭ್ಯವಿರುವ ಅವಕಾಶಗಳಡಿಯಲ್ಲಿ ಮಾನ್ಯತೆ ರದ್ದು ಮಾಡುವುದಾಗಿ ಘೋಷಿಸಿ, ಆದೇಶ ಹೊರಡಿಸಬೇಕು.

ವಿವರಣೆ : ಇದನ್ನು ಮಾಡದಿದ್ದರೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂಬ ರಾಜ್ಯ ಸರ್ಕಾರದ ನೀತಿಯನ್ನು ಇಂತಹ ಶಾಲೆಗಳು ವಿಫಲಗೊಳಿಸುತ್ತವೆ. ಹೇಗೆಂದರೆ, ಹಾಲಿ ಷರತ್ತುಗಳ ಪ್ರಕಾರ ಈ ಶಾಲೆಗಳ ಪ್ರವೇಶಾವಕಾಶದಲ್ಲಿ ಅಂತರರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳಿಗೆ ಆದ್ಯತೆ ನೀಡಬೇಕೆಂದಿದೆಯೇ ಹೊರತು ನಿರ್ಬಂಧವಿಲ್ಲ. ಅಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಸಾಮಾನ್ಯವಾಗಿ ರಾಜ್ಯದೊಳಗೆ ನೆಲೆಸಿರುವ ಪೋಷಕರ ಮಕ್ಕಳಿಗೂ ಪ್ರವೇಶ ನೀಡಿ, ಸರ್ಕಾರದ ಉದ್ದೇಶವನ್ನು ಈ ಶಾಲೆಗಳು ವಿಫಲಗೊಳಿಸುತ್ತವೆ.

ಶಿಫಾರಸ್ಸು ೬ : ಈಗಾಗಲೇ ಇಂಗ್ಲೀಷ ಅಥವಾ ಬೇರೆ ಮಾತೃ ಭಾಷಾ ಮಾದ್ಯಮದ ತರಗತಿಗಳನ್ನು ನಡೆಸುತ್ತಿರುವ ರಾಜ್ಯ ಪಠ್ಯ ಕ್ರಮದ ಅಥವಾ ಕೇಂದ್ರ ಪಠ್ಯ ಕ್ರಮದ ಶಾಲೆಗಳ ಆಡಳಿತ ಸಂಸ್ಥೆಗಳು ಸ್ವ ಇಚ್ಛೆಯಿಂದ ಕನ್ನಡ ಮಾಧ್ಯಮಕ್ಕೆ ಯಾವಾಗಲಾದರೂ ಬದಲಾವಣೆ ಬಯಸಿದರೆ ರಾಜ್ಯ ಸರ್ಕಾರವು ಮುಕ್ತವಾಗಿ ಅನುಮತಿ ನೀಡಬೇಕು.

ವಿವರಣೆ : ಇದರಿಂದ ರಾಜ್ಯದ ಮುಖ್ಯ ವಾಹಿನಿಯಲ್ಲಿ ತಾವಾಗಿಯೇ ಸೇರಬಯಸುವವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಶಾಲೆ ಮುಚ್ಚುವ ಅನಿವಾರ್ಯ ಸ್ಥಿತಿ ಉಂಟಾಗಿದೆಯೆಂದು ಕೆಲವು ಶಾಲೆಗಳ ಆಡಳಿತ ಸಂಸ್ಥೆಗಳು ನ್ಯಾಯಾಲಯದ ಮೆಟ್ಟಿಲನ್ನು ಹತ್ತಬಹುದಾದ ಪರಿಸ್ಥಿತಿಯನ್ನು ತಪ್ಪಿಸಿದಂತಾಗುತ್ತದೆ.

ಶಿಫಾರಸ್ಸು ೭ : ೨೯.೦೪.೯೪ ರಂದು ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶವನ್ನು ೧೯೮೯ ಕ್ಕೂ ಹಿಂದೆ ಆರಂಭಿಸಿದ್ದ ಶಾಲೆಗಳಿಗೂ ಅನ್ವಯಿಸಿದ್ದರಿಂದ, ಅಂತಹ ಶಾಲೆಗಳು ಕರ್ನಾಟಕ ಉಚ್ಚನ್ಯಾಯಾಲಯುದಲ್ಲಿ ಆ ಆದೇಶವನ್ನು ಪ್ರಶ್ನಿಸಿದವು. ಈ ರಿಟ್ ಅರ್ಜಿಯಲ್ಲಿದ್ದ ಕೆಲವೊಂದು ವಿವಾದಾಂಶಗಳು ಈಗಾಗಲೇ ಸರ್ವೋಚ್ಚ ನ್ಯಾಯಾಲಯುದಲ್ಲಿರುವ ಸಹ್ಯಾದ್ರಿ ಎಜುಕೇಷನ್ ಟ್ರಸ್ಟಿನ ಕೇಸಿನಲ್ಲಿಯೂ ವಿವಾದಾಂಶವಾಗಿರುವುದರಿಂದ, ಸಹ್ಯಾದ್ರಿ ಕೇಸಿನ ತೀರ್ಮಾನವಾಗುವವರೆಗೆ, ಕರ್ನಾಟಕ ಉಚ್ಚನ್ಯಾಯಾಲಯದ ಮುಂದಿರುವ ರಿಟ್ ಅರ್ಜಿಯಲ್ಲಿ ೨೯.೦೪.೯೪ ರ ಸರ್ಕಾರಿ ಆದೇಶವನ್ನು ಸ್ಟೇ ಮಾಡಲಾಯಿತು.

ಸಹ್ಯಾದ್ರಿ ಎಜ್ಯುಕೇಶನ್ ಟ್ರಸ್ಟ್ ಕೇಸಿನಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುವುದು ಕರ್ನಾಟಕ ಸರ್ಕಾರವಾದ್ದರಿಂದ ಹಾಗೂ ಅನಂತರ ಕರ್ನಾಟಕ ಸರ್ಕಾರ ಹೊರಡಿಸಿರುವ ಭಾಷಾ ನೀತಿಯ ಹೊಸ ಆದೇಶವನ್ನು ಸರ್ವೋಚ್ಚ ನ್ಯಾಯಾಲಯ ಈಗಾಗಲೇ ಮಾನ್ಯ ಮಾಡಿರುವುದರಿಂದ, ಸಹ್ಯಾದ್ರಿ ಕೇಸಿನ ಮೇಲ್ಮನವಿಯನ್ನು ಸರ್ಕಾರ ಹಿಂತೆಗೆದುಕೊಂಡು, ಕರ್ನಾಟಕ ಉಚ್ಚನ್ಯಾಯಾಲಯ ಕೊಟ್ಟಿರುವ ಸ್ಟೇ ಆರ್ಡರನ್ನು ರದ್ದುಪಡಿಸುವಂತೆ ಮಾಡಬೇಕು. (ಇದರಿಂದ ಹೊಸ ಭಾಷಾ ನೀತಿಯ ಜಾರಿಗಿರುವ ಅಡ್ಡಿಯನ್ನು ನಿವಾರಿಸಿದಂತಾಗುತ್ತದೆ.)

ಶಿಫಾರಸ್ಸು ೮ : ಕರ್ನಾಟಕ ರಾಜ್ಯದ ಗಡಿ ಭಾಗಗಳಲ್ಲಿ ವಿಶೇಷ ಆಸಕ್ತಿ ವಹಿಸಿ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವ ಖಾಸಗಿ ಸಂಸ್ಥೆಗಳಿಗೆ ಈಗಿನ ನಿಯಮಗಳನ್ನು ಸಡಿಸಿಲಿ, ವಿಶೇಷ ಆದ್ಯತೆ ಮತ್ತು ಪ್ರೋತ್ಸಾಹ ನೀಡುವ ಕ್ರಮಗಳನ್ನು ಕೈಗೊಳ್ಳಬೇಕು.

ಶಿಫಾರಸ್ಸು ೯ : ಮಾತೃ ಭಾಷೆ ಅಥವಾ ಪ್ರಾದೇಶಿಕ ಬಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂಬ ಸರ್ಕಾರದ ನೀತಿಯನ್ನು ಪೂರ್ವ ಪ್ರಾಥಮಿಕ ಹಂತಕ್ಕೂ ಅನ್ವಯಿಸಬೇಕು.

ವಿವರಣೆ : ಪ್ರಸ್ತುತ ಪೂರ್ವಪ್ರಾಥಮಿಕ ಶಿಕ್ಷಣ ಸರ್ಕಾರದ ನಿಯಂತ್ರಣದಲ್ಲಿ ಇಲ್ಲದಿರುವುದರಿಂದ ಹಲವಾರು ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ನೀಡಿ ಮತ್ತೆ ನಂತರ ಕಿರಿಯ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವುದು ಒಂದು ಅವೈಜ್ಞಾನಿಕ ಕ್ರಮವಾಗಿದೆ.

ಇದನ್ನು ತಪ್ಪಿಸಲು ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪ್ರಾಥಮಿಕ ಶಿಕ್ಷಣವು ಪೂರ್ವ ಪ್ರಾಥಮಿಕ ಹಂತವನ್ನೂ ಒಳಗೊಳ್ಳುತ್ತದೆ ಎಂದು ಸ್ಪಷ್ಟೀಕರಿಸಿರುವುದನ್ನು ಬಳಸಿಕೊಳ್ಳಬೇಕು.

●

ಎನ್. ವಿ. ಕರುಣಾಕರ

ಗೆದ್ದಲು

ಮೊದಲ ಮಳೆಬಿದ್ದ ಮಾರನೆಯ ದಿನ
ಬಿತ್ತಿದ್ದು ಮೊಳಕೆಯೊಡೆಯುವ ಮುನ್ನ ಹಾಜರು
ಬಣಗುಟ್ಟುವ ನೆಲದಲ್ಲಿ ಅದುತನಕ
ಎಲ್ಲೂ ಕಾಣದೆ ಇದ್ದ ಗೆದ್ದಲು.

ಹಾಲು ಬೆಳುಪಿಂ ಮೈಯ್ಯೋ ಬಲು ಮೃದು
ಮೃದೂನಿ ಕುಸುಮಾದಪಿ ....
ಕಾಠಿಣ್ಯವೆಲ್ಲ ಹೆಪ್ಪುಗಟ್ಟಿದ ಕೆಂಚುಗಣ್ಣು, ಎರಡೇ ಹಲ್ಲು
ಬಲು ಗಟ್ಟಿದವಡೆ
ಒಳಗೆ ಜಠರ ಲಾವಾರಸದಲಿ ತೇಲುವ ಬುದ್ಧಿ
ವಜ್ರಾದಪಿ ಕಠೋರ .....,

- ಪಸಿ ಒಣಗಿಲು , ಹಿರಿದು ಕಿರಿದುಗಳ ಮುಲಾಜೆ ಇಲ್ಲ
ಮುಕ್ಕಿ ಮುಗಿಸುತ್ತವೆ ಮುಂದೆ ಕಂಡುದನೆಲ್ಲ
ಮುಕ್ಕಬಹುದು ನಿಮ್ಮನ್ನೂ-
ಕವಿದರೂ ಕೆಲವೇ ಕ್ಷಣ ಬುದ್ಧಿಗೆ ಮಂಪರು.

ತಾಯ ಗರ್ಭಕ್ಕೂ ಕೈಯಿಟ್ಟು ತಡವಿ
ಗುರುತಿಟ್ಟು ಕಾಯುತ್ತವೆ ; ಹೊರಬರುವ ಹೊತ್ತು-
ಹರಿವ ನೀರನು ತಡೆದು
ಬೆಳೆವುದರ ಕಾಲೆಳೆದು
ತಟ್ಟಿ ತಡವಿ, ಕುಟ್ಟಿ ಕೆಡವಿ , ಕತ್ತರಿಸಿ ಒತ್ತರಿಸಿ-
ಓರಣವಾಗಿಸುವ ಕಾಯಕ
ಬಣ್ಣ ಏಳಕೆ ರಾಗ ಏಳನು ಹೊಂದಿಸುವುದು ಬಲು ತ್ರಾಸದಾಯಕ
ಆದರೂ....

ಬೆಂಬತ್ತುತ್ತವೆ-
ಉರಿದರೂ ಚಿತೆಯ ಬೆಂಕಿಯ ಹಾರಿ
ಹೂತರೂ ಹೊಂಡದ ಮಣ್ಣನ್ನು ತೂರಿ
ಚಾಚಿ ಕಬಂಧ ಬಾಹುಗಳ ನಾಲ್ದೆಸೆಗೆ
ಬಿಡದೆ ಲೋಕಾಂತರಕ್ಕೂ.....

ಬೆಳಕು ಸೇರುವುದೆ ಇಲ್ಲ
ಎಲ್ಲ ಒಳಗಿಂದೊಳಗೇ ಕೊರೆತ , ಹಾಗೆಂದು
ಕದ್ದುಮುಚ್ಚಿ ಕೆಲಸಮಾಡುವುದಿಲ್ಲ.
ಎಲ್ಲ ಹಾಡುಹಗಲೇ-

ಬರಿಯ ಬುರುಡೆಯ ಬಿಟ್ಟು
ಮೆದುಳನು ಸುಲಿದು ಬುದ್ಧಿಯ ತೆಗೆದು
ನಿಮ್ಮದೇ ನರ ನರಗಳನೆಲ್ಲ ಮೆತ್ತಗೆ ಸೆಳೆದು
ಕಟ್ಟಿ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ
ನೆಯ್ದು ಬಲೆಯೊಳಗೆ ನಿಮ್ಮನೆ ಬೀಳಿಸುವ ಹಿಕಮತ್ತು
ಗೆದ್ದಲಿನ ಒಡಲೊಳಗೂ ಜೇಡ ಬುದ್ಧಿಯ ಚಿತ್ತು.

ವಾಲ್ಮೀಕಿಯ ಮುತ್ತಿದವು ಮುಕ್ಕಲಿಲ್ಲ ಮೆತ್ತಗೆ
ದೇಗುಲಗಳ ಸುತ್ತಿದವು ತುಂಬದ ಆ ಹೊಟ್ಟೆಗೆ
ಹಿಡಿಕೆಯನೆ ಹೆರೆದು ತಿಂದವು ಎಂದೇ- ಮುಂದೆ
ಯಾರೊಬ್ಬರು ಎಂದೆಂದೂ ಎತ್ತಲಿಲ್ಲ ಸುತ್ತಿಗೆ.

ಹೀಗೆ -
ಪಂಚಾಂಗದ ಕಲ್ಲು, ಗೋಡೆಯ ಗಾರೆ,
ಆಧಾರ ಕಂಬ, ಮೇಲಿನ ತೊಲೆ, ನಡು ಬಾಗಿಲು,
ಕಿಟಕಿ , ಜಂತಿ ,ಪಕ್ಕಾಸು ;
ಮಾಡಿನ ಹೊದಿಕೆ , ತುದಿಯ ಕಳಶ -ಒಳಗೆ
ಉತ್ಸವ ಮೂರ್ತಿ, ಆರತಿ ತಟ್ಟೆ, ಮೇಲಿನ ಎಣ್ಣೆ,
ಒಳಗಿನ ಬತ್ತಿ, ತುದಿಯ ಬೆಳಕಿಗೂ ಹತ್ತಿ
ಮುಕ್ಕಿ ಮುಗಿಸಿ ತುಟಿಸವರಿ ಸರಿಯುತ್ತವೆ-
ನಿಂತವರತ್ತ ಕುಳಿತವರತ್ತ ಗೆದ್ದಲು ಗೆದ್ದೊಲು.
ಎಂದೇ -ಜೀವ ಸೂಚನೆಯಾಗಿ
ನಿತ್ಯವೂ ನೆನೆದು ಝಾಡಿಸಿಕೊಳ್ಳಿ
ಕೈ ಕಾಲು ತಲೆ ಕಣ್ಣು,
ನೆನಪಿನ ಮಡಿಕೆಗಳ ಸಂದಿ
ನೆಟ್ಟ ದಿಟ್ಟಿಯಡಿ ತುತ್ತ ತುದಿ ಮೂಗಿಗೇ
ಅಥವಾ ಅರಿವಾಗದಂತೆ ನಿಮ್ಮರಿವಿಗೇ
ಹತ್ತಿರಲೂಬಹುದು , ಗೆದ್ದಲು.

ಜನ್ನನ ಅಮೃತಮತಿ - ಅಷ್ಟಾವಂಕರ ಪ್ರಸಂಗ : ವೈದ್ಯವಿಜ್ಞಾನದ ನೆಲೆಯಿಂದ

ಶಿವರಾಮಯ್ಯ

ಜನ್ನನ ಯಶೋಧರ ಚರಿತೆಯು ಕಾಲಕಾಲಕ್ಕೆ ಪುನರ್‌ಮೌಲೀಕರಣಕ್ಕೆ ಒಳಪಡುತ್ತಲೇ ಬಂದಿದೆ. ಚರ್ಚೆಗೆ ಈಡಾಗಿರುವ ಮುಖ್ಯಭಾಗವೆಂದರೆ ಅಮೃತಮತಿ ಮತ್ತು ಅಷ್ಟಾವಂಕರ ಪ್ರಸಂಗ. ಮೊದಮೊದಲು ತೀ ನಂ ಶ್ರೀ ಮುಂತಾದವರು ಯಶೋಧರ ಚರಿತೆಯ ಯಶಸ್ಸು ನಿಂತಿರುವುದು ಅಮೃತಮತಿಯ ಪ್ರಣಯ ಪ್ರಸಂಗದ ಮೇಲೆ ಎಂಬುದಾಗಿ ಅಭಿಪ್ರಾಯಪಟ್ಟರು; ಒಬ್ಬಿಬ್ಬರು ಅಮೃತಮತಿಯ ಪಾತ್ರವನ್ನು ಮನೋವಿಜ್ಞಾನದ ನೆಲೆಯಿಂದ ವಿಶ್ಲೇಷಿಸಿ ನೋಡಿದರು. ಅನಂತರ ಕುವೆಂಪು ಮಾತ್ರ ಜನ್ನನ ಕಾವ್ಯೋದ್ದೇಶ ಅಮೃತಮತಿಯ ಪ್ರಣಯ ನಿರೂಪಣೆ ಅಲ್ಲ, ಅದು ಅವಳ ಕಾಮವಿಕಾರ ನಿರೂಪಣೆ ಎಂದರು . ಈಚೆಗೆ ಒಬ್ಬ ಮಡಿವಂತ ಭಟ್ಟರು ತೀರ ಅಸಹನೆಯಿಂದ ಅವಳನ್ನು "ಕಾಮುಕ ಹೆಣ್ಣು" ಜಾರ ಸ್ತ್ರೀ ಮುಂತಾಗಿ ಜರಿದರು[೧] ಆದರೆ ಈ ಎಲ್ಲ ಬಗೆಯ ವಿಮರ್ಶೆಯನ್ನು ಪರಿಶೀಲಿಸಿ ನೋಡಿದ ಗಿರಡ್ಡಿ ಗೋವಿಂದರಾಜ ಅವರು ಈ ಕೃತಿ ಬದುಕಿನ ಗಹನ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವನ್ನೇನ ಕೊಡುವುದಿಲ್ಲ ಎಂಬ ಉಚಿತ ತಿರ್ಮಾನಕ್ಕೆ ಬಂದರು. ಗಿರಡ್ಡಿಯವರೆಂದಂತೆ ಜನ್ನನ ಕಾವ್ಯೋದ್ದೇಶವನ್ನು ಗಮನಿಸಿ, ಕುವೆಂಪು ಅವರ ಮಾತನ್ನು ಸಮರ್ಥಿಸಿ, ಉಳಿದ ವಿಮರ್ಶಕರ ಮಾತನ್ನು ಅತ್ತ ಸರಿಸಿ ವೈದ್ಯವಿಜ್ಞಾನದ ನೆಲೆಯಿಂದ ಈ ಅಮೃತಮತಿ ಮತ್ತು ಅಷ್ಟಾವಂಕರ ಪ್ರಸಂಗವನ್ನು ನೋಡಿದರೆ ಹೇಗೆ ? ಎಂಬ ಪ್ರಯತ್ನವನ್ನು ನಾನಿಲ್ಲಿ ಕೈ ಗೊಂಡಿದ್ದೇನೆ.

ಇದುವರೆಗಿನ ವಿಮರ್ಶೆ ಯಶೋಧರ ಮತ್ತು ಅಮೃತಮತಿಯರ ದುರಂತ ಪ್ರಣಯಕ್ಕೆ ವಿಧಿಯ ಕೈವಾಡವೇ ಕಾರಣವೆಂದೂ, ಅಮೃತಮತಿ ಜಾರುವುದಕ್ಕೆ ಅವಳ ಸಂಗೀತ ಪ್ರಿಯತೆಯೇ ಕಾರಣವೆಂದೂ, ಮನೋವಿಜ್ಞಾನದ ನೆಲೆಯಿಂದ ನೋಡಿದರೆ ಅವಳ ವಿಪರೀತ ಮನೋವಿಕಾರವೇ ಕಾರಣವೆಂದೂ ವಿಶ್ಲೇಷಿಸಿದೆ. ಇದೇನೆ ಇರಲಿ, ಯಶೋಧರ ಚರಿತೆ ವಾಸ್ತವ ಮಟ್ಟಕ್ಕಿಂತ ಭಿನ್ನವಾದ ಮಟ್ಟದಲ್ಲೆ ಕೆಲಸಮಾಡುತ್ತದೆ. ಆದಕಾರಣ ಬೆಂತರನ ಪ್ರಸಂಗವನ್ನಾಗಲಿ, ಭವಾವಳಿಯ ಕಥೆಯನ್ನಾಗಲಿ.ಮಾರಿದತ್ತನ ಮನಃ ಪರಿವರ್ತನೆಯನ್ನಾಗಲಿ ವಾಸ್ತವ ಮಟ್ಟದಲ್ಲಿ ನಾವು ಒಪ್ಪಿಕೊಳ್ಳಲಾರೆವು. ಗಿರಡ್ಡಿ ಗೋವಿಂದರಾಜರು ಎಂದಂತೆ,ಇದನ್ನೆಲ್ಲ ಪ್ರಶ್ನಿಸದ ನಮ್ಮ ವಿಮರ್ಶೆ ಅಮೃತಮತಿಯ ಪ್ರಣಯ (ಪ್ರಣಯ ಎಂದು ಕರೆಯುವದೇ ಅನುಚಿತ) ಪ್ರಸಂಗದಲ್ಲಿ ಮಾತ್ರ ವಾಸ್ತವ ಚಿತ್ರಣವನ್ನು ಕಾಣಲು

ಏಕೆ ಹಾತೊರೆಯುವುದೊ ತಿಳಿಯದು . ಎಂದರೆ ಕಾವ್ಯಶಿಲ್ಪ ದಲ್ಲಿ ಬೆಂತರನ ಕೂಗಿಗೂ ಭವಾವಳಿಯ ಚಿತ್ರಣಕ್ಕೂ ಮಾರಿದೇವತೆಯ ಮನಃ ಪರಿವರ್ತನೆಗೂ ನಿರ್ದಿಷ್ಟವಾದ ಅನಿವಾರ್ಯವಾದ ಉದ್ದೇಶವಿರುವುದಾದರೆ ಅಮೃತಮತಿ ಅಷ್ಟಾವಂಕರ ಪ್ರಸಂಗಕ್ಕೂ ನಿರ್ದಿಷ್ಟವಾದ ಅನಿವಾರ್ಯವಾದ ಉದ್ದೇಶವಿದೆ. ಈ ದೃಷ್ಟಿಯಿಂದ ಜನ್ನನ ಕಾವ್ಯ ಸಂವಿಧಾನವನ್ನು ಗಮನಿಸಿದರೆ ಕವಿಗೆ ವಾಸ್ತವ ಚಿತ್ರಣವನ್ನು ಕೊಡುವ ಉದ್ದೇಶ ಲವಲೇಶವೂ ಇಲ್ಲ. ಆದುದರಿಂದ ಅಮೃತಮತಿ ಮತ್ತು ಅಷ್ಟಾವಂಕರ ಪ್ರಸಂಗವನ್ನು ಮಾತ್ರ ವಾಸ್ತವ ಪ್ರಣಯ ಪ್ರಸಂಗವೆಂದು ಭ್ರಮಿಸಿ ಮಾತನಾಡುವುದು ಅನುಚಿತವೆನಿಸುತ್ತದೆ. ಆದ್ದರಿಂದ ಜನ್ನನ ಕಾವ್ಯೋದ್ದೇಶಕ್ಕೆ ಈ ಪ್ರಸಂಗವೂಕೂಡ ಎಷ್ಟರಮಟ್ಟಿಗೆ ದುಡಿಯುತ್ತದೆ ಎಂಬುದನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಅದಕ್ಕಾಗಿ ನಾವೀಗ ಕವಿಯ ಆಶಯವನ್ನು ಮೊದಲು ಗ್ರಹಿಸುವುದು ಒಳ್ಳೆಯದು. ಈ ನಿಟ್ಟಿನಲ್ಲಿ ತಮ್ಮ ಚರ್ಚೆಯನ್ನು ಬೆಳಸಿರುವ ಗಿರಡ್ಡಿಯವರು "ಕಾವ್ಯದಲ್ಲಿ ಬರುವ ಶಬ್ದವಿನ್ಯಾಸ, ವಸ್ತು ಸೂಚಕ ಪ್ರತಿಮೆಗಳು ಸಂಕೇತಗಳು ಹಾಗೂ ಸಾಂಕೇತಿಕ ಕ್ರಿಯೆಗಳು ಎಲ್ಲವೂ ಯಶೋಧರನ ಆತ್ಮ ಬೇಟೆಯ ಬಲಿಯಾಗಿ ಜನ್ಮಾಂತರಗಳಲ್ಲಿ ಬಳಲಿದ ಕಥೆಯೇ ಆಗಿದೆ" ಎನ್ನುತ್ತಾರೆ.[೨] ಇದು ನಿಜ . ಆದರೆ ಯಶೋಧರನ ಈ ಆತ್ಮಬೇಟೆಗೆ ಬಳಸಿದ್ದು ಅಮೃತಮತಿ ಎಂಬ ದೀವ ಮೃಗ.

ಅಮೃತಮತಿ ಗಡ ಯಶೋಧರನ
ನಮಃ ಪ್ರಿಯೆ ಆಕೆ ದೀವಮಾಗಿ ಪುಳಿಂದಂ
ಸುಮನೋ ಬಾಣಂತದ್ ಭೂ
ರಮಣ ನೊಲಿದಂತೆ ಗೋರಿಗೊಳಿಸುತ್ತಿರ್ಕುಂ

ಆದ್ದರಿಂದ ಕವಿಯು ಸಾಕಿದ ಈ ದೀವ ಮೃಗ ಅವನ ನಿರ್ದೇಶನದಂತೆ ವರ್ತಿಸುತ್ತ ಯಶೋಧರನನ್ನು "ಇಳಿಕೆಯ್ದು" ಅಷ್ಟಾವಂಕನತ್ತ ಸುಳಿದು ಹೋಗುತ್ತದೆ. ಆದರೆ ಈ ಮೃಗಕ್ಕೆ ಇಚ್ಛಾ ಸ್ವಾತಂತ್ರ್ಯವನ್ನು ನೀಡಿದ್ದರೆ ಹೀಗೆ ಕುವರ ವಿದ್ಯಾಧರನನ್ನು ಬಿಟ್ಟು ಕೊಟ್ಟು ಆ ಗಜವೆಡಂಗನನ್ನು ವರಿಸುತ್ತಿತ್ತೆ? ಎಂದರೆ ಖಂಡಿತ ಇಲ್ಲ ಎಂಬುದೇ ಉತ್ತರ. ಆದರೆ ಕವಿ ಅವಳನ್ನು ರಾಜನ ಪಕ್ಕದಿಂದ ಬೇರ್ಪಡಿಸಿ ಬದಗನ ಕಾಲಬದಿಗೆ ತಳ್ಳಿ ಬಿಡುತ್ತಾನೆ. ಅದಕ್ಕೆ ಅವಳ ಸಂಗೀತಾಭಿರುಚಿಯನ್ನು ಬಲೆಯಾಗಿ ಬೀಸಿದ್ದಾನೆ. ಇದೂ ಕೂಡ ತೆಳುವಾದ ಬಲೆ, ನೆಪಕ್ಕೆ ಮಾತ್ರ ಪ್ರಯೋಗವಾಗಿದೆ. ಒಟ್ಟಿನಲ್ಲಿ ಆ ಹುಳುಕ ನೊಂದಿಗೆ ಕಾಮಲೀಲೆಯಲ್ಲಿ ತೊಡಗಿದ್ದ ರಾಣಿಯನ್ನು ನೋಡಿದ ರಾಜನಿಗೆ ಸಂಸಾರದಲ್ಲಿ ವಿರಕ್ತಿ ಹುಟ್ಟಬೇಕಾಗಿತ್ತು. ಲೆಕ್ಕಾಚಾರ ಹಾಕಿದಂತೆ ಆ ಘಟನೆ ನೆರವೇರಿತು.

ಆದರೆ ಇದು ಸಂಭಾವ್ಯವೆ ಎಂಬುದೇ ನಮ್ಮ ಪ್ರಶ್ನೆ. ಅಷ್ಟಾವಂಕನೆಂಬ ಹೆಸರಿಗೆ ಅನ್ವರ್ಥನಾಮನಾಗಿದ್ದ ಅವನ ವರ್ಣನೆ ಈ ಪ್ರಕಾರ ಇದೆ.

ಪಱಿದಲೆ ಕುಱಿನೊಸಲಿ ಱಿಗ

ಪ್ನೊರೆವಾಯ್ ಹಪ್ಪಳಿಕೆ ಮೂಗು ಮುರುಟಿದ ಕಿವಿ ಬಿ
ಬ್ಬಿಱಿದಲ್ ಕುಸಿಗೊರಲಿ ಮಿದೆರ್ದ
ಪೊರಂಟ ಬೆನ್ ಬಾತ ಒಸಿ ಱಿಡಂಗಿದ ಜಘನಂ

ಕಱಿದೊವಲ ಪಱಿಯ ಕುಱಿಯಂ
ತೆಱೆದಂದದ ಮೆಯ್ಯ ನಾತ ಮಾತನ ಕಯ್ಗಳ್
ಕುಱಿಗಣ್ಣು ಕನ ಬೆನ್ ಕಾಲ್
ಮಱಿಯಿಸುವುದು ಟೊಂಕಮುರಿದ ಕತ್ತೆಯ ಕಾಲಂ

ಮುದುಗರಡಿಯ ಮುದು ದೊವಲಂ
ಕರಿಯಂ ತಾಳಕಾಯ ಮೋಳಿಗೆಯೊಂದ
ದದಮುರುಡ ನಷ್ಟವಂಕಂ
ಮೊದಲೊಣಗಿದ ಕೂನ ಕೊರಡಿ ನಂದದ ಕೊಂಕಂ

ಇಲ್ಲಿ ಕುಷ್ಠ (ತೊನ್ನು)ಎಂಬ ಶಬ್ದದ ಬಳಕೆ ಇಲ್ಲವಾದರೂ ಅಷ್ಟಾವಂಕನ ಸ್ಥಿತಿಯು ಆಧುನಿಕ ವೈದ್ಯ ವಿಜ್ಞಾನದ ರೀತ್ಯ ನೋಡಿದರೆ ಇದು ಕುಷ್ಠ ರೋಗದ ಸಕಲ ಲಕ್ಷಣವನ್ನೇ E n |P ": ಫ್ರ ಟಿ

ಮತ್ತು ಇದೇ ಸಂದರ್ಭದಲ್ಲಿ ಮತ್ತೊಂದು ಸಂಗತಿಯನ್ನು ಹೇಳಬಹುದಾಗಿದೆ. ಕುಷ್ಠನಿವಾರಣೆಗಾಗಿ ಆಜನ್ಮ ಪರ್ಯಂತ ಸೇವೆಗೈದ ಬಾಬಾ ಆಮ್ಟೆಯವರ ಆತ್ಮ ಕಥನದಲ್ಲಿ ಉಕ್ತವಾಗಿರುವ ಅವರ ಒಂದು ಅನುಭವ ಹೀಗಿದೆ : ಆಮ್ಟೆಯವರು ಮೊಟ್ಟ ಮೊದಲು ಇಂಥ ಕುರೂಪಿ ಕುಷ್ಠ ರೋಗಿಯನ್ನು ತಮ್ಮ ಊರಿನ ಸರ್ಕಲ್‌ನಲ್ಲಿ ಕಂಡು, ಹೆಬ್ಬುಲಿಗೂ ಹೆದರದ ವೀರ ಪುರುಷ ಕುಷ್ಠ ರೋಗಿಯ ಆ ಊಹಾತೀತ ಸ್ಥಿತಿಗೆ ಹೆದರಿ ಓಡಿಬಿಡುತ್ತಾರಂತೆ." ಎಂದ ಮೇಲೆ ಅಷ್ಟಾವಂಕನ ವರ್ಣನೆಯು ಎಷ್ಟೇ ಉತ್ಪ್ರೇಕ್ಷೆ ಎಂದು ಭಾವಿಸಿದರೂ ಅಮೃತಮತಿಯಂಥ ಶಿಷ್ಟಾಚಾರ ಸಂಸ್ಕಾರವುಳ್ಳ ರಾಣಿ ;ಸಂಗೀತಾದಿ ಕಲೆಗಳಲ್ಲಿ ಆಸಕ್ತಿಯಿರುವ ಯಶೋಧರನ ಮನಃಪ್ರಿಯೆ ; ಯುವರಾಜನಾಗಿರುವ ಯಶೋಮತಿಯ ತಾಯಿ ಈ ನಡುವಯಸ್ಸಿನಲ್ಲಿ "ಪೊಲ್ಲಮೆಯ ಲೇಸುನಲ್ಲರ ಮೆಯ್ಯೊಳ್" ಎಂದು ಆ ಗಜವೆಂಡಂಗನ ಬಳಿಗೆ ಕಾಮಾತುರಳಾಗಿ ಧಾವಿಸಿ ಹೋದಳೆಂದರೆ ಯಾರಾದರೂ ನಂಬತಕ್ಕ ಮಾತೆ? ಇದೆಲ್ಲ ವಾಸ್ತವವೆಂದು ನಮ್ಮ ವಿಮರ್ಶನ ಲೋಕ ಕಂಡದ್ದೇ ಸೋಜಿಗ ! ಆದರೆ ಸೂಕ್ಷ್ಮವಾಗಿ ನೋಡಿದರೆ ಜನ್ನ ಮರೆದಿರುವ ಚಮತ್ಕಾರವನ್ನು ಇಲ್ಲಿ ಗುರ್ತಿಸಬಹುದಾಗಿದೆ. ಅದೇನೆಂದರೆ ದೂದವಿಯ ಮುಖದಿಂದ ಬದಗನ ರೂಪವರ್ಣನೆಯನ್ನು ಕೇಳುವವರೆಗೆ ಮಾತ್ರ ವಾಸ್ತವವಾಗಿ

ಅಮೃತಮತಿಯನ್ನು ಅವಳ ಇಚ್ಛಾಶಕ್ತಿಯಂತೆ ವರ್ತಿಸಲು ಬಿಡಲಾಗಿದೆ. ಈ ಪದ್ಯ ನೋಡಿ:

ಎಂದೊಡೆ ದೂದವಿಗವಳಿಂ

ತೆಂದಳ್‌ಗರಗರಿಕೆ ಕೊರಲೊಳೀಕ್ಷಣದೊಳ್ ವಾರ್
ಬಿಂದು ಮಿಡುಕೆರ್ದೆಯೊಳದವೆಪು
ಳಿಂದಕಣೆಗಟ್ಟಿ ನಿಂದವನ ಹರಿಣಿಯವೊಲ್

ಕೊರಳಲ್ಲಿ ಗದ್ಗದ, ಕಣ್ಣಲ್ಲಿ ನೀರು, ಎದೆಯಲ್ಲಿ ಮಿಡುಕು - ಇಷ್ಟೆಲ್ಲ ಸಂಕಟ ಅಮೃತಮತಿಯಲ್ಲಿ ಯಾಕೆ ಉಕ್ಕಿತು ? ನೂತ್ನಗೀತಗಾರ ಕುರೂಪಿಯಾಗಿದ್ದಾನಲ್ಲ ಎಂದೆ? ರಾಜನನ್ನು ತೊರಯಬೇಕಲ್ಲ ಎಂದೆ ? ರಾಣಿಯಾದ ಮರ್ಯಾದೆಗಾಗಿಯೆ? ಯಾಕಾಗಿ ಈ ಸಂಕಟ?

ಇಚ್ಛೆ ಕೇಳುವರಿಲ್ಲ, ಗುಟ್ಟು ಬಿಚ್ಚುವರಿಲ್ಲ. ಅಂತೂ ಕಣೆಗಟ್ಟನಿಂದ ವನಹರಿಣಿಯಂತೆ ಇದ್ದ ಅಮೃತಮತಿ ಕ್ಷಣಾರ್ಧದಲ್ಲಿ ಸಾವರಿಸಿಕೊಂಡು ಒಲವಾದೊಡೆ ರೂಪಿನ ಕೋಟಲೆಯೇವುದೋ ಎಂದು ವಿನೂತನ ಪ್ರಣಯ ಸಿದ್ಧಾಂತವನ್ನು ಮಂಡಿಸುತ್ತಾಳೆ. ಅವಳ ಇಚ್ಛಾಶಕ್ತಿಯನ್ನು ಇಲ್ಲಿಗೆ ನಿರೋಧಿಸಿ, ಅಷ್ಟಾವಂಕನಲ್ಲಿಗೆ ಅಟ್ಟಿದ ಕವಿ. ಇನ್ನುಮುಂದೆ ಅವಳು ಜನ್ನನ ಆಜ್ಞಾನುವರ್ತಿನಿ. ಈ ಮೇಲಿನ ಪದ್ಯವನ್ನು ಸೂಕ್ಷ್ಮವಾಗಿ ಹೀಗೆ ಪರಿಶೀಲಿಸಿದರೆ ಕವಿಯ ಚಮತ್ಕಾರ ಏನೆಂಬುದು ವಾಚಕರಿಗೆ ತಿಳಿಯುತ್ತದೆ.

ವಾಸ್ತವವಾಗಿ ಅಮೃತಮತಿ ಬದಗನಂಥ ಕುರೂಪಿಯೂ, ರೋಗಿಯೂ ಆದ ವ್ಯಕ್ತಿಯನ್ನು ಕಂಡು ಕೂಡುವುದಿರಲಿ, ಹೆದರಿ ಅಲ್ಲಿಂದ ಓಟ ಕೀಳುತ್ತಿದ್ದಳು. ಮೈಯ ಬೆವರು, ಬಾಯವಾಸನೆ, ಹಲ್ಲುಕೀಸರಿಗೆ ಪ್ರಣಯಿಗಳು ಪರಸ್ಪರ ದೂರ ಸರಿಯುವಾಗ "ಇಂತಪ್ಪ ಕಾಮದೇವನಿಗೆ " ಅವಳು ಒಲಿಯುತ್ತಿದ್ದಳೆ? ವೈಮನಸ್ಸುಗಳು ಒಗ್ಗುತ್ತಿದ್ದುವೆ? ಅಸಮರೂಪ ಗುಣಸ್ವಭಾವಗಳಿರುವ ಪಶುಪಕ್ಷಿಪ್ರಾಣಿಗಳೇ ಕೂಟಕ್ಕೆ ಎಳಸುವುದಿಲ್ಲ ಎಂಬುದು ನಿಸರ್ಗದತ್ತ ಸಂಗತಿಯಾಗಿರುವಾಗ ಮನುಷ್ಯ ಲೋಕದಲ್ಲಿ ಇಂಥ ಕಾಮಕೇಳಿ ಘಟಿಸಿತು ಎಂದರೆ ನಂಬಬೇಕೆ? ಕವಿಯ ಕಲ್ಪನೆಗೆ ಒಂದು ಮಿತಿ ಬೇಡವೆ?

ಮತ್ತೊಂದು ವಿಚಾರ, ದೈಹಿಕವಾಗಿ ಸಂಭೋಗಕ್ಕೆ ನಾಲಾಯಕ್ಕಾದ ಷಂಡನಾದ ಬದಗನು ಹಗಲಿರುಳು ಮಹಾರಾಣಿಯೊಂದಿಗೆ ಸುರತಕ್ರೀಡೆಯಲ್ಲಿ ತೊಡಗಿದ್ದಾನೆಂದು ಹೇಳುವುದು ತೀರ ಅಸಂಭವ. ಹೋಗಲಿ, ಅವನು ಸಂಗೀತಜ್ಞನಾಗಿದ್ದು ಸುಸಂಸ್ಕೃತನೆ ಎಂದರೆ ಅದೂ ಇಲ್ಲ. ಆ ಹಿಂಸಾರಭಸಮತಿಯು ಒಮ್ಮೆ ತಡವಾಗಿ ಬಂದ ಮಹಾರಾಣಿಯನ್ನು ಬಾರೇಳುವಂತೆ ಬೀಟೆಯ ಕಾಲಿನಿಂದ ಒದೆಯುತ್ತಾನಲ್ಲದೆ, ಅವಳ ಕಣ್‌ಸವಿರೂಪಿಗಾಗಲಿ, ಕಿವಿಸವಿದನಿಗಾಗಲಿ ಮಾರುಹೋದವನಲ್ಲ. ಬಹುಶಃ ಅಷ್ಟಾವಂಕನೂ ಕವಿಯ ವಶವರ್ತಿಯೇ. ಇಲ್ಲವಾಗಿದ್ದರೆ

ಅಮೃತಮತಿಯು ತಾನಾಗಿ ಬಂದು ಎದುರು ನಿಂತಿದ್ದರೆ, ಅವಳ ರೂಪ ರಾಶಿಗೆ ಭಯಲಜ್ಜಾ ದೈನ್ಯಭಾವಗಳಿಂದ ಮುದುಡಿ ಹೋಗುತ್ತಿದ್ದನೇನೋ! ಏಕೆಂದರೆ ಪಾಪಾತ್ಮನಿಗೆ ಮಾತ್ರ ಕುಷ್ಠ, ತೊನ್ನು ಮುಂತಾದ ರೋಗಗಳು ಬರುತ್ತವೆ ಎಂಬ ನಂಬಿಕೆ ಇದೆ. ಹೀಗೆ ಪಾಪಪ್ರಜ್ಞೆಯಿಂದ ತೊಳಲುತ್ತಿರುವ ಇಂಥ ಅಸಹಾಯಕ ರೋಗಿಗಳು ಜನ ವಿಹೀನವಾದ ಕಾಡುಮೇಡು, ಕೋಟೆ ಕೊತ್ತಲು, ಹಾಳುಗುಡಿಗಳು ಮುಂತಾದಕಡೆ ಅವಿತುಕೊಂಡು ಜೀವಿಸುತ್ತಿದ್ದು ದಯಾವಂತರು ನೀಡಿದ ಅನ್ನ ನೀರುಗಳಿಂದ ಜೀವಿಸುತ್ತಿದ್ದರು ಎಂಬುದಾಗಿ ಪ್ರಾಚೀನ ಪುರಾಣೇತಿಹಾಸಗಳು ಹೇಳುತ್ತವೆ.[೫]

ಇದೆಲ್ಲದರ ತಾತ್ಪರ್ಯವೆಂದರೆ ಅಮೃತಮತಿ ಅಷ್ಟಾವಂಕರ ಸಹಜ ಸಂಸ್ಕಾರ ಜನ್ಯ ಗುಣಸ್ವಭಾವಗಳನ್ನು ಮೊದಲೆ ಹತ್ತಿಕ್ಕಿದ ಕವಿ ತನ್ನ ಕಾವ್ಯೋದ್ದೇಶಕ್ಕೆ ತಕ್ಕಂತೆ, ಸಾಕಿದ ಪ್ರಾಣಿಗಳಿಂದ ಬೇಟೆಯಾಡುವಂತೆ, ಅವರನ್ನು ದುಡಿಸಿಕೊಳ್ಳುತ್ತಾನೆಂಬುದನ್ನು ಹೇಳುವುದಕ್ಕಾಯಿತು. ಇನ್ನೂ ನಿಜ ಹೇಳಬೇಕೆಂದರೆ, ಇಂತಪ್ಪ ಬದಗನನ್ನೂ ಕಾಮಿಸಿ ಕೂಡುವಷ್ಟು ಯಾವ ಹೆಣ್ಣೂ ಚಪಲಚಿತ್ತಳಿರುವುದಿಲ್ಲ. ಇಷ್ಟಕ್ಕೂ ಅವಳಿಗೆ ಅಂಥ ತೀವ್ರ ಕಾಮನೆಗಳಿದ್ದು ತನ್ನ ಗಂಡನೊಂದಿಗೆ ಅದು ಪೂರೈಸದಿದ್ದರೆ, ಅಷ್ಟಾವಂಕನಿಗಿಂತ ಸಹ್ಯವಾದ ವ್ಯಕ್ತಿಯನ್ನಾದರೂ ಕೂಡಬಹುದಿತ್ತಲ್ಲ. ಅರಮನೆಗಳಲ್ಲಿ ಇಂಥ ರಹದಾರಿಗಳನ್ನು , ಒಳದಾರಿಗಳನ್ನು ಯಾರಾದರೂ ತೋರಿಸಿಕೊಡುತ್ತಿದ್ದರಷ್ಟೆ. ಅಮೃತಮತಿಯ ಪರವಾಗಿ ಇನ್ನೂ ಒಂದು ಮಾತನ್ನು ಹೇಳುವುದಾದರೆ ಅವಳು ಅಷ್ಟೊಂದು ಸಂಗೀತ ಪ್ರಿಯೆಯಾಗಿದ್ದ ಪಕ್ಷದಲ್ಲಿ ಆ ಬದಗನನ್ನು ಕರೆಸಿ ಅರಮನೆಯ ಪತಿಯಿಂದ ವೈದ್ಯಕೀಯ ನೆರವನ್ನಾದರೂ ಕೊಡಿಸಬಹುದಿತ್ತು. ಅವನನ್ನು ಕೂಡಲೇಬೇಕಿತ್ತೆ? ಜೀವದಯೆ ಜೈನ ಧರ್ಮವಲ್ಲವೇ? ಗೀತನಾಟ್ಯಗಳು ಕಾಮಪ್ರಚೋದಕ ಎಂದರೆ ಇಷ್ಟೊಂದು ಭಯಂಕರ ರೀತಿಯಲ್ಲಿ ಅವರು ಸುರತಕ್ರೀಡೆಯಲ್ಲಿ ದಿನಗಳೆದರು ಎಂದು ಪ್ರತಿಪಾದಿಸುವುದೇ ? ಹೋಗಲಿ, ಆ ದಿನ ಆಕೆ "ಮುಟ್ಟಿದ ಮನಂ ತೊಟ್ಟನೆ ಪಸಾಯ ದಾನಂಗೊಟ್ಟು" ಮೇಲೆ ಅರಮನೆಯಲ್ಲಿ ಯಾವತ್ತೂ ಅವನ 'ಸುಣ್ಣಾನಿ' ಕೇಳಿ ಬರುವುದೇ ಇಲ್ಲ. ಇದೆಂಥ ಸೋಜಿಗ !ಅಮೃತಮತಿಯನ್ನು ಜಾರಿಸಲು ಎಂಥ ನೆಪ! ಈ ಎಲ್ಲದರ ಉದ್ದೇಶ ಸ್ಪಷ್ಟವಾಗಿಯೇ ಇದೆ.

ಕಥಾನಾಯಕನಾದ ಯಶೋಧರ ಹೆಣ್ಣಿನ ಮೋಹದಿಂದ ಬಿಡಿಸಿಕೊಂಡು ಉದ್ಧಾರವಾದರೆ ಸಾಕು, ಉಳಿದವರ ಗೊಡವೆ ಕವಿಗೇನು ಬೇಕು? ಏನಗ್ಗಳವೊ ಕವೀಂದ್ರರಾ!

ಆದ್ದರಿಂದ ಅಮೃತಮತಿ ಒಮ್ಮೆ ಜಾರಿದ ಮೇಲೆ ಮೇಲೇರಬೇಕೆಂಬ ಇರಾದೆಯನ್ನು ಅವಳು ಅಪ್ಪಿತಪ್ಪೀ ಉಚ್ಚರಿಸದಂತೆ ನೋಡಿಕೊಂಡಿದ್ದಾನೆ ಕವಿ. ಪಾಶ್ಚಾತ್ಯ ದುರಂತ ಪಾತ್ರದ ಲಕ್ಷಣಕ್ಕೆ ಅಮೃತಮತಿಯ ಪಾತ್ರ ಹೊಂದುವುದೇ ಇಲ್ಲ. ದುರಂತ ಪಾತ್ರಗಳ ಇಚ್ಛಾಶಕ್ತಿ ಕೊನೆಯವರೆಗೂ ಅದಮ್ಯವಾಗಿದ್ದು ವಿಧಿಯ ವಿರುದ್ಧ ಹೋರಾಡುತ್ತಲೇ ಅವು ಸೋಲನ್ನಪ್ಪುತ್ತವೆ. ಅಂಥ ಸೋಲೂ ನಮಗೆ ಅಪ್ಯಾಯಮಾನ ವೆನಿಸುತ್ತದೆ. ಕುವೆಂಪು ಅವರು ಗುರ್ತಿಸಿರುವಂತೆ

ಅಮೃತಮತಿಯ ಪಾತ್ರದಲ್ಲಿ ಈ ಯಾವ ಲಕ್ಷಣವೂ ಕಂಡು ಬರುವುದಿಲ್ಲ. ವಾಸ್ತವವಾಗಿ ಅವಳಿಗೆ ಅಂಥ ಇಚ್ಛಾಶಕ್ತಿಯೇ ಇಲ್ಲ. ಅದನ್ನು ಕವಿ ಯಾವತ್ತೋ ಹತ್ತಿಕ್ಕಿಬಿಟ್ಟಿದ್ದಾನೆ. ಅವಳ ವರ್ತನೆಯಿಂದ ಯಶೋಧರನಿಗೆ ಜಿಗುಪ್ಸಾಭಾವನೆ ಹುಟ್ಟಿದರೆ ತೀರಿತು ಆ ಪಾತ್ರದ ಕಾರ್ಯಮುಗಿದು ಅದು ನೇಪಥ್ಯಕ್ಕೆ ಸರಿಯಬೇಕು, ಸರಿಯಿತು. ಹಾಗೆ ನೋಡಿದರೆ ಯಶೋಧರನ ಪಾತ್ರವೂ ಕೂಡ ರಕ್ತಮಾಂಸಗಳಿಂದ ಕೂಡಿದ ಮಾನವ ಗಾತ್ರದಲ್ಲಿ ಸಹಜ ವಿಕಾಸವನ್ನು ಪಡೆಯುವುದೇ ಇಲ್ಲ. ಈಗಾಗಲೇ ಗಿರಡ್ಡಿ ಗೋವಿಂದರಾಜರು ವಿಮರ್ಶಿಸಿರುವಂತೆ, ಇಲ್ಲಿ ವ್ಯಕ್ತಿಗಳು ಜೀವಂತ ಅರಳಿಕೊಳ್ಳುವುದೇ ಇಲ್ಲ.

"ಮನಸಿಜನ ಮಾಯೆ ವಿಧಿ ವಿಳಸನದನೆರಂಬಡೆಯೆ ಕೊಂದು ಕೂಗದೆ ಸರಂ " ಎಂದು ಕಾಮದ ವೈಚಿತ್ರ್ಯವನ್ನೂ ವಿಧಿವಿಲಾಸದ ರಹಸ್ಯವನ್ನೂ ಒಂದುಗೂಡಿಸುವ ಈ ಕೃತಿಯ ಆಶಯ ಬಹಳ ಸೀಮಿತ. ಇಲ್ಲಿ ಮನುಷ್ಯ ಪ್ರಯತ್ನ ಏನೇನೂ ಇಲ್ಲ. ಭವಸಂಸಾರವೆಂದರೆ ಆತ್ಮನ ಜೇಟಿ ಮಾತ್ರವೆಂಬ ತನ್ನ ಪೂರ್ವನಿಶ್ಚಿತ ಸಿದ್ಧಾಂತಕ್ಕೆ ಬದ್ಧನಾಗಿ ಕವಿ ಬರೆಯತೊಡಗುತ್ತಾನೆ. ಪಾಪ ಭೀರುಗಳಾದ ಜೈನ ಗೃಹಸ್ಥರನ್ನು ಹೆದರಿಸಿ ಅವರು ಜಿನಧರ್ಮಕ್ಕೆ ಅಂಟಿಕೊಂಡಿರುವಂತೆ ಏರ್ಪಡಿಸುವುದೇ ಜನ್ನನ ಕಾವ್ಯದ ಪರಮೋದ್ದೇಶವೆಂಬ ಮಾತು ಉಚಿತವೆನಿಸುತ್ತದೆ.[೬] ವಿಷಯ ಕಾಮನೆಗಳನ್ನುಳಿದು ಪ್ರಪಂಚದಲ್ಲಿ ಅನ್ಯ ವಿಷಯಗಳೇ ಇಲ್ಲವೆಂಬಂತೆ ಹೇಳಲಾಗುತ್ತದೆ. ಕಡೆಗೆ ಯುವರಾಜನಾದ ಯಶೋಮತಿ ಆಡಳಿತದಲ್ಲಿ ದಕ್ಷತೆಯನ್ನು ತೋರುವ ಬದಲು, ತನ್ನ ತಾಯಿ ಮತ್ತು ಅವಳ ಮಿಂಡನಿಗೆ ಹೆಂಡ ಖಂಡಗಳನ್ನು ಸರಬರಾಜು ಮಾಡುವ ಸೇವಕನಂತಾದದ್ದು ಒಂದು ದುರ್ದೈವ. ಜೀವನೋತ್ಸಾಹವನ್ನು ತುಂಬುವುದಕ್ಕಿಂತ ವಿರಕ್ತಿಯನ್ನು ಜಾಹಿರಾತು ಮಾಡಲೆಂದೇ ಈ ಕಾವ್ಯ ರಚನೆಗೊಂಡಂತಿದೆ. ಆದ್ದರಿಂದ ಯಶೋಧರಚರಿತೆ ಎಷ್ಟೇ ರಂಜನೀಯ ಕಾವ್ಯವಾಗಿದ್ದರೂ ಅಷ್ಟರಮಟ್ಟಿಗೆ ಅದು ಕುಬ್ಜಕಾವ್ಯವಾಗಿಬಿಡುತ್ತದೆ;ಪಾತ್ರಗಳಂತೂ ಕಪ್ಪು - ಬಿಳುಪುಗಳಾಗಿ ಬಿಡುತ್ತವೆ.

ಸಾರಾಂಶವೆಂದರೆ, ಅಮೃತಮತಿ ಮತ್ತು ಅಷ್ಟಾವಂಕರು ಅವರ ದೈಹಿಕ ಸ್ಥಿತಿ ಹಾಗೂ ಮಾನಸಿಕ ಹಿನ್ನೆಲೆಯಿಂದ ನೋಡಿದರೆ ಅವರಿಬ್ಬರು ಕಾಮ ಕೇಳಿಯಲ್ಲಿ ತೊಡಗಿದ್ದಾರೆಂಬುದು ಮನುಷ್ಯ ಮಾತ್ರದವರಿಂದ ಅಸಾಧ್ಯವೇ ಸರಿ. (just humanly impossible). ಇದನ್ನು ವೈದ್ಯವಿಜ್ಞಾನದ ನೆರವಿನಿಂದ ಸ್ಪಷ್ಟಪಡಿಸಲಾಗಿದೆ. ಪುರುಷನಾದ ಯಶೋಧರನ ಆತ್ಮವಿಕಸನಕ್ಕಾಗಿ ಮುಗ್ಧಳಾದ ಅವನ ಮನಃಪ್ರಿಯೆ ಅಮೃತಮತಿಯನ್ನು ಜನ್ನ ತನ್ನ ಮೂಗಿನ ನೇರಕ್ಕೆ ಕುಣಿಯುವ ಕಾಮದ ಬೊಂಬೆಯನ್ನಾಗಿಸಿಬಿಟ್ಟಿದ್ದಾನೆ. ಹೀಗಿದೆ ನಮ್ಮ ಪ್ರಾಚೀನ ಕವಿಗಳ ಸ್ತ್ರೀಪಾತ್ರಾಭಿವ್ಯಕ್ತಿ ವಿಧಾನ.[೭] ಅಮೃತಮತಿಯ ಪಾತ್ರ ಇದಕ್ಕೊಂದು ಜ್ವಲಂತ ನಿದರ್ಶನ.[೮]

ಟಿಪ್ಪಣಿಗಳು

೧. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವ ಯಶೋಧರ ಚರಿತೆಯ ಗದ್ಯಾನುವಾದಕ್ಕೆ ತೆಕ್ಕುಂಜೆ ಗೋಪಾಲಕೃಷ್ಣಭಟ್ಟರು ಮುನ್ನುಡಿ ಬರೆಯುತ್ತ ಅಮೃತಮತಿಯ ಪಾತ್ರದ ಬಗ್ಗೆ ' ಕಾಮುಕ ಹೆಣ್ಣು, ಜಾರ ಸ್ತ್ರೀ ' ಎಂದೆಲ್ಲ ಕರೆದಿರುವುದು ತುಂಬ ಕೆಡುಕೆನಿಸುತ್ತದೆ. ಆಕೆಯನ್ನು ಬದಗನೊಂದಿಗೆ ಕೂಡಿಸಿದ್ದುದಕ್ಕಿಂತ ಅನ್ಯಾಯದ ಮಾತಿದು. ಗಂಡಸರ ಮರ್ಜಿಗೆ ಅವಳೀಗ ಇದ್ದಿದ್ದರೆ ಕೆಂಡ ಕಾರುತ್ತಿದ್ದಳೊ, ಕನಿಕರ ಪಡುತ್ತಿದ್ದಳೊ ನೋಡಬೇಕಿತ್ತು ! ಸಾಕಿದವನ ತಪ್ಪಿಗೆ ದೀವಮೃಗವನ್ನು ನಿಂದಿಸುವುದೇಕೆ ?

೨. ಗಿರಡ್ಡಿ ಗೋವಿಂದರಾಜ, ಜನ್ನನ ಯಶೋಧರ ಚರಿತೆ. ವಿಮರ್ಶೆಯ ದಾರಿ. ಸಂಪಾದಕರು. ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ.

೩. ಕುಷ್ಠರೋಗವು ' ಮೈಕ್ರೋಬ್ಯಾಕ್ಟೀರಿಯಂ ಲೆಪ್ರೆ ' ಎಂಬ ರೋಗಾಣುವಿನಿಂದ ಬರುವ ಬೇನೆ.ಚರ್ಮದಲ್ಲಿರುವ ನರಗಳಲ್ಲಿ ಇದರ ವಾಸ. ಆದ್ದರಿಂದ ಮೊದಲು ಸ್ಪರ್ಶ ಜ್ಞಾನ ಕುಂದುತ್ತದೆ. ಸೂಜಿ ಚುಚ್ಚಿದರೂ ನೋಯುವುದಿಲ್ಲ. ತಂಪು ಬಿಸಿಗಳ ವ್ಯತ್ಯಾಸ ತಿಳಿಯುವುದಿಲ್ಲ. ಇದೇ ಕುಷ್ಠದ ಲಕ್ಷಣ. ಕೈ ಕಾಲುಗಳ ಬೆರಳು ಸವೆದು ಹೋದಂತಾಗುತ್ತದೆ. ಬೆರಳುಗಳು ಒಣಗುತ್ತವೆ. ಗಾಯಗಳಿಂದ ಕೀವು ರಸಿಕೆ ಒಸರುತ್ತದೆ. ಅಂಗೈ ಅಂಗಾಲುಗಳ ಎಲುಬುಗಳ ಕೀಲುಗಳು ನಾಶವಾಗುತ್ತವೆ. ಅಂಕುಡೊಂಕಾದ ಬೆರಳುಗಳು ಒಣಗಿದ ಕೈಕಾಲುಗಳನ್ನು ನೋಡಿದರೆ ಬಹಳ ಕನಿಕರವೆನಿಸುತ್ತದೆ. ಮತ್ತೆ 'ಅಂಟು ಕುಷ್ಠ'ದ ಲಕ್ಷಣವೆಂದರೆ ಚರ್ಮದ ಮೇಲೆ ಚಿಕ್ಕ ದೊಡ್ಡದಾದ ಗಂಟುಗಳಾಗಿ ಚರ್ಮ ಮರಗಟ್ಟಿ ದಪ್ಪನಾಗುವುದು. ಕಿವಿಗಳು ದದ್ದು ಹಿಡಿದು ಗಂಟುಕಟ್ಟಿ ಜೋಲುವವು. ಹುಬ್ಬುಗಳು ಗಂಟುಗಂಟಾಗಿ ಕೂದಲು ಉದುರಿ ಹೋಗುವವು. ಪಾದಗಳಲ್ಲಿ ಹುಣ್ಣುಗಳಾಗಿ ತೂಬುಗಳ ಕಂದಕದಂತೆ ಎಲುಬಿನವರೆಗೂ ಕಾಣಿಸಿಕೊಂಡು ವಿಕಾರವೂ ಕಠೋರವೂ ಆಗುತ್ತವೆ. ರೆಪ್ಪೆಗಳು ಬಡಿಯಲಾರದೆ ಶಕ್ತಿಹೀನವಾಗುತ್ತವೆ. ಕಣ್ಣು ಗುಡ್ಡೆಗಳ ಸ್ಪರ್ಶಜ್ಞಾನ ಹೋಗುತ್ತದೆ. ಗಾಳಿ ಧೂಳಿಗೆ ಕಣ್ಣುಗಳಲ್ಲಿ ಗಾಯಗಳಾಗಿ ಮಾಯದೆ, ಕೀವು ತುಂಬಿ ಹಾಳಾಗುತ್ತವೆ. ಇಲ್ಲವೆ ಕಣ್ಣು ಕುರುಡಾಗುತ್ತವೆ.

ಇನ್ನು ಕುಷ್ಠರೋಗದಿಂದ ಪುರುಷರ ಲೈಂಗಿಕ ಗ್ರಂಥಿಗಳು ಕೃಶವಾಗಿ ಮೆತ್ತಗಾಗಿ ಚಿಕ್ಕದಾಗುತ್ತವೆ. ರೋಗಿಯ ಜನನಾಂಗಗಳಿಗೆ ಬೇಕಾದ ರಸೋತ್ಪತ್ತಿಯಾಗದೆ, ವೀರ್ಯದಲ್ಲಿ ವೀರ್ಯಾಣುಗಳು ಕಡಿಮೆಯಾಗುತ್ತವೆ. ಕ್ರಮೇಣ ಆತ ಷಂಡನಾಗುತ್ತಾನೆ. ಇಲ್ಲಿ ಗಮನಾರ್ಹ ಅಂಶವೆಂದರೆ ಈ ರೋಗ ಮೆದುಳಿಗೆ ಹತ್ತುವುದಿಲ್ಲ. ಅದರ ಶಕ್ತಿ ಯಥಾರೀತಿ ಇರುತ್ತದೆ. ಆದ್ದರಿಂದ ವ್ಯಕ್ತಿ ಚಿಂತಿತನಾಗಿ ತನ್ನ ಜನ್ಮಾಂತರದ ಕರ್ಮಫಲವೆಂಬ ಪಾಪಪ್ರಜ್ಞೆಯಿಂದ ಸದಾ ದುಃಖಿಸುತ್ತಿರುತ್ತಾನೆ.

(ಡಾ. ಎಚ್.ವಿ.ಕೃಷ್ಣಮೂರ್ತಿ, ಚರ್ಮರೋಗಗಳು, ಬೆಂಗಳೂರು ವಿಶ್ವವಿದ್ಯಾನಿಲಯ)

೪. ಬಾಬಾ ಆಮ್ಟೆಯವರು ಯುವಕರಾಗಿದ್ದಾಗ [illegible] ಹುಲಿಗೆ

ಕಳ್ಳಕಾಕರಿಗೆ, ಕಡೆಗೆ ಆಂಗ್ಲ ಸೈನ್ಯಕ್ಕೂ ಅವರು ಹೆದರಿದವರಲ್ಲ. ಆದರೆ ಒಮ್ಮೆ ಹೆದರಿದರು. ಸ್ವಯಂ ಸೇವಕರಾಗಿ ಮಲ ಹೊರುವ ವೃತ್ತಿಯನ್ನು ಮಾಡುತ್ತಿದ್ದ ಅವರು ಒಮ್ಮೆ ತಮ್ಮ ಪಾಳಿಯನ್ನು ಪೂರೈಸಿ ಮನೆಗೆ ಹೊರಟಾಗ ' ವರೋರ' ಪಟ್ಟಣ (ಮಹಾರಾಷ್ಟ್ರ)ದ ರಸ್ತೆ ಬದಿಯಲ್ಲಿ ಮೂಟೆಯಂತಹ ವಸ್ತುವೊಂದು ಬಿದ್ದಿರುವುದನ್ನು ಕಂಡರು. ಅದರ ಹತ್ತಿರ ಹೋಗಿ ನೋಡಿದರೆ ಅದು ಮೂಟೆ ಅಲ್ಲ. ಅದು ಜೀವವುಳ್ಳ ಮನುಷ್ಯ. ಚಳಿಗಾಳಿಗೆ ಆ ಪ್ರಾಣಿ ನಡಗುತ್ತಿತ್ತು. ಆಮ್ಟೆಯವರು ಇನ್ನೂ ಹತ್ತಿರ ಸರಿದು ನೋಡಿದಾಗ ಅವನೊಬ್ಬ ಕುಷ್ಠರೋಗಿ, ಉಲ್ಬಣಾವಸ್ಥೆಗೆ ತಿರುಗಿ ಕೊಳೆಯುತ್ತಿದ್ದ ಮಾಂಸದ ಮುದ್ದೆಯೆಂದು ಗೊತ್ತಾಯಿತು.

ಅವನಿಗೆ ಮೂಗಿರುವ ಕಡೆ ಮೂಗೇ ಇರಲಿಲ್ಲ. ಅಲ್ಲಿ ಮೂಗಿನ ಎರಡು ರಂಧ್ರಗಳು ಮಾತ್ರ ಇದ್ದವು. ಕೈ ಕಾಲುಗಳ ಬೆರಳುಗಳೆಲ್ಲವು ಸಂಪೂರ್ಣವಾಗಿ ಹೊರಟುಹೋಗಿದ್ದವು. ಕಣ್ಣುಗಳು ಕೊಳೆತು ಅಲ್ಲಿ ಹುಳುಗಳು ಪಿತುಗಟ್ಟುತ್ತಿದ್ದವು. ಮನುಷ್ಯನ ಈ ಸ್ಥಿತಿಯನ್ನು ಕಂಡು ಹೆದರಿದ ಆಮ್ಟೆ ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಭಯಪೀಡಿತರಾಗಿ ಮನೆಗೆ ಓಡಿದರು.

(ಡಾ. ಎಚ್. ವಿ. ಕೃಷ್ಣಮೂರ್ತಿ, ಬಾಬಾ ಆಮ್ಟೆ. ಪುಟ -೨೮)

೫. ಇಂಥ ವಿವರಗಳಿಗೆ ನೋಡಿ. ' ಬೆನ್ ಹರ್ ' ಎಂಬ ಪ್ರಸಿದ್ಧ ಸಿನಿಮಾ.

೬.ಗಿರಡ್ಡಿ ಗೋವಿಂದರಾಜ. ಜನ್ನನ ಯಶೋಧರ ಚರಿತೆ . ಸಂಪಾದಕರು. ಜಿ.ಎಸ್. ಶಿವರುದ್ರಪ್ಪ. ವಿಮರ್ಶೆಯ ದಾರಿ. ಬೆಂಗಳೂರು ವಿಶ್ವವಿದ್ಯಾಲಯ.

೭. ಶಿವರಾಮಯ್ಯ. ಪುಟ ೯೫ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. ಕರ್ನಾಟಕ ಸಾಹಿತ್ಯ ಅಕಾಡೆಮಿ.

೮. ಕನ್ನಡ ಕಾವ್ಯಲೋಕದಲ್ಲಿ ಅಮೃತಮತಿಯ ಪ್ರಸಂಗ ಒಂದು Red hot spot ಇದ್ದಂತೆ. ಅನೇಕ ಜನ ಸೃಜನ ಶೀಲ ಲೇಖಕರು ಯಶೋಧರ ಚರಿತೆಯನ್ನು ಆಧರಿಸಿ ಕಥೆ, ಕಾದಂಬರಿ, ನಾಟಕ, ಕವನ, ಇತ್ಯಾದಿ ರಚಿಸಿ ಧನ್ಯರಾಗಿದ್ದಾರೆ.

ಆಕರ ಗ್ರಂಥಗಳು

೧. ವಿಮರ್ಶೆಯ ದಾರಿ- ಸಂಪಾದಕರು. ಜಿ.ಎಸ್.ಶಿವರುದ್ರಪ್ಪ. ಬೆಂಗಳೂರು. ವಿವಿ.

೨. ದ್ರೌಪದಿಯ ಶ್ರೀಮುಡಿ - ಕುವೆಂಪು

೩. ಕಾವ್ಯ ಸಮೀಕ್ಷೆ - ತೀನಂಶ್ರೀ.

೪. ಯಶೋಧರ ಚರಿತೆ (ಗದ್ಯಾನುವಾದ) ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ.

೫. ಬಾಬಾ ಆಮ್ಟೆ - ಡಾ. ಎಚ್.ವಿ.ಕೃಷ್ಣಮೂರ್ತಿ.

೬. ಚರ್ಮರೋಗಗಳು - ಡಾ. ಎಚ್.ವಿ. ಕೃಷ್ಣಮೂರ್ತಿ.

ಭೂತಾರಾಧನೆ ಕೆಲವು ವಿಚಾರಗಳು

ಶ್ರೀಧರ ವಿ.

ಭೂತಾರಾಧನೆಯ ಸಮುದಾಯದಿಂದಲೇ ಬಂದ ಹಾಗೂ ಆ ಸಾಂಸ್ಕೃತಿಕ ಅನುಭವಗಳಿಂದಲೇ ಬೆಳೆದ ನನ್ನಂತವನಿಗೆ ಆಧುನಿಕ ಯುಗದ ಸಾಂಸ್ಕೃತಿಕ ಸವಾಲುಗಳ ಮಧ್ಯೆ ಇಂತಹ ಒಂದು ಆಚರಣೆಯನ್ನು ಭಿನ್ನ ನೆಲೆಯಿಂದ ಚರ್ಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಭೂತಾರಾಧನೆಯ ಸ್ವರೂಪ, ಭೂತಗಳಲ್ಲಿರುವ ಶ್ರೇಣಿಕರಣ ವ್ಯವಸ್ಥೆ ಮತ್ತು ಅದಕ್ಕೆ ಪೂರಕವಾಗಿ ಆ ಚೌಕಟ್ಟಿನಲ್ಲಿರುವ ಶ್ರೇಣಿಕರಣ ವ್ಯವಸ್ಥೆಯನ್ನು ವಿವರಿಸಲಾಗಿದೆ. ಭೂತಗಳ ಪ್ರದೇಶಮಿತಿ, ಚೌಕಟ್ಟಿನಲ್ಲಿರುವ ಶ್ರಮ ವಿಭಜನೆ, ಪರಸ್ಪರ ಹಸ್ತಕ್ಷೇಪವಿಲ್ಲದ ಕಸುಬಿನ ಪ್ರಾತಿನಿಧ್ಯ, ಕೋಮುಸೌಹಾರ್ದತೆ, ಆರ್ಥಿಕ ವ್ಯವಸ್ಥೆ, ಜಮೀನ್ದಾರಿ ಮತ್ತು ಗೇಣಿದಾರರು, ಭೂತಾರಾಧನೆ ಮತ್ತು ಆರಾಧಕರು ಮತ್ತು ಕೊನೆಯದಾಗಿ ಭೂತಾರಾಧನೆ ಒಂದು ಜನಪದ ಕಲೆಯೇ ಅಥವಾ ಅದಕ್ಕಿಂತ ಭಿನ್ನವಾಗಿರಬಹುದಾದ ಒಂದು ನಂಬಿಕೆ ವ್ಯವಸ್ಥೆಯೇ ? ಎಂಬ ಅಂಶಗಳನ್ನು ಚರ್ಚಿಸಲಾಗಿದೆ.

ತುಳುನಾಡಿನಲ್ಲಿ ಆಚರಣೆಯಲ್ಲಿರುವ ಭೂತಾರಾಧನೆಯು ಒಂದು ವಿಶಿಷ್ಟವಾದಂತಹ ಆರಾಧನೆಯಾಗಿದೆ. ಈ ಭೂತಗಳು ಅನಿಷ್ಟಪೀಡೆಯಾಗದೆ ಊರು ಗ್ರಾಮಗಳನ್ನು ರಕ್ಷಿಸುವ ದೈವಪ್ರತೀಕಗಳಾಗಿವೆ. ಇವುಗಳನ್ನು ದೈವಾರಾಧನೆ ಎಂದೂ, ಇವುಗಳ ಗುಡಿಗಳನ್ನು ಭೂತಸ್ಥಾನ ಅಥವಾ ದೈವಸ್ಥಾನ ಎಂತಲೂ ಕರೆಯುತ್ತಾರೆ. ಈ ಭೂತಗಳು ಸಾಮಾನ್ಯವಾಗಿ ಪೂಜೆ ಪುನಸ್ಕಾರಗಳನ್ನು ಪಡೆದು ಅವರನ್ನು ರಕ್ಷಿಸುವಂತಹ ಹೊಣೆಗಾರಿಕೆಯನ್ನು ಹೊತ್ತಿರುವುದು ಕಂಡುಬರುತ್ತದೆ. ಭೂತಗಳಿಗೆ ನಡೆಸಬೇಕಾಗಿರುವ ಸೇವಾಕಾರ್ಯಗಳಲ್ಲಿ ಯಾವುದೇ ಕೊರತೆಯುಂಟಾದರೆ ಸಂಬಂಧಪಟ್ಟ ಜನರು ಹಲವಾರು ತೊಂದರೆಗಳಿಗೆ ಈಡಾಗಬೇಕಾಗುತ್ತದೆ. ಆದುದರಿಂದ ಇಂತಹ ಆರಾಧನೆಗಳನ್ನು ಬಹಳಷ್ಟು ಶ್ರದ್ಧಾಭಕ್ತಿಗಳಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಈಗಲೂ ಕೆಲವು ಊರುಗಳಲ್ಲಿ ಊರನ್ನು ರಕ್ಷಿಸುವ ಭೂತ, ಗ್ರಾಮ ಅಥವಾ ಸೀಮೆಯನ್ನು ರಕ್ಷಿಸುವ ಭೂತಗಳು ಇರುತ್ತವೆ. ಕೆಲವು ಭೂತಗಳು ನಿರ್ದಿಷ್ಟ ಜಾತಿ ಅಥವಾ ಕುಟುಂಬ ವರ್ಗದವರಿಗೆ ಸೀಮಿತವಾಗಿರುವುದೂ ಉಂಟು. ಒಟ್ಟಾರೆ ಇವುಗಳನ್ನು ಸೀಮೆ ಭೂತ, ಮಾಗಣೆ (೩ ಅಥವಾ ೪ ಗ್ರಾಮಗಳು ಸೇರಿ) ಭೂತ, ಗ್ರಾಮದ ಭೂತ, ಊರಿನ ಭೂತ, ಕುಟುಂಬದ ಮತ್ತು ಜಾತಿವರ್ಗಗಳಿಗೆ ಮೀಸಲಾಗಿರುವ ಭೂತ ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಊರು, ಗ್ರಾಮ, ಸೀಮೆ ಭೂತಗಳ ಗುಡಿಗಳು ಆ ಊರಿನಲ್ಲಿ ಅಥವಾ ಆ ಗ್ರಾಮಗಳ ಪರಿಧಿಯಲ್ಲಿರುತ್ತವೆ. ಕುಟುಂಬ ಭೂತ ಅಥವಾ ಜಾತಿವರ್ಗಗಳಿಗೆ ಮೀಸಲಾಗಿರುವ ಭೂತಗಳು ಆ ಕುಟುಂಬದವರ ಜಾಗದಲ್ಲೂ ಅಥವಾ ಜಾತಿ ಜನಾಂಗದವರ ಜಾಗ ಅಥವಾ ಮನೆಯಲ್ಲೂ ಇರುತ್ತವೆ. ಇಲ್ಲಿ ಮುಖ್ಯವಾಗಿ ಗ್ರಾಮಭೂತ ಅಥವಾ ಸೀಮೆಭೂತಗಳ ಮಂಚಗಳು (ಭೂತಗಳ ಮೂರ್ತಿ, ಖಡ್ಗ, ಹೂಜಿ, ಇತ್ಯಾದಿಗಳನ್ನು ಇಡಲು ಮರದಿಂದ ಮಾಡಿರುವ ಒಂದು ಸಾಧನ) ಸಾಮಾನ್ಯವಾಗಿ ಊರಿನ ಅಥವಾ ಭೂತಾರಾಧನೆಯ ಚೌಕಟ್ಟಿನೊಳಗೆ ಬರುವ ಆ ಗ್ರಾಮದ ಮುಖ್ಯಸ್ಥ ಅಥವಾ ಒಂದನೇ ಮನೆ ಅಥವಾ ಗುತ್ತುಗಳಲ್ಲಿ ಇರುತ್ತವೆ. ಇದು ಭೂತಗಳು ನೆಲೆಯಾಗಿ ಆ ಮನೆಯಲ್ಲಿ ಹೂನೀರು ಸ್ವೀಕರಿಸಿದುದರ ಸಂಕೇತವಾಗಿರುತ್ತದೆ. ಇದರ ಜೊತೆಗೆ ಅವರ ಕುಟುಂಬ ದೈವದ ಗುಡಿ ಸಹ ಇರಬಹುದು.

ಭೂತಗಳ ನೆಲೆಗಳ ಕುರಿತು ಹಲವಾರು ಅಭಿಪ್ರಾಯಗಳಿವೆ. ಇವುಗಳನ್ನು ಗಮನಿಸಿದಾಗ ಕೆಲವು ಭೂತಗಳು ಹಿಂದೆ ಭೂಮಿಯಲ್ಲಿ ಕೆಳವರ್ಗದ ಜಾತಿಗಳಲ್ಲಿ ಸಾಮಾನ್ಯ ಮನುಷ್ಯರಾಗಿ ಹುಟ್ಟಿ ಅಂದು ಈ ಕೆಳವರ್ಗದವರಿಗೆ ಕಂಟಕ ಪ್ರಾಯವಾಗಿದ್ದ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿ "ವೀರಮರಣ" ಹೊಂದಿದವರು. ಮತ್ತೆ ಅವರು ಭೂತಗಳಾಗಿ ಈ ಕೆಳವರ್ಗದವರ ರಕ್ಷಕರಾಗಿದ್ದುಕೊಂಡು ಅವರಿಗೆ ಕಿರುಕುಳ ನೀಡುವ ಊಳಿಗದೊರೆಗಳನ್ನು ಅಥವಾ ಗುತ್ತಿನಮನೆಯವರನ್ನು ಪೀಡಿಸಿ ಅವರಿಂದ ಪೂಜೆಯನ್ನು ಸ್ವೀಕರಿಸಿ ತೃಪ್ತರಾಗುತ್ತವೆ. ಇವುಗಳಲ್ಲಿ ಕೆಲವು ಈ ಊಳಿಗ ದೊರೆಗಳ ಆಶ್ರಯದಲ್ಲೂ ಉಳಿದು ಅವರ ದೈವಗಳಾದುದು ಇವೆ. ಹಾಗೇ ಕೆಲವು ಭೂತಗಳು ಈಶ್ವರನ ಗಣಗಳಾಗಿದ್ದು ಭೂಮಿಗೆ ಕಳುಹಿಸಲ್ಪಟ್ಟವುಗಳು. ಕೆಲವು ಬ್ರಾಹ್ಮಣ ವರ್ಗದವರಿಂದಲೂ ಆರಾಧಿಸಲ್ಪಡುವ ಭೂತಗಳಿವೆ. ಹಿಂದೂ ಮುಸ್ಲಿಂ ಬಾಂಧವ್ಯವನ್ನು ಬೆಸೆಯಲು ಸಹಕಾರಿಯಾಗಿರುವ ಕೆಲವು ಭೂತಗಳೂ ಇವೆ. ಹೀಗೆ ಇದರ ಒಟ್ಟು ನೆಲೆಯನ್ನು ಪರಿಶೀಲಿಸಿದಾಗ ಎಲ್ಲಾ ವರ್ಗದ ಜನರಿಂದಲೂ ಈ ಭೂತಗಳು ಆರಾಧಿಸಲ್ಪಡುತ್ತವೆ.

ಭೂತಗಳು ನೆಲೆಯಾಗುವಾಗ ಕೆಲವು ಪಕ್ರಿಯೆಗಳಿಗೆ ಒಳಗಾಗಿರುವುದು ಕಂಡು ಬರುತ್ತದೆ. ಇವುಗಳು hierarchy, mutual quarrel, interference ಮತ್ತು ಇವುಗಳನ್ನು arbitration ಮೂಲಕ ಪರಿಹರಿಸಿ territorial boundary , non - interference ಮತ್ತು communal harmony ಮುಂತಾದವುಗಳನ್ನು ಪ್ರತಿಪಾದಿಸಿವೆ.

Hierarchy ಎಂದರೆ ಭೂತಗಳು ' ಶ್ರೇಣಿಕೃತ' ಮಾದರಿಯಲ್ಲಿ ನೆಲೆಸಿವೆ. ಯಾಕೆಂದರೆ (ಕೆಲವು) ಭೂತಗಳು ಒಂದು ಸಮುದಾಯ ಅಥವಾ ಜಾತಿ ವರ್ಗಕ್ಕೆ ಅನುಗುಣವಾಗಿ ನೆಲೆಗೊಂಡಿವೆ. ಇದು ಪ್ರಚಲಿತ ವಿದ್ದ ಜಾತಿಪದ್ಧತಿಗೆ ಪೂರಕವಾಗಿಯೇ ಇದೆ. ಉದಾಹರಣೆಗೆ

ಜಾರಂದಾಯ ಬ್ರಾಹ್ಮಣರ ಭೂತವಾದರೆ, ಕೋಟಿಚೆನ್ನಯ ಬಿಲ್ಲವರ ಭೂತಗಳಾಗಿವೆ. ಶ್ರೇಣಿವ್ಯವಸ್ಥೆಯನ್ನಾಧರಿಸಿ (ಜಾತಿ) ಭೂತದ ಕಾರ್ಯಗಳನ್ನು ಸಹ ಹಂಚಲಾಗಿದೆ. ಭೂತಗಳು ನೆಲೆಯಾಗುವಾಗ (ಪಾಡ್ದನಗಳು ತಿಳಿಸುವಂತೆ) ತಮ್ಮೊಳಗೆ ಜಗಳ ಕಾದು ತನ್ನ ಸೀಮೆಗೆ ಸಂಬಂಧಿಸಿ ಒಂದು ಭೂತವು ಹಸ್ತಕ್ಷೇಪ ಮಾಡಿದಾಗ ಮತ್ತೊಂದು ಭೂತವು ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿ ಈ ಭೂತಗಳ ಸೀಮೆ ಅಥವಾ ಪ್ರದೇಶ ವ್ಯಾಪ್ತಿಯನ್ನು ಗೊತ್ತುಮಾಡಿ ಇನ್ನು ಮುಂದೆ ಯಾವತ್ತೂ ಹಸ್ತಕ್ಷೇಪ ಮಾಡದಂತೆ ಪ್ರತಿಜ್ಞೆ ಮಾಡಿಸಿ ಇವಕ್ಕೆ ಉಡುಗೊರೆಯಾಗಿ ಮಧ್ಯಸ್ಥಿಕೆ ವಹಿಸಿದ ಭೂತವು ಗೌರವ ಆಶ್ರಯವನ್ನು ಪಡೆಯುತ್ತದೆ. ಇನ್ನೊಂದು ಕೋಮು ಸೌಹಾರ್ದತೆಯ ಒಪ್ಪಂದದಿಂದ ಒಂದು ಗ್ರಾಮದಲ್ಲಿ ನೆಲೆಸಿ ಹಿಂದೂ ಮುಸ್ಲಿಂ ಸಮುದಾಯಗಳ ಮಧ್ಯೆ ಸೌಹಾರ್ದತೆಯ ಕೊಂಡಿಯಂತಿರುತ್ತವೆ. ಇದರ ಸಂಕೇತವಾಗಿ ಇಂದಿಗೂ ದೈವ ಹಾಗೂ ಆ ದೇವರು ಭೇಟಿಯಾಗುವ ಪರಿಪಾಠವಿದೆ ಮತ್ತು ಎರಡು ಸಮುದಾಯದವರ ಉಪಸ್ಥಿತಿಯಲ್ಲಿ ವಾರ್ಷಿಕ ಸೇವೆಯು ನಡೆಯುವುದು ಬಹಳ ಮಹತ್ವಪೂರ್ಣವಾಗಿದೆ. ಯಾಕೆಂದರೆ ಈಗಿನ pseudo secularism ಪರಿಸ್ಥಿತಿಯಲ್ಲಿ ಈ ಭೂತಗಳೂ ಇಂದಿಗೂ ಸಮುದಾಯಗಳ ಮಧ್ಯೆ ಸೌಹಾರ್ದವನ್ನು ತರುವುದು ಮತ್ತು ಸಮುದಾಯಗಳು ಇದಕ್ಕೆ ಬದ್ಧವಾಗುವುದು ವಿಶೇಷವಾಗಿದೆ. ಹೀಗೆ ನೆಲೆಸಿದ ಭೂತಗಳು ಮುಸಲ್ಮಾನರ ಜೊತೆಗೆ ಬೆಸೆದ ಸಂಪರ್ಕವು ಒಂದು ಚಾರಿತ್ರಿಕ ಕಾಲಘಟ್ಟಕ್ಕೆ ಸಾಕ್ಷಿಯಾಗಿರುವಂತಿದೆ. ಅಂದರೆ ಇಲ್ಲಿ ಮುಸಲ್ಮಾನರ ಆಗಮನ ಅಥವಾ ಇರುವಿಕೆಯನ್ನು ಪ್ರತಿಪಾದಿಸುತ್ತದೆ. ಎರಡನೆಯದಾಗಿ ಹೆಚ್ಚಿನ ಭೂತಗಳು ನೆಲೆಯೂರುವಾಗ ಊಳಿಗದೊರೆಗಳನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಹೀಗೆ ಇದು ಹಲವು ಆರ್ಥಿಕ ವ್ಯವಸ್ಥೆಗೆ ಒಳಗಾಗಿ ಈ ಅಂಶ ಬೆಳಕಿಗೆ ಬರುವಾಗ ಜಮೀನ್ದಾರಿ ಅತ್ಯಂತ ವ್ಯವಸ್ಥಿತವಾಗಿ ನೆಲೆಗೊಂಡಿತು ಮತ್ತು ಈ ವ್ಯವಸ್ಥೆಯು ಭೂತಗಳನ್ನು ಹೆಚ್ಚು ಉಪಯೋಗ ಮಾಡಿಕೊಂಡಿತೆನ್ನಬಹುದು. ಆದ್ದರಿಂದ ಇಲ್ಲಿ ಚರಿತ್ರೆಯ ಕಾಲಘಟ್ಟಗಳು ವಿವಿಧ ಮಾನದಂಡಗಳಾಗಿ ಬಳಕೆಯಾಗಿರುವುದು ಕಂಡುಬರುತ್ತದೆ.

ಭೂತಗಳು ನೆಲೆಯೂರಿದ ಸಂದರ್ಭಗಳಲ್ಲಿ ಜನರಿಗೆ ಅಥವಾ ಊಳಿಗದೊರೆಗಳಿಗೆ ಪೀಡೆಯಾದಾಗ ಇವುಗಳನ್ನು ತಿಳಿಯಲು ಕಣಿಹೇಳುವವರ ಅಥವಾ ಸಾಮಾನ್ಯವಾಗಿ ತುಳುನಾಡಿನಲ್ಲಿ ಪ್ರಚಲಿತದಲ್ಲಿರುವ ' ಬಲ್ಯಾಯ' ಎಂಬ ಸಮುದಾಯದ ಪಾತ್ರವು ಮಹತ್ತರವಾಗಿದೆ. ಇವರ ಕಸುಬು ಕಣಿ ಅಥವಾ ಜ್ಯೋತಿಷ್ಯ ಮತ್ತು ಇವರಿಂದ ಭೂತಗಳ ಇರುವಿಕೆಯನ್ನು ತಿಳಿಯಲಾಗುತ್ತಿತ್ತು. ಆದ್ದರಿಂದ ಇಲ್ಲಿ ಪ್ರಧಾನವಾಗಿ ಜ್ಯೋತಿಷಿ ಬಲ್ಯಾಯನಾಗಿರುತ್ತಾನೆ. ವಿಶೇಷವೆಂದರೆ ಈಶ್ವರನ ಗಣಗಳಾದ ಭೂತಗಳು ಹೆಚ್ಚಾಗಿ ಬಲ್ಯಾಯನ ಮೂಲಕವೇ ತಮ್ಮ ಇರುವಿಕೆಯನ್ನು ತೋರಿಸಿರುವುದು ಪಾಡ್ದನಗಳಲ್ಲಿ

ಕಂಡುಬರುತ್ತದೆ. ಅಂದರೆ ಇಲ್ಲಿ ಬ್ರಾಹ್ಮಣರು ಪೌರೋಹಿತ್ಯದ ಜೊತೆಗೆ ಜ್ಯೋತಿಷ್ಯವನ್ನು ಅಭ್ಯಸಿಸುತ್ತಿದ್ದರೂ ಜ್ಯೋತಿಷ್ಯ ಬಲ್ಯಾಯ ವರ್ಗಕ್ಕೆ ಸೇರಿದೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಬ್ರಾಹ್ಮಣ ಜ್ಯೋತಿಷ್ಯರು ಭೂತಗಳ ಇರುವಿಕೆಯನ್ನು ಹೇಳಿದ್ದಾರೆ. (ಬಹುಶಃ ಆ ಪ್ರದೇಶದಲ್ಲಿ ಬಲ್ಯಾಯ ಸಮುದಾಯ ಇರಲಿಲ್ಲವೇನೊ). ಕೆಲವು ಭೂತಗಳು ದೊರೆಗಳಿಗೆ, ಮತ್ತಿತರರಿಗೆ ಕಷ್ಟಕಾರ್ಪಣ್ಯಗಳನ್ನು ನೀಡಿದಾಗ ಅದನ್ನು ದೂರೀಕರಸಲು ಪ್ರಯತ್ನಿಸಿ ವಿಫಲರಾದಾಗ ವಿಶೇಷವಾಗಿ ಸ್ವಪ್ನದಲ್ಲಿ ಬಂದು ಇರುವಿಕೆಯನ್ನು ತೋರಿಸಿವೆ.

ಬ್ರಾಹ್ಮಣರು ದೇವಾಲಯಗಳ ಅರ್ಚಕರಾದುದರಿಂದ ಅವರಿಗೆ ತಂತ್ರಿಸ್ಥಾನವನ್ನು ನೀಡಲಾಯಿತು. ಹೆಚ್ಚಿನ ಭೂತಗಳಿಗೆ ಬಿಲ್ಲವರೇ ಪೂಜಾರಿಗಳು. ಕೆಲವೆಡೆ ಬಂಟರು ಸೇರಿದಂತೆ ಇತರ ಜಾತಿಯವರು ಭೂತಗಳ (ಪಾತ್ರಿ) ಪೂಜಾರಿಗಳಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಪೂಜಾರಿಯು ಭೂತಾಲಯ ಪ್ರವೇಶಿಸಲು ಅಸಮರ್ಥ ಅಥವಾ ಅಶುದ್ಧಿಯಾದರೆ ಅವನ ಕಾರ್ಯವನ್ನು ಬ್ರಾಹ್ಮಣರು ನೆರವೇರಿಸುತ್ತಾರೆ. ಹೀಗೆ ವಿಶ್ಲೇಷಿಸುವಾಗ ಬ್ರಾಹ್ಮಣರಿಂದ ಹಿಡಿದು ಕೆಳಜಾತಿಯುವರ ತನಕ ಕೆಲವರು ಭೂತಗಳ ಪೂಜಾರಿಗಳಾಗಿರುತ್ತಾರೆ. ಹೀಗೆ ಭೂತಗಳಲ್ಲಿ ಶ್ರೇಣಿ ವ್ಯವಸ್ಥೆ ಇರುವಂತೆ ಭೂತದ ಪಾತ್ರಿ ವರ್ಗದಲ್ಲೂ ಶ್ರೇಣಿಕೃತ ವ್ಯವಸ್ಥೆ ಇದೆ. ಇದಕ್ಕೆ ಪೂರಕವಾಗಿ ಭೂತ ಕಟ್ಟುವವ/ ಕಲಾವಿದರಲ್ಲೂ ಶ್ರೇಣಿವ್ಯವಸ್ಥೆ ಇದೆ. ಉದಾಹರಣೆಗೆ ಉಚ್ಚ ದೈವ ಅಥವಾ ರಾಜನ್ ದೈವಗಳ ನೃತ್ಯ ನಡೆಸುವ ಕಲಾವಿದರು ಒಂದೋ ಪಂಬದ ಅಥವಾ ಪರವ ವರ್ಗಕ್ಕೆ ಸೇರಿದರೆ ಇತರ ದೈವಗಳ ಸೇವೆಯನ್ನು ನಲ್ಕೆಯವರೆಂಬ ಸಮುದಾಯ ನಡೆಸುತ್ತದೆ. ಹೀಗೆ ಭೂತ, ಭೂತದ ಪಾತ್ರಿ (ಪೂಜಾರಿ) ಮತ್ತು ಭೂತಕಟ್ಟುವವರು ಈ ಮೂವರೊಳಗೆ ಒಂದು ವಿಧದ ಶ್ರೇಣಿ ವ್ಯವಸ್ಥೆ ಇದ್ದು ಸಾವಯುವ ಸಂಬಂಧವಿರುವ ಪ್ರಕ್ರಿಯೆ ಕಂಡುಬರುತ್ತದೆ ಮತ್ತು ಇದನ್ನು ಬೇರ್ಪಡಿಸುವುದು ಬಹಳ ಕಷ್ಟವಾಗಿದೆ.

ಭೂತಾರಾಧನೆ ವ್ಯವಸ್ಥೆಯಲ್ಲೂ ಶ್ರಮವಿಭಜನೆ ಇದ್ದು ಅದು functional ಅಥವಾ occupational representation ರೂಪದಲ್ಲಿರುತ್ತದೆ. ಹೀಗೆ ಭೂತ, ಭೂತಪಾತ್ರಿ ಮತ್ತು ಭೂತಕಟ್ಟುವವರಲ್ಲಿ ಶ್ರೇಣಿ ವ್ಯವಸ್ಥೆ ಇದೆಯೋ ಹಾಗೆಯೇ ಒಟ್ಟಾರೆ ಭೂತಾರಾಧನೆ ಚೌಕಟ್ಟಿನಲ್ಲೂ ಈ ಶ್ರೇಣಿವ್ಯವಸ್ಥೆ ಜಾತಿ ರೂಪದಲ್ಲಿದೆ. ಬ್ರಾಹ್ಮಣನು ತಂತ್ರಿಯಾದರೆ, ಬಂಟನು ಮಧ್ಯಸ್ಥನಾಗಿರುತ್ತಾನೆ. ಕೆಲವೆಡೆ ಜೈನರು ಮಧ್ಯಸ್ಥರಾಗಿರುತ್ತಾರೆ. ಬಿಲ್ಲವರು ಪಾತ್ರಿಯಾದರೆ, ಮಡಿವಾಳರು ಬಟ್ಟೆ ತೊಳೆಯುವ ಮತ್ತು ದೀವಟಿಗೆ ಹಿಡಿಯುವ, ಗಾಣಿಗರು ಎಣ್ಣೆ ತರುವ, ಕೊಂಬು ಊದುವ, ಸೇರಿಗಾರರು ವಾಲಗ ಊದುವ, ಕೆಲವರು ಪಲ್ಲಕ್ಕಿ ಹೊರುವ ಹಾಗೂ ಇತರ ಹತ್ತು ಹದಿನಾರು ಕಸುಬುಗಳನ್ನು ಮಾಡುವ ಜಾತಿ ವರ್ಗಗಳಿವೆ. ಒಂದು ಭೂತಾರಾಧನೆಯ ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಈ ಶ್ರಮವಿಭಜನೆಯಲ್ಲಿ ಜಾತಿ ಆಧಾರವಾಗಿ ವ್ಯತ್ಯಾಸಗಳು ಇರುತ್ತವೆ. ಇದಕ್ಕೆ ಆ ಭೂತ ನೆಲೆಯಾಗುವಾಗ ಈ

ಶ್ರಮವಿಭಜನೆಯಲ್ಲಿ ಜಾತಿ ಆಧಾರವಾಗಿ ವ್ಯತ್ಯಾಸಗಳು ಇರುತ್ತವೆ. ಇದಕ್ಕೆ ಆ ಭೂತ ನೆಲೆಯಾಗುವಾಗ ಮಾಡಿಕೊಂಡ ವ್ಯವಸ್ಥೆಯು ಕಾರಣವಾಗಿರಬಹುದು. ಹೀಗೆ ಇಲ್ಲೂ ಸಹ ಶ್ರೇಣೀಕೃತ ಮಾದರಿಯಲ್ಲಿ ಶ್ರಮ ವಿಭಜನೆ ಮತ್ತು ಕಾರ್ಯಪ್ರಾತಿನಿಧ್ಯವಿದ್ದು ಒಂದು ಸಮುದಾಯ ಇನ್ನೊಂದರ ಮಧ್ಯೆ ಹಸ್ತಕ್ಷೇಪ ನಡೆಸದಂತೆ ವ್ಯವಸ್ಥೆ ಮಾಡಲಾಗಿದೆ.

ಊಳಿಗಮಾನ್ಯದ ಮುಂದುವರಿಕೆಯಿಂದ ಜಿಲ್ಲೆಯಲ್ಲಿ ಜಮೀನ್ದಾರಿ ಬಲಗೊಂಡು ಕೆಲವು ಬಲಿಷ್ಠರ ಕೈಯಲ್ಲಿ ಕೇಂದ್ರೀಕರಿಸಿತು. ಉದಾಹರಣೆಗೆ ಬಂಟರು, ಭಾಗಶಃ ಬ್ರಾಹ್ಮಣ ಹಾಗೂ ಜೈನ ಸಮುದಾಯಗಳು ಹಾಗೂ ಕೆಲವು ದೇವಸ್ಥಾನಗಳ ಅಧೀನದಲ್ಲಿ ಭೂಮಿ ಇರುತ್ತಿತ್ತು. ಬ್ರಿಟಿಷರ ಆಗಮನದಿಂದ ಕೆಲವು ಚರ್ಚುಗಳು ಭೂಮಿಯನ್ನು ಹೊಂದಿದುವು. ಕ್ರಮೇಣ ಈ ಭೂತಗಳು ಜಮೀನ್ದಾರರ ವಶವಾಗಿ ಅವರ ಹಿತಾಸಕ್ತಿ ರಕ್ಷಿಸುವ ಸೊತ್ತುಗಳಾದವು. ಯಾಕೆಂದರೆ ಈ ಗುತ್ತಿನ ಮನೆತನಗಳು ಬಲಿಷ್ಠವಾಗಿದ್ದು ಹೆಚ್ಚು ಭೂಮಿಯನ್ನು ಹೊಂದಿದ್ದು ಇತರರು ಜಮೀನ್ದಾರರ ಗೇಣಿದಾರರಾಗಿದ್ದರು. ಭೂತದ ಪೂಜಾರಿ ಮತ್ತು ಭೂತ ಕಟ್ಟುವವರು ಸಹ ಅವರ ಆಧೀನದಲ್ಲಿದ್ದರು. ಬ್ರಾಹ್ಮಣರನ್ನು ಬಿಟ್ಟರೆ ಎರಡನೆ ಸ್ಥಾನವು ಗುತ್ತಿನ ಮನೆಗೆ ಸಲ್ಲುವುದರಿಂದ ಭೂತದ ಕಾರ್ಯಕ್ಕೆ ಗುತ್ತು ಮೊದಲ ಪ್ರಾಶಸ್ತ್ಯವಾಗಿತ್ತು. ಗುತ್ತಿನವನು ಮಧ್ಯಸ್ಥನಾದುದರಿಂದ ಭೂತದ ಸೇವೆಯು ಆವನ ಒಲವನ್ನು ಅವಲಂಬಿಸಿತ್ತು. ಒಂದು ವೇಳೆ ಭೂತಕಟ್ಟುವವರು ಇಲ್ಲದಿದ್ದಲ್ಲಿ ಪಕ್ಕದ ಗ್ರಾಮದಿಂದ ಇನ್ನೊಬ್ಬ ಬೂತಕಟ್ಟುವವರನ್ನು ಕರೆಸಿ ಸೇವೆ ನಡೆಸಬಹುದು. ಆದರೆ ಸೇವೆ ಕೊಡುವ ಅಥವಾ ಮಾಡುವ ಗುತ್ತಿನವನು ಇಲ್ಲವಾದರೆ ಭೂತದ ಸೇವೆಯು ನಿಲ್ಲುವುದು. ಭೂತದ ಬಗ್ಗೆ ಭಯ ಭಕ್ತಿ ಎಲ್ಲರಿಗೂ ಹಾಸು ಹೊಕ್ಕಾಗಿತ್ತು. ಭೂತದ ಸೇವೆಯನ್ನು ಕ್ಲಪ್ತ ಸಮಯಕ್ಕೆ ನಡೆಸಿದರೆ ಸಮೃದ್ಧಿಯುಂಟಾಗುವುದೆಂಬ ನಂಬಿಕೆಯಿತ್ತು. ಸಾಮಾನ್ಯವಾಗಿ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಕಾಲಘಟ್ಟಗಳಿಗೆ ಸಂಬಂಧಿಸಿ ಭೂತಾರಾಧನೆ ಒಂದಕ್ಕೊಂದು ಪೂರಕವಾಗಿತ್ತು. ಅಂದರೆ ಜಮೀನ್ದಾರನ ಹಿತರಕ್ಷಣೆ, ಗೇಣಿದಾರನ ಶೋಷಣೆ ಮತ್ತು ನಿಯಂತ್ರಣ. ಕ್ರಮೇಣ ಜಮೀನ್ದಾರನ ಹಿತರಕ್ಷಣೆ, ಗೇಣಿದಾರನ ಶೋಷಣೆ ಮತ್ತು ನಿಯಂತ್ರಣ. ಕ್ರಮೇಣ ಜಮೀನ್ದಾರನ status quo ಅಂದರೆ ರಕ್ಷಣೆ ಗುರಿಯಾದರೆ (ends) ಭೂತಾರಾಧನೆ ಮತ್ತು ವ್ಯವಸಾಯ ಸಾಧನವಾಯಿತು (means) ಮತ್ತು ಭೂತವು ಸಾಧಕ (instrument) ವಾಯಿತು. ಗೇಣಿದಾರರು ಸಿಡಿದೇಳದಂತೆ ನೋಡಿಕೊಳ್ಳುವುದು ಜಮೀನ್ದಾರನ ಆದ್ಯ ಕರ್ತವ್ಯವಾಗಿತ್ತು. ಗೇಣಿದಾರರು ದಂಗೆಯೇಳದಂತೆ ಹತೋಟಿಯಲ್ಲಿಡಲು ಒಂದೋ ನೇರ ಮುಖಾಮುಖಿ ಕಾದಾಡುವುದು ಅಥವಾ ಪರೋಕ್ಷವಾಗಿ ನಂಬಿಕೆಯ (faith) ಮೂಲಕ ಹತೋಟಿಯಲ್ಲಿಡುವುದು . ಇಲ್ಲಿ ಗೇಣಿದಾರರನ್ನು passive ಆಗಿರಿಸಲು ಜಮೀನ್ದಾರಿಯು ಭೂತಾರಾಧನೆಯನ್ನು ವೈಭವೀಕರಿಸಿ ನೇರವಾಗಿ ನಂಬಿಕೆಯ

ಸಾಧನವಾಗಿಸಿಕೊಂಡಿತು. ಅಂದರೆ ಜಮೀನ್ದಾರನ ವಿರುದ್ಧ ಸಿಡಿದೇಳುವುದೆಂದರೆ ಭೂತದ ವಿರುದ್ಧ ಸಿಡಿದೇಳುವುದು ಎಂಬರ್ಥವನ್ನು ಕಲ್ಪಿಸಿದಂತಾಯಿತು. ಸಿಡಿದೆದ್ದರೆ ತಮ್ಮ ಕೆಲಸ ಕಳೆದುಕೊಳ್ಳಬೇಕಾಗುವುದು ಮತ್ತು ಸಮೃದ್ಧಿ ಇಲ್ಲದಂತಾಗುತ್ತದೆ. ಇದಕ್ಕೆ ಪ್ರತಿಯಾಗಿ ಭೂತವು ಗೇಣಿದಾರರನ್ನು ಶಿಕ್ಷಿಸುವುದು ಎಂಬ ನಂಬಿಕೆಯನ್ನು ಹರಡಲಾಯಿತು. ಎಂದರೆ ಭೂತವು ಜಮೀನ್ದಾರರನ್ನು ರಕ್ಷಿಸುವಂತಾಯಿತು. ಏಕೆಂದರೆ ಹೆಚ್ಚಿನ ಗುತ್ತಿನ ಮನೆಗಳಲ್ಲಿ ಭೂತದ ಮಂಚ ಇರುತ್ತಿತ್ತು. ಭೂತದ ಸೇವೆಯ ಸಂದರ್ಭದಲ್ಲಿ ಭೂತವು ಆವೇಶದಲ್ಲಿ ಗುತ್ತಿನ ಮನೆಗೆ ಬಂದು ಹಾಲು, ಕೋಳಿ ಇತ್ಯಾದಿ ಸ್ವೀಕರಿಸುತ್ತದೆ. ಇದು ಗೇಣಿದಾರರು ಅಥವಾ ಭೂತದ ಪರಿಚಾರಕರು ಗುತ್ತಿನ ಮನೆಯನ್ನು ಭೂತದ ಮೇಲೆ ಭಯ ಭಕ್ತಿ. ಭೂತಸೇವೆ ನಿಂತಲ್ಲಿ ಸಮೃದ್ಧಿಯಿಲ್ಲ. ಹಾಗಾದಲ್ಲಿ ಗೇಣಿದಾರರಿಗೆ ಮತ್ತು ಭೂತದ ಪರಿಚಾರಕರಿಗೆ ಹೊಟ್ಟೆ ಪಾಡಿನ ಸಮಸ್ಯೆ . ಭೂತಕಟ್ಟುವವರು ಭೂತದ ಸೇವೆಯ ಸಂದರ್ಭದಲ್ಲಿ ಜಮೀನ್ದಾರನು ಹೇಳಿದಂತೆ ನಡೆಯದಿದ್ದಲ್ಲಿ ಈತನನ್ನು ನಿರ್ಲಕ್ಷಿಸಿ ಬೇರೆ ಗ್ರಾಮದಿಂದ ಭೂತಕಟ್ಟುವವರನ್ನು ಜಮೀನ್ದಾರನು ತರುತ್ತಿದ್ದನು. ಇದರಿಂದಾಗಿ ಈತನು ಜಮೀನ್ದಾರನ ಮಾತನ್ನು ಪಾಲಿಸುತ್ತಿದ್ದನು. ಇದಕ್ಕೆ ಪ್ರತಿಯಾಗಿ ಆ ಗ್ರಾಮದಲ್ಲಿ ಅಲ್ಲಿನ ಭೂತಕಟ್ಟುವವರಲ್ಲಿ ಮಾತ್ರ ಭೂತ ಸೇವೆಮಾಡಿಸುವುದು ಎಂಬ ಕಟ್ಟುಪ್ಪಣೆಯಿತ್ತು. ಹಾಗೆಯೇ ಭೂತದ ಇತರ ಪರಿಚಾರಕರು (ಇವರೂ ಗೇಣಿದಾರರೆ) ಯಾವುದೇ ಕಾರಣಕ್ಕೂ ಭೂತದ ಕಾರ್ಯವನ್ನು ತಪ್ಪದೇ ಮಾಡುತ್ತಿದ್ದರು. ಹೀಗೆ ಇಲ್ಲಿ ಜಮೀನ್ದಾರನು ಭೂತಕಟ್ಟುವವನ್ನೊಳಗೊಂಡು ಪರಿಚಾರಕರು ಅಥವಾ ಗೇಣಿದಾರರಿಗೆ ಹಸ್ತಕ್ಷೇಪವಿಲ್ಲದ ಪ್ರದೇಶಮಿತಿಯ ಒಪ್ಪಂದವನ್ನು ಮಾಡಿರುವಂತಿದೆ. ಶೋಷಣೆಯಿದ್ದರೂ ಒಂದು ರೀತಿಯ ಮಾನಸಿಕ ತೃಪ್ತಿ ಇತ್ತು. ಹೀಗಾಗಿ ಭೂತಕಟ್ಟುವವರು ಮತ್ತು ಗುತ್ತಿನಮನೆ ಅಥವಾ ಜಮೀನ್ದಾರನ ಮಧ್ಯೆ ಒಂದು ಒಪ್ಪಂದ ಆಗಿರುವಂತೆ ಕಂಡುಬರುತ್ತದೆ. ಭೂತದ ಪರ್ವ ಅಥವಾ ಸೇವೆಯ ಸಂದರ್ಭದಲ್ಲಿ ಜಮೀನ್ದಾರನು ಭೂತಕಟ್ಟುವವರನ್ನು ತನ್ನ ಮನೆಗೆ ಕರೆಸಿ ತನ್ನ ಪರವಾಗಿ ಇರಲೆಂದು ಭಕ್ಷೀಸನ್ನು ನೀಡುತ್ತಿದ್ದನು. ಇದರಿಂದಾಗಿ ಭೂತವು (ಅಂದರೆ ಭೂತಕಟ್ಟುವವರು ಸೇವೆ ಮಾಡುವಾಗ) ಯಾವುದೇ ಕಾರಣಕ್ಕೂ ಜಮೀನ್ದಾರನನ್ನು ರಕ್ಷಿಸುತ್ತಿತ್ತು ಮತ್ತು ಇತರರು ತಮ್ಮ ಕೆಲಸಗಳನ್ನು ತಪ್ಪದೇ ಮಾಡುತ್ತಿದ್ದರು.

ಈ ವ್ಯವಸ್ಥೆ ಸಾಮಾನ್ಯವಾಗಿ ತೀರಾ ಇತ್ತೀಚಿನವರೆಗೂ ಪ್ರಚಲಿತದಲ್ಲಿತ್ತು. ಗೇಣಿದಾರರು ಸಿಡಿದೇಳಬೇಕಾದರೆ ಅವರಿಗೆ ಭೂತದ ಭಯ ಕಡಿಮೆ ಆಗಬೇಕು. ಅದು ಸಾಧ್ಯವಾಗದ ಮಾತು. ಭೂತಕಟ್ಟುವವರು ಗೇಣಿದಾರನಾದರೂ ಸೇವೆಯ ಸಂದರ್ಭದಲ್ಲಿ ಜಮೀನ್ದಾರರ ಪರವಾಗಿರುತ್ತಾನೆ. ವಸಾಹತೋತ್ತರ ವ್ಯವಸ್ಥೆಯಲ್ಲೂ ಈ ಪದ್ಧತಿ ಭಿನ್ನವಾಗಿರಲಿಲ್ಲ. ಆದರೆ ಕೆಲವು ಗೇಣಿದಾರರ ಮಕ್ಕಳು ಮರಿಗಳು ಹಂತಹಂತವಾಗಿ ವಿದ್ಯಾವಂತರಾದುದರಿಂದ

ಪರ್ಯಾಯ ಉದ್ಯೋಗವನ್ನರಸಿ ನಗರೀಕರಣ, ಸಮಾಜ ಸುಧಾರಣಾ ಪಂಥಗಳ ಪ್ರಭಾವ, ಹಂಚಿನ ಕಾರ್ಖಾನೆ ಮತ್ತಿತರ ಕಾರ್ಮಿಕ ಸಂಘಟನೆ, ಭೂದಾನ ಚಳವಳಿ ಪ್ರಭಾವ, ಸಾಂವಿಧಾನಿಕ ಹಕ್ಕು ಬಾಧ್ಯತೆಗಳು, ಮೀಸಲಾತಿ, ಸರಕಾರದ ನಿಲುವುಗಳು, ಸ್ಥಳೀಯ ಸ್ವಸರಕಾರ ಸಂಸ್ಥೆಗಳ ಸಂಘಟನೆ, ಬ್ಯಾಂಕ್ ರಾಷ್ಟ್ರೀಕರಣ ಮತ್ತು ಮುಖ್ಯವಾಗಿ ಭೂಮಸೂದೆ ಮುಂತಾದ ಪ್ರಕ್ರಿಯೆಗಳಿಂದ ಹೆಚ್ಚು ಹೆಚ್ಚು ಪುರೋಗಾಮಿಯಾದರು.

ಭೂಮಸೂದೆಯು ಭೂತಾರಾಧನೆಯಲ್ಲಿ ಒಂದು ಪ್ರಮುಖ ಘಟ್ಟ. ಗೇಣಿದಾರರು ಭೂ ಮಾಲೀಕರಾದರು. ಜಮೀನ್ದಾರರ ನಿಯಂತ್ರಣ ಕೈ ತಪ್ಪಿ ಹೋಗುವಂತಾಯಿತು. ಆದರೆ ಭೂತಾರಾಧನೆಯ ಮಧ್ಯಸ್ಥಿಕೆ ಬಂಟರು ಹಾಗೂ ಮತ್ತಿತರ ಕೈಯಲ್ಲಿ ಉಳಿಯಿತು. ಯಾಕೆಂದರೆ ಭೂತಾರಾಧನೆಯನ್ನು ಸಂಪೂರ್ಣವಾಗಿ ಬಿಟ್ಟು ಬಿಡುವುದು ಭೂಮಿ ಕಳೆದುಕೊಂಡ ಗುತ್ತಿನ ಮನೆಯವರಿಗೂ ಹಾಗೂ ಭೂಮಿ ಪಡೆದ ಗೇಣಿದಾರರಿಗೂ ಕಷ್ಟ. ನಂಬಿಕೆ ಅಷ್ಟು ಪ್ರಬಲವಾಗಿತ್ತು. ಈ ಮಧ್ಯೆ ಅವರೊಳಗೆ ಒಂದು ವಿಧದ ಒಪ್ಪಂದವೇರ್ಪಟ್ಟು ಆ ಪ್ರಕ್ರಿಯೆಯಲ್ಲಿ ಭೂತಾರಾಧನೆ ನಡೆಯುತ್ತಾ ಬಂತು. ಇತ್ತೀಚೆಗೆ ಹಿಂದಿನ ಭಾಗಶಃ ಜಮೀನ್ದಾರಿ ತನ್ನ ಆರ್ಥಿಕ, ವೃತ್ತಿಪರ ಮತ್ತು ಲಾಭದಾಯಕ ಪ್ರಗತಿಯಿಂದ revival ಆಗಿ ಭೂತಾರಾಧನೆಯ ಮೇಲಿನ ತನ್ನ ಹಿಡಿತವನ್ನು ಪುನರ್‌ಸ್ಥಾಪಿಸಲು ಇದನ್ನು ವೈಭವೀಕರಿಸುವ ಪ್ರಯತ್ನ ಮಾಡುತ್ತಿದೆ. ಜೊತೆಗೆ ಬದಲಾದ ರಾಜಕೀಯ ಸನ್ನಿವೇಶ, ವ್ಯಾಪಕವಾಗಿ ನಡೆಯುವ ದೇವಸ್ಥಾನ, ದೈವಸ್ಥಾನ ಪುನರ್ ನವೀಕರಣ ಮತ್ತು ವೈಭವೀಕರಣ, ಧಾರ್ಮಿಕ ಮತ್ತು symbolic identity ಯಿಂದ ಪ್ರೇರಿತವಾದ ಸಾಸ್ಕೃತಿಕ ರಾಜಕಾರಣ ಹಾಗೂ ಈ ವ್ಯವಸ್ಥೆಯ revival ಇವೆಲ್ಲವೂ ಪ್ರಮುಖವಾಗಿ ಭೂತಾರಾಧನೆ ಮುಂದುವರೆಸಿಕೊಂಡು ಹೋಗಲು ಕಾರಣವಾಗಿವೆ.

ಭೂ ಮಸೂದೆಯಿಂದ ಗೇಣಿದಾರರು ಭೂಮಿ ಪಡೆದರೂ ಭೂತಕಟ್ಟುವವರು ಇದರ ಪ್ರಯೋಜನ ಪಡೆದಿಲ್ಲ. ಮೂಲತಃ ಅವರು ಗೇಣಿದಾರರಲ್ಲ ಬದಲಾಗಿ ಕೂಲಿಗಳು. ಅವರು ಭೂತಾರಾಧನೆಯ ಸಂದರ್ಭದಲ್ಲಿ ಭೂತ ಸೇವೆಯನ್ನು, ಇನ್ನುಳಿದ ಸಂದರ್ಭಗಳಲ್ಲಿ ಜಮೀನ್ದಾರರ ಹೊಲಗಳಲ್ಲಿ ಕೂಲಿಗಳಾಗಿ ದುಡಿಯುತ್ತಿದ್ದರು. ಕೆಲವೇ ಮಂದಿ ಒಂದು ನಿರ್ದಿಷ್ಟ ಗ್ರಾಮದಲ್ಲಿ ಭೂತಾರಾಧನೆ ಸೇವೆ ನಡೆಸುವುದರಿಂದ ಆ ದೈವಸ್ಥಾನಕ್ಕೆ ಸಂಬಂಧಪಟ್ಟ ಭೂಮಿಯಲ್ಲಿ ಇವರು ಕೂಲಿಗಳಾಗಿದ್ದು ಕ್ರಮೇಣ ಭೂತಾರಾಧನೆಯ ಸೇವೆಗೆ ಬಳುವಳಿಯಾಗಿ ದೈವಸ್ಥಾನದ ತುಂಡುಭೂಮಿಯನ್ನು ಇವರಿಗೆ ಬೇಸಾಯ ಮಾಡಲು ನೀಡಲಾಗಿದೆ. ಇದು ದೈವಸ್ಥಾನ ಮತ್ತು ಆ ಗ್ರಾಮದ ಮಿತಿಯಲ್ಲಿದ್ದುದರಿಂದ ಭೂತಕಟ್ಟುವವನು ಭೂತ ಸೇವೆ ಮಾಡಲು ಅಶಕ್ತನಾದರೆ ಮತ್ತು ಅವನ ಮಕ್ಕಳು ಜಮೀನ್ದಾರನ ಹೇಳಿಕೆಗೆ ಸಮರ್ಪಕವಾಗಿ ಸೇವೆ ನಡೆಸಲು ಅನರ್ಹರಾದರೆ ಇನ್ನೊಬ್ಬನನ್ನು ತಂದು ಆ ಜಾಗದಲ್ಲಿ ಆತನು ಭೂತದ

ಕಾರ್ಯ ಮಾಡುವ ತನಕ ಇರಿಸುತ್ತಿದ್ದರು. ಇದರಿಂದ ಭೂತಕಟ್ಟುವವರಿಗೆ ಆ ಭೂಮಿಯಲ್ಲಿ ಶಾಶ್ವತ ಹಕ್ಕು ಇಲ್ಲದೆ ಇಂದಿಗೂ ಅಂತಹ ಕೆಲವು ಭೂಮಿಯು ದೈವಸ್ಥಾನದ ಅಥವಾ ಇನ್ನಿತರರ ವಶದಲ್ಲಿರುತ್ತದೆ. ಇದರಿಂದ ನಿರ್ಗತಿಕರಾದ ಇವರು ಬೀದಿಪಾಲಾಗಿ ಸರಕಾರದ ದರ್ಖಾಸ್ತು ಭೂಮಿಗೆ ಮೊರೆ ಹೋಗಬೇಕಾಗುತ್ತದೆ. ಏನೋ ಬೆರಳೆಣಿಕೆಯಷ್ಟು ಮಂದಿ ತಮ್ಮ ಮಕ್ಕಳ ಜೊತೆ ಈ ಕಸುಬನ್ನು ಸಮರ್ಥವಾಗಿ ನಡೆಸಿಕೊಂಡು ಬಂದು ಭೂಮಿಯನ್ನು ಪಡೆದಿರಬಹುದು ಅಥವಾ ಈ ಪ್ರಕ್ರಿಯೆಯಲ್ಲಿ ಈಗಲೂ ಸಹ ಅಂಥ ಕೆಲವು ಭೂಮಿಗಳ ವ್ಯಾಜ್ಯ, ಕೋರ್ಟು, ಕಛೇರಿ ಅಥವಾ ದೈವಸ್ಥಾನದ ಆಧೀನದಲ್ಲಿ ಇವೆ. ಆದರೆ ಬರುಬರುತ್ತಾ ಭೂತಕಟ್ಟುವವರಲ್ಲಿ ಒಂದು ವಿಧದ ಭಯ ಆವರಿಸಿತ್ತು. ಏಕೆಂದರೆ ಅವರು ಭೂತಸೇವೆಯ ಸಂದರ್ಭದಲ್ಲಿ ಸರಿ ತಪ್ಪುಗಳನ್ನು ವಿಮರ್ಶಿಸದೆ ಜಮೀನ್ದಾರರ ಪರವಾಗಿ ನ್ಯಾಯತೀರ್ಪುಗಳನ್ನು ನೀಡುತ್ತಿದ್ದುದರಿಂದ ತಾವು ಭೂತಗಳಿಗೆ ದ್ರೋಹ ಮಾಡುತ್ತೇವೆ ಮತ್ತು ಇವು ನಮ್ಮನ್ನು ಶಿಕ್ಷಿಸುವುವು ಎಂಬ ಪಾಪ ಪ್ರಜ್ಞೆಯ ಭೀತಿ ಕಾಡತೊಡಗಿತು. ಇತರ ಗೇಣಿದಾರರು ಜಮೀನ್ದಾರನ ಪರವಾಗಿರುವ ಭೂತಾರಾಧನೆಯ ಉದ್ದೇಶವನ್ನು ಪ್ರಶ್ನಿಸತೊಡಗಿದರು. ಪರಿಣಾಮವಾಗಿ ಇವರು ಸಂಕಷ್ಟಕ್ಕೆ ಸಿಲುಕಿದರು. ಜಮೀನ್ದಾರನಿಗೆ ವಿರುದ್ಧವಾಗಿ ಸರಿತಪ್ಪುಗಳನ್ನು ವಿಮರ್ಶಿಸಿ ನ್ಯಾಯ ತೀರ್ಮಾನ ನೀಡಿದಾಗ ಒಬ್ಬ ಭೂತಕಟ್ಟುವವರನ್ನು ಬಿಟ್ಟು ಬೇರೆ ಗ್ರಾಮದವರಲ್ಲಿ ಜಮೀನ್ದಾರನು ಭೂತದ ಸೇವೆಯನ್ನು ನಡೆಸುವಂತಾಯಿತು. ಇದರಿಂದ ಆ ಗ್ರಾಮದ ಭೂತಕಟ್ಟುವವನು ಜಮೀನ್ದಾರರ ಮತ್ತು ಜೊತೆಗೆ ಗೇಣಿದಾರರ ಕೋಪಕ್ಕೂ ಈಡಾಗಬೇಕಾಯಿತು. ಹೀಗೆ ಈತನು ತನ್ನ ಭೂಮಿ ಮತ್ತು ಹೊಟ್ಟೆಪಾಡಿಗೆ ಇರುವ ಕಸುಬನ್ನು ಕಳೆದುಕೊಳ್ಳುವಂತಾಗಿತ್ತು. ಹೀಗೆ ವ್ಯವಸ್ಥೆಯು ಭೂತಕಟ್ಟುವವರು ಕಸುಬಿಗೋಸ್ಕರ ಒಬ್ಬರಿಗೊಬ್ಬರು ಹೊಡೆದಾಡುವಂತೆ ನೋಡಿಕೊಂಡಿತು. ಹೀಗೆ ಇವರಿಗೆ ಅನನ್ಯತೆ ಮತ್ತು ಸ್ಥಿರತೆ ಮುಖ್ಯ ಪ್ರಶ್ನೆಯಾಯಿತು. ಇದರಿಂದಾಗಿ ಈ ಸಮುದಾಯದಲ್ಲಿ ಈ ವೃತ್ತಿಯ ಹೆಸರಿನಲ್ಲಿ ಇಂದಿಗೂ ಒಗ್ಗಟ್ಟು ಇಲ್ಲದಂತಾಗಿದೆ.

ಇದರ ಜೊತೆಗೆ ಭೂತಾರಾಧನೆಯ ಮೇಲೆ ಇತ್ತೀಚೆಗೆ ಪ್ರಾರಂಭವಾಗಿರುವ intellectual ಧಾಳಿ ಭೂತ ಕಟ್ಟುವವರ ಸಮುದಾಯವನ್ನು ಇನ್ನಷ್ಟು ನಿಕೃಷ್ಟಗೊಳಿಸಿದೆ. ಮತ್ತು ಮೇಲಿನ ಅಂಶಗಳನ್ನು ತಿಳಿದು ಇವರನ್ನು ಇನ್ನಷ್ಟು ಒಡೆಯುವಲ್ಲಿ ಪ್ರಯತ್ನಿಸಿದೆ. ಮೊದಲೇ ತ್ರಿಶಂಕು ಸ್ಥಿತಿ ತಲುಪಿರುವ ಈ ಸಮುದಾಯವು ತಮ್ಮ identity ಯನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದರೆ ಅದನ್ನು ಅರಿಯುವ ಸಾಮರ್ಥ್ಯ ಅಥವಾ intellect ಪ್ರಜ್ಞೆ ಇವರಿಗೆ ಇನ್ನೂ ತಟ್ಟಿಲ್ಲ. ಆರ್ಥಿಕ ಮತ್ತು ಶೈಕ್ಷಣಿಕ ಕಾರಣಗಳು ಇದಕ್ಕೆ ಮುಖ್ಯವಾಗಿದೆ. ಈ so called ಭೂತಾರಾಧನೆಯ ಅಧ್ಯಯನಕಾರರು ಈ ಮುಗ್ಧ ಜನರಿಂದ ಭೂತಗಳ ಪಾಡ್ದನ ಮತ್ತು ಇತರ ವಿವರಗಳನ್ನು ಸಂಗ್ರಹಿಸಿ ಅದನ್ನು ವೈಭವೀಕರಿಸಿ ಇದರ ಜಾಡನ್ನು ವಿದೇಶಗಳಿಗೂ

ಪಸರಿಸಿ ಇದರ ಹೆಸರಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದು ಇದಕ್ಕೆ ಒಂದು ಶಾಶ್ವತವಾದ ಹಣೆಪಟ್ಟಿ ಹಚ್ಚುವಂತಹ ಕೃತಾರ್ಥ ಕೆಲಸವನ್ನು ಮಾಡಿರುತ್ತಾರೆ. ಮೊದಲು ಈ ಭೂತಾರಾಧನೆ ಸೇವೆಯನ್ನು ಆಯಾ ದೈವಸ್ಥಾನ ಅಥವಾ ಗುತ್ತಿನ ಮನೆಗಳಲ್ಲಿ ಕೆಲವು ನಿಬಂಧನೆಗೊಳಪಟ್ಟು ನಡೆಸುತ್ತಿದ್ದರೆ ಈ ಅಧ್ಯಯನಕಾರರು ಭೂತಕಟ್ಟುವವರಿಗೆ ಆಮಿಷ ತೋರಿಸಿ ಅದನ್ನು ಯಕ್ಷಗಾನದಂತೆ ಎಲ್ಲಿ ಬೇಕೆಂದರಲ್ಲಿಯೂ instant ಆಗಿ ಪ್ರದರ್ಶಿಸಿ ಮೆಚ್ಚುಗೆಯನ್ನು ಪಡೆದಿರುತ್ತಾರೆ. ಪರಿಣಾಮವಾಗಿ ಭೂತಗಳ 'ಅಣಿ' ಮತ್ತಿತರ ಸಲಕರಣೆಗಳನ್ನು ಅಲಂಕಾರಿಕ ವಸ್ತುಗಳಾಗಿ ಸಭೆ ಸಮಾರಂಭಗಳಲ್ಲಿ ಇಟ್ಟು ಭೂತಾರಾಧನೆ ಎಂದರೆ ಈ ರೀತಿ ಎಂಬಷ್ಟರ ಮಟ್ಟಿಗೆ ಅದನ್ನು ನಿಕೃಷ್ಟಗೊಳಿಸಿದೆ. ಈ ಅಧ್ಯಯನಕಾರರ ಇಂತಹ ಪ್ರಯತ್ನಕ್ಕೆ ಮುಂಚೆ ಈ ತರದ ದುಃಸ್ಥಿತಿ ಭೂತಾರಾಧನೆಗೂ ಮತ್ತು ಭೂತಕಟ್ಟುವವರಿಗೂ ಬಂದಿರಲಿಲ್ಲ. ಇದು ಇನ್ನಷ್ಟು ಇವರನ್ನು alienate ಮಾಡಿದೆ. ಇದರಿಂದ ಭೂತಾರಾಧನೆ ಎಂದರೆ ಒಂದು ಆಟಿಕೆ ವಸ್ತುವಾಗಿ ಎಲ್ಲರಿಗೂ ಒಂದು ಅಗ್ಗದ ವಸ್ತುವಾಗಿದೆ.

ಆದರೆ ಈಚೆಗೆ ಸಮುದಾಯದ ಅನೇಕರು ಶಿಕ್ಷಣ ಮತ್ತು ಉದ್ಯೋಗಗಳನ್ನು ಪಡೆದುಕೊಂಡಿರುತ್ತಾರೆ. ಉದ್ಯೋಗದಲ್ಲಿರುವವರು ಈ ಭೂತಾರಾಧನೆ ಸೇವೆಯನ್ನು ಮೊದಲಿನಂತೆ ಭಯಭಕ್ತಿಯಿಂದ ನಿಬಂಧನೆಗೊಳಪಟ್ಟಂತೆ ದೈವಸ್ಥಾನಗಳಲ್ಲಿ ಮಾತ್ರ ನಡೆಸಲು ಸಹಕರಿಸಿ ತಾವೂ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಹೀಗೆ ಈ ವಿದ್ಯಾವಂತರು ಭೂತ ಸೇವೆಯನ್ನು ನಡೆಸಲು ಮುಂದೆ ಬಂದಿರುವುದರಿಂದ ಇವರಲ್ಲಿ ತಮ್ಮ identity ಯ ಪ್ರಶ್ನೆ ಮತ್ತಷ್ಟು ಉದ್ಭವಿಸಿದೆ. ಅಂದರೆ ಭೂತಾರಾಧನೆ ಕಲೆಯೆ, ನಂಬಿಕೆಯೇ ಅಥವಾ power ? ಪ್ರತಿಷ್ಠಿತ ಅಧ್ಯಯನಕಾರರು ಇದನ್ನು ಜಾನಪದ ಎಂದು ಬ್ರಾಂಡ್ ಮಾಡಿರುವ ಬಗ್ಗೆ ಇವರಿಗೆ ಗುಮಾನಿ ಎದ್ದಿವೆ. ಇದರಿಂದ ಈ ಅಧ್ಯಯನಕಾರರು ಪ್ರಸ್ತುತ ವಿದ್ಯಾವಂತರಾಗಿ ಉದ್ಯೋಗದಲ್ಲಿದ್ದು ಭೂತಾರಾಧನೆಯನ್ನು ನಡೆಸುವವರಲ್ಲಿ ಯಾವುದೇ ಮಾಹಿತಿಯನ್ನು ಪಡೆಯುವ ಪ್ರಯತ್ನವನ್ನು ಕೈಗೊಳ್ಳುತ್ತಿಲ್ಲ. ಇದಕ್ಕೆ ಪರ್ಯಾಯವಾಗಿ ಈ ವರ್ಗದವರು ಯಾವುದೇ ವಿವರಣೆಯನ್ನು ನೀಡಲು ಮೊದಲೇ ತಿಳಿಸಿದಂತೆ ಇವರ ವೃತ್ತಿಯೇ ಇವರಿಗೆ ಸಮಸ್ಯೆಗಳನ್ನು ತೊಂದೊಡ್ಡುತ್ತವೆ. ಇನ್ನಾದರೂ ಈ ವರ್ಗದ ಜನರು ಎಚ್ಚೆತ್ತು ಭೂತಕಟ್ಟುವವರೆಲ್ಲರೂ ಒಂದಡೆ ಸೇರಿ ತಮ್ಮ ವೃತ್ತಿ ಸಮಸ್ಯೆಗಳನ್ನು ಚರ್ಚಿಸಿ ಒಂದು ಪೂರಕವಾದ ರೂಪು ನೀಡಬೇಕಾದ ಅಗತ್ಯವಿದೆ ಮತ್ತು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಸಹ ಇವರ ಮೇಲಿದೆ.

●

ಗುಲ್‌ನಾರಿ ಪಲ್ಲಂಗದ ಹಾಡು

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ಗುಡಿಯ ಗುಡ್ಡದ ಗಬ್ಬದೆಡೆಯಲಿ ನೀತಿ ಸೆರಗನು ಹಾಸಿದೆ .
ಕಾರಹುಣ್ಣಿಮೆ ಇರುಳಪೂಜೆಗೆ ಭೀತಿ ಕಾಮನೆ ತೆರೆದಿದೆ
ಬಿಗಿಲುಮೆಟ್ಟದ ನೆರೆದ ಹುಡುಗಿಗೆ ಪ್ರಣಯದಾರತಿ ಕರೆದಿದೆ.

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ಮೈ ಮಾರು ಬಯಕೆ ರಂಗಿನಾಟಕೆ ಮೀಸಲುಡಿಗೆಯ ತೆರೆದಿದೆ
ಕೊಂಡುಕೊಂಡವರಡಿಯ ತಲುಬಿಗೆ ಮೈದಾನ ದಾವಣಿ ಹೌಹಾರಿದೆ .
ತಿಮಿರದ ರೀತಿ ರಿವಾಜಿಗೆ ಹರಿಕೆ ಮಿಕ ಮೈಮಾರಿದೆ.

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ಬಕಕೆ ಬಲಿ ಮೀನ ತೆರೆದಲಿ ಮಿಡುಕೆ ಮನ ತಳಮಳಿಸಿದೆ
ನಿತ್ಯ ಸುಮಂಗಲಿ ಪಲ್ಲಂಗದಂದುಗೆ ಕೇಳಿ-ಕೆಳೆತನ ಕಳವಳಿಸಿದೆ
ಮುಡಿಯನೇರಿದ ಕೆಂಡ ಸಂಪಿಗೆ ಕೆಂಪು ದೀಪವ ಬಳಸಿದೆ.

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ದೇವಿಗರ್ಪಿತ ದಾಸಿ ಕುಂಕುಮ ಹಣೆಗೆ ಬೆಲೆಗಳ ಬರೆದಿವೆ.
ಕಂಡ ಹೆರವರಿಗೆಲ್ಲ ಬಂಡಿಯೇರುವ ಹಬ್ಬ ಗಾಲಿ ಚಕ್ರ .
ಹೆಜ್ಜೆ ರಚಿಸಿವೆ ಹರೆಯ ಎಣಿಸಲು ಕಾಗುಣಿತ ಭೂಮಿತಿ .

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ಗುಡಿಯಗೋಪುರ ಮುಡಿಯ ನಿಡಿಗೆ ರಕುತ ಓಕುಳಿ ಹರಿಸಿವೆ
ಉರುಳು ಸೇವೆಗೆ ನೆಲದ ನೇಹವು ಹೆಣ್ಣ ಎಡೆಯನು ಪಡೆದಿವೆ.

ಯಲ್ಲಮ್ಮ ನೀ ಎಲ್ಲಮ್ಮ ? ಜೋಗತಿ ನೀ ಗುಲ್ ನಾರಿ .
ಗೆಜ್ಜೆ ಕಟ್ಟದ ನಿಶಿತ ದಿಬ್ಬಣ ತೀಟೆಗೊಳಿಸುವ ಜಾಮಿತಿ .
ಹುರುಪುಗೊಳಿಸುವ ಮುಕ್ತ ಗುಡಿಯಲಿ ವಿಟರ ತಣಿಸುವ ಒಗೆತನ
ಗೆಜ್ಜೆ ಕಟ್ಟದ ನೆಲೆತ ನೆಲದಲಿ ಗುಹ್ಯ ರುಗ್ಣದ ಹಗೆತನ.

ಚುರಮುರಿ : ಬಸವಪ್ಪ ಶಾಸ್ತ್ರಿ

ಪ್ರಲ್ಹಾದ ಮುದಗಲ್ಲ

ಚುರಮುರಿ ಶೇಷಗಿರಿರಾಯರು ಧಾರವಾಡದವರು. ಭಾಷಾವಾರ ಪ್ರಾಂತ ರಚನೆ ಪೂರ್ವ ಮುಂಬೈ ಇಲಾಖೆಗೆ ಸೇರಿದ ಒಂದು ಜಿಲ್ಲೆ ; ಈ ಭಾಗಕ್ಕೆ ಕೆಲವು ಕಾಲ " ದಕ್ಷಿಣ ಮಹಾರಾಷ್ಟ್ರ" ವೆಂದೂ, ಬಳಿಕ " ಉತ್ತರ ಕರ್ನಾಟಕ" ವೆಂದೂ ಸಂಬೋಧಿಸುವ ರೂಢಿಯು ಇತ್ತು. (ವಿಜಾಪೂರ, ಬೆಳಗಾಂವ, ಧಾರವಾಡ . ಕಾರವಾರ ಜಿಲ್ಲೆಗಳು ಉತ್ತರ ಕರ್ನಾಟಕದ ಪ್ರಮುಖ ಭಾಗಗಳು). ಇಲ್ಲಿಯ ಜನರ ಭಾಷೆ ಕನ್ನಡ. ಛತ್ರಪತಿ ಶಿವಾಜಿ, ಆದಿಲ ಶಾಹಿ, ಪೇಶವೆಯವರ ಪ್ರಭಾವ ಇಲ್ಲಿಯ ಜನರ ಮೇಲೆ ಉಂಟಾದುದು ವಾದಾತೀತ.

ಬಸವಪ್ಪ ಶಾಸ್ತ್ರಿ ಹುಟ್ಟಿ ಬೆಳೆದು ಹೆಸರು ಪಡೆದದ್ದು ಹಳೆಯ ಮೈಸೂರು ಸಂಸ್ಥಾನದಲ್ಲಿ. ಇದೊಂದು ಸಿರಿವಂತ ಸಂಸ್ಥಾನ. ಇಲ್ಲಿಯ ರಾಜರು ಪ್ರಜೆಗಳ ಪಾಂಡಿತ್ಯಕ್ಕೆ ಬೆಲೆ ಕೊಡುತ್ತಿದ್ದರು. ವಿದ್ವಾಂಸರಿಗೆ ರಾಜಾಶ್ರಯ ಇರುತ್ತಿತ್ತು. ಇಲ್ಲಿಯ ಭಾಷೆ ಕನ್ನಡ, ಅಲ್ಲದೇ ಇಲ್ಲಿಯ ರಹಿವಾಸಿಗಳು ತಾವು ಮಾತಾಡುವುದು ಅಚ್ಚ ಕನ್ನಡ,ಇನ್ನುಳಿದ ಕನ್ನಡಿಗರನ್ನು ಬೇರೆ ದೃಷ್ಟಿಯಿಂದ ಕಾಣುವುದು ಇಲ್ಲಿಯ ವೈಶಿಷ್ಟ್ಯ. ಒರಟು ಕನ್ನಡ ಭಾಷೆ ಆಡುವವರು ಎಂದು ಉತ್ತರ ಕರ್ನಾಟಕದವರಿಗೆ ಕರೆಯುತ್ತಿದ್ದುದು ಸತ್ಯ ಸಂಗತಿ. ಶಹಾಜಿ ಹೈದರಲಿ, ಟೀಪೂ ಸುಲ್ತಾನರ ಪ್ರಭಾವ ಉಂಟಾದುದು ಐತಿಹಾಸಿಕ ಸತ್ಯ.

" ಕನ್ನಡ ಸಾಹಿತ್ಯದ ನವೋದಯಕ್ಕೆ ಅಚಿರ ಪೂರ್ವದ ಉಷಃಕಾಲದಲ್ಲಿ ಅಥವಾ ಅರುಣೋದಯಕ್ಕೆ ಸಮಯದಲ್ಲಿ ಕನ್ನಡದ ಸಾಹಿತ್ಯ ತನ್ನ ಏರು ಜವ್ವನದ ವೈಭವದ ಔನ್ನತ್ಯದಿಂದ ಕ್ರಮೇಣ ಇಳಿಗಾಲಕ್ಕಿಳಿದು ಮರಣೋನ್ಮುಖವಾಗಿ ಏದುತ್ತಾ ಕೊನೆಯುಸಿರೆಳುಯುತ್ತಿದೆಯೋ ಎಂಬಂತಿದ್ದ ದುರಂತ ಸಮಯದಲ್ಲಿ ಆದರ ಶ್ವಾಸಕೋಶಕ್ಕೆ ತಮ್ಮ ಆಮ್ಲಜನಕೋಪಮ ಅನಿಲವನ್ನೂದಿ ಪ್ರಾಣರಕ್ಷಣೆ ಮಾಡಿದ ಅಲ್ಪ ಸಂಖ್ಯೆಯ ಹಿರಿಯ ವ್ಯಕ್ತಿಗಳಲ್ಲಿ ಶಾಸ್ತ್ರಿಗಳೂ ಒಬ್ಬ ಅಗ್ರೇಸರ ಪಂಡಿತ ಮಾನ್ಯ ಸಾಹಿತಿಗಳಾಗಿದ್ದರು " ಎಂಬ ಸಾಮಾಜಿಕ , ಭಾಷಿಕ ಸನ್ನಿವೇಶ ಚಿತ್ರವು ನಮಗೆ ಎಂ.ಜಿ. ನಂಜುಂಡಾರಾಧ್ಯರು ತಮ್ಮ "ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ ಸಮಗ್ರ ಕೃತಿಗಳು " ಎಂಬ ಗ್ರಂಥದಲ್ಲಿ ಚಿತ್ರಿಸಿದ್ದು ನೋಡಲು ದೊರೆಯುವುದು.

(೧೯೭೭ ಪುಟ ೩, ಕುವೆಂಪು ಸಂದೇಶ)

ಚುರಮುರಿ ಶೇಷಗಿರಿ ರಾಯರು ಬೆಳೆದು ಬಾಳಿದ ಕಾಲ ಉತ್ತರ ಕರ್ನಾಟಕದ ಮಟ್ಟಿಗೆ ಅತ್ಯಂತ ನಿಕೃಷ್ಟ ಪರಿಸ್ಥಿತಿ ಕಾಲ; ತಾವು ಕನ್ನಡಿಗರು ತಮ್ಮ ಭಾಷೆ ಕನ್ನಡವೆಂಬ ಅಭಿಮಾನ ಸಹ ಇಲ್ಲದ ಕಾಲ; ಉಗಿಬಂಡಿ ಪ್ರವಾಸದ ಅನುಕೂಲತೆಯೊದಗಿದ ಮೂಲಕ ಮುಂಬೈ ಇಲಾಖೆ ಅಧಿಕಾರ ಕೇಂದ್ರವಾಗಿದ್ದ ಮಹಾರಾಷ್ಟ್ರದ ಕಡೆಯಿಂದ ಮರಾಠಿ ಭಾಷೆಯ ಅಧಿಕಾರಿಗಳೇ ಹೆಚ್ಚಾಗಿ ವರ್ಗವಾಗಿ ಬರುತ್ತಿದ್ದರು. ಮರಾಠಿ ನಾಟಕ ಕಂಪನಿ, ವ್ಯಾಖ್ಯಾನಕಾರರು ಗಾಯಕ ನರ್ತಕರು ಇಲ್ಲಿ ಈ ಮೊದಲೇ ನೆಲೆಸಿದ ಮರಾಠಿಗರಿಂದ ಆಶ್ರಯ ಪಡೆಯುತ್ತಿದ್ದರು. ಇದರಿಂದ ಮರಾಠಿ ಭಾಷೆ ಬೆಳೆಯಹತ್ತಿತು. ಓದಿದರೆ ಮರಾಠಿ ಪುಸ್ತಕಗಳನ್ನೇ ಓದಬೇಕು, ತರಿಸಿದರೆ ಮರಾಠಿ ವರ್ತಮಾನ ಪತ್ರ, ಮಾಸ ಪತ್ರಿಕೆ ತರಿಸಬೇಕು ಎಂಬ ವಿಪರೀತ ಪರಿಸ್ಥಿತಿಯಿಂದ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಯ ಕನ್ನಡ ಭಾಷೆ ಜರ್ಜರಿತ ವಾಗಿತ್ತು.

ಉತ್ತರ ಕರ್ನಾಟಕದಲ್ಲಾಗಲಿ, ಹಳೆಯ ಮೈಸೂರಿನಲ್ಲಾಗಲಿ ಜನರ ಮನೋರಂಜನೆಗೆ ಯೋಗ್ಯವಾದ ನಾಟಕಗಳಾಗಲೀ, ಅವುಗಳನ್ನು ಪ್ರೋತ್ಸಾಹಿಸುವ ನಾಟಕ ಕಂಪನಿಗಳಾಗಲೀ ಇರಲಿಲ್ಲ. ಈ ಸಂದರ್ಭದಲ್ಲಿ ಒಂದು ಅಂಶ ಗಮನದಲ್ಲಿಡುವಂತಹದಾಗಿ ತೋರುವುದು. ಕನ್ನಡ ಸಾಹಿತ್ಯಕ್ಕೆ ಒಂದು ಸಾವಿರ ವರುಷಕ್ಕಿಂತ ಹೆಚ್ಚಿನ ಇತಿಹಾಸವಿದೆ. ಪ್ರಾರಂಭದಲ್ಲಿಯೇ ಪ್ರೌಢ ಲಕ್ಷಣ ಗ್ರಂಥ ಕವಿರಾಜ ಮಾರ್ಗ, ಲಕ್ಷಣ ಬದ್ಧ ಕಾವ್ಯ ಕೃತಿ ಹೊರಬಂದಿದ್ದರೂ ಕಾಳಿದಾಸ , ಭವಭೂತಿಗಳ - ಶಾಕುಂತಲ, ಉತ್ತರ ರಾಮಚರಿತೆ ಅಭಿಜಾತಿ ನಾಟಕಗಳ ಅಭಾವ ಕಾಣುವುದು. ಅನುಕೃತಿ ಇಲ್ಲವೆ ಸ್ವತಂತ್ರ ನಾಟಕಗಳಾಗಲಿ ಕ್ರಿ.ಶ ೧೯ ನೆಯ ಶತಮಾನದ ಉತ್ತರಾರ್ಧದವರೆಗೆ ದಾರಿ ಕಾಯಬೇಕಾಯಿತು. ಇದಕ್ಕೂ ಮೊದಲು ಸರಾಸರಿ ಎರಡು ನೂರು ವರುಷ ಮೊದಲು ಸಿಂಗರಾಯನ " ಮಿತ್ರ ವಿಂದ ಗೋವಿಂದ " ನಾಟಕ ಹೊರಬಂದಿತ್ತು. ಆದರೆ ನಾಟ್ಯ ಶಾಸ್ತ್ರ ಪ್ರಕಾರ ಅದೊಂದು ನಾಟಿಕೆ ಇಲ್ಲವೆ ಸಟ್ಟಕ.

ಆ ಬಳಿಕ ನಮಗೆ ನೋಡಲು ದೊರೆಯವುದು ಚುರಮುರಿ ಶೇಷಗಿರಿ ರಾಯರ ಶಾಕುಂತಲ ನಾಟಕದ ಅನುವಾದ. ಇದು ೧೮೭೦ ರಲ್ಲಿ ಹೊರಬಂದಿತು. ಆದರೆ ರಂಗಭೂಮಿಗೆ ಬರಲು ಸುಮಾರು ೩೦ ವರುಷ ದಾರಿಕಾಯಬೇಕಾಯಿತು.

ಡಾ|| ಎಚ್.ಕೆ. ರಂಗನಾಥರು "೧೮೧೨ ರಲ್ಲಿಯೇ ಮುಮ್ಮಡಿಯವರು ದರ್ಮಸ್ಥಳದಿಂದ ಯಕ್ಷಗಾನ ಮೇಳ ವೊಂದನ್ನು ಕರೆಯಿಸಿಕೊಂಡು ಪೋಷಿಸಿದರು. " ಈ ಮಂಡಳಿಗೆ ಅನ್ವಯಿಸಿ ಎಂ.ಜಿ. ನಂಜುಂಡಾರಾಧ್ಯರು" ೧೮೨೬ ರಷ್ಟು ಹಿಂದಿನ ಕಾಲದಲ್ಲಿಯೇ ಅರಮನೆಯದೇ ಒಂದು ನಾಟಕ ಮಂಡಳಿಯಿತ್ತು" ಎಂದು ವ್ಯಕ್ತ ಪಡಿಸಿದ ವಿಚಾರಗಳನ್ನು "ಇಂದಿನ ಅರ್ಥದಲ್ಲಿ ಅದು ನಾಟಕ ಮಂಡಳಿ ಯಾಗಿರಲಿಲ್ಲ. ಆದರೂ ಸುಧಾರಿತ ರೀತಿಯಲ್ಲಿ ಮೊದಲಿಗೆ 'ಪುತ್ರಕಾಮೇಷ್ಟಿ' ಎಂಬ "ಯಕ್ಷನಾಟಕ ವನ್ನು ಅಭಿನಯಿಸಿತು. ಆದರ ಕತೆ ಜಾನಪದ ಪ್ರಕಾರಕ್ಕೆ ರಾಜರು ಕೊಟ್ಟ ಆಶ್ರಯದ ಸತ್ಕಥೆ " ಎಂದು ಹೇಳಿರುವರು (ನೋಡಿರಿ - ಕರ್ನಾಟಕ ರಂಗಭೂಮಿ - ವೃತ್ತಿರಂಗಭೂಮಿ ಪುಟ ೧೫೦ - ೧೫೧) ಡಾ. ಶ್ರೀನಿವಾಸ ಹಾವನೂರ

ತಮ್ಮ " ಹೊಸಗನ್ನಡ ಅರುಣೋದಯ ' ಗ್ರಂಥದಲ್ಲಿ "ಮುಂಬೈ ಕರ್ನಾಟಕದ ರಂಗಭೂಮಿಯು ಯಾವ ರಾಜಾಶ್ರಯವೂ ಇಲ್ಲದೆ ಬೆಳೆದು ಬಂದಿತು. ಅದೂ ಚಾಮರಾಜೇಂದ್ರ ನಾಟಕ ಸಭೆಯು ಸ್ಥಾಪಿತವಾಗುವ ಮೊದಲೇ. ಮರಾಠಿ ನಾಟಕಗಳ ಆಗಾಗಿನ ಪ್ರಯೋಗವೇ ಅದಕ್ಕೆ ಮುಖ್ಯ ಪ್ರೇರಣೆ. ಕನ್ನಡದಲ್ಲಿ ನಾಟಕಗಳಿಲ್ಲವಲ್ಲ- ಎಂಬ ಸಾತ್ವಿಕ ಛಲದಿಂದಲೂ ಕೆಲವರು ನಾಟಕ ರಚಿಸುವುದಕ್ಕೆ ಮುಂಬಂದರು. ಆಗಿನ ಸಂಗೀತ ಪರಂಪರೆಯು ಅದಕ್ಕೆ ಪೋಷಕವಾಯಿತು. ಅಂಥವರಲ್ಲಿ ಚುರಮುರಿ ಶೇಷಗಿರಿರಾಯನು ಮೊದಲಿಗನಾಗಿದ್ದಾನೆ" ಎಂಬ ವಿಚಾರಗಳನ್ನು ಮಂಡಿಸಿದ್ದಾರೆ. (ಮುಂಬೈ ಕರ್ನಾಟಕ ನಾಟಕಕಾರರು ಪುಟ ೩೦೬ - ೩೦೭) ಪಾರಸಿ ರಂಗಭೂಮಿಯ ಚಟುವಟಿಕೆಗೂ ಪ್ರೇರಣೆ ನೀಡುವ ಶ್ರೇಯವು ಇದೆ ಎಂಬ ಸಂಗತಿಯನ್ನು ಮುಂದೆ ಚರ್ಚಿಸಲಾಗಿದೆ.

ಚುರಮುರಿಯವರು ರೂಪಾಂತರಿಸಿದ ಶಾಕುಂತಲ ನಾಟಕ ರಂಗಭೂಮಿ ಬರಲು ಕೆಲವು ವರುಷ ದಾರಿಕಾಯಬೇಕಾಯಿತು ಎಂದು ಈ ಮೊದಲೇ ಹೇಳಿದೆ. ಇದಕ್ಕೆ ಕಾರಣಗಳೂ ಇವೆ. ನಾಟಕ ರಚನೆ ಬೇರೆ, ಪ್ರದರ್ಶನವೂ ಬೇರೆ. ನಟಸಂಚ ಮತ್ತು ಇನ್ನುಳಿದ ಪರಿಕರಗಳು ಅವಶ್ಯ. ಜನರ ಸಹಕಾರಬೇಕು. ಚುರಮುರಿಯವರಿಗೆ ಅದೇ ತಾನೆ ಪತ್ನಿ ವಿಯೋಗವಾಗಿತ್ತು. ಕೆಲವು ಮಟ್ಟಿಗೆ ಅಂತರ್ಮುಖಿ ಕೂಡ ಆಗಿದ್ದರು. ಇಂತಹ ಹಿನ್ನೆಲೆಯಲ್ಲಿ ತಮ್ಮ ಈ ನಾಟಕದ ರಂಗಪ್ರಯೋಗದ ಜೊಂಜಾಟ ಬೇಡವೆಂದು ನಿರ್ಧರಿದ್ದೂ ಅಸ್ವಾಭಾವಿಕವಾಗದು. ಆದರೂ ಅವರ ಜೀವಿತ ಕಾಲದಲ್ಲಿ ಎರಡು ಆವೃತ್ತಿಗಳು ಹೊರಬಂದಿದ್ದವಲ್ಲದೆ ಹಾಡುಗಳು ಜನಸಾಮಾನ್ಯರ ನಾಲಿಗೆಯ ಮೇಲೆ ರಾರಾಜಿಸುತ್ತಿದ್ದುದು ಕಡಿಮೆ ಪ್ರಶಸ್ತಿ ಅಲ್ಲವೆಂಬುದು ಗೃಹಿಸಲೇಬೇಕು. ಎರಡನೆಯದಾಗಿ ಕನ್ನಡಿಗರು ಸ್ವಾಭಿಮಾನಶೂನ್ಯರಾಗಿದ್ದ ಕಾಲದಲ್ಲಿ ಮುಂಬೈಯಂತಹ ಹೊರನಾಡಿನಲ್ಲಿ ಕೆಲಸ ಮಾಡುತ್ತ ಕಾಳಿದಾಸನ ಈ ಕೃತಿಯನ್ನು ಕನ್ನಡಿಸಿ ಮುದ್ರಿಸಿ ಪ್ರಕಟಿಸಿದ್ದು, ಅವರು ಕೈಕೊಂಡ ಮಹತ್ವದ ಸಾಹಸ. ಕರ್ನಾಟಕ, ಹಿಂದುಸ್ತಾನಿ, ಕಂದ ವೃತ್ತಾದಿ ಪರಂಪರಾಗತ ಛಂದೋರೂಪ . ದಿನಬಳಕೆಯ ಸುಲಭ ಗದ್ಯ . ರಾಗ ತಾಳ ಬದ್ದ ಹಾಡುಗಳು , ಚುರುಮುರಿಯವರ ಈ ಕೃತಿಯ ವೈಶಿಷ್ಟ್ಯ. ಅಲ್ಲದೇ ಕರ್ನಾಟಕ - ಮಹಾರಾಷ್ಟ್ರದ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಮಾತ್ರಸ್ಥಾನ ಪಡೆದ ಕೃತಿ ಎಂಬುದನ್ನು ಯಾರಿಗೂ ಅಲ್ಲಗೆಳೆಯಲು ಸಾಧ್ಯವಿಲ್ಲ.

ಚುರುಮುರಿಯವರ ಕೃತಿ ಪ್ರಕಾಶವಾದ ಬಳಿಕ ಸುಮಾರು ಹದಿಮೂರು ವರುಷಗಳ ನಂತರ ಹಳೆಯ ಮೈಸೂರು ಸಂಸ್ಥಾನದ ರಾಜಾಶ್ರದಲ್ಲಿದ್ದ ಪಂಡಿತ ಬಸವಪ್ಪ ಶಾಸ್ತ್ರಿಗಳು ಅನುವಾದಿಸಿದ ಶಾಕುಂತಲ ನಾಟಕವನ್ನು ಅರಮನೆಯ ನಾಟ್ಯಸಿಬ್ಬಂದಿ ರಂಗ ಪ್ರದರ್ಶನ ಕೈಕೊಂಡರು.

ಮಹಾರಾಷ್ಟ್ರದಲ್ಲಿ ೧೮೮೦ ರಲ್ಲಿ ಅಣ್ಣಾಸಾಹೇಬ ಕಿರ್ಲೋಸ್ಕರ್‌ರರು ಅನುವಾದಿಸಿದ ಸಂಗೀತ ಶಾಕುಂತಲ ನಾಟಕವು ಪುಣೆಯಲ್ಲಿ ರಂಗ ಪ್ರದರ್ಶನವಾಯಿತು. ಲೋಕಮಾನ್ಯರು

ಈ ನಾಟಕದ ಮೊದಲು ಪ್ರಯೋಗಕ್ಕೆ ಉಪಸ್ಥಿತರಿದ್ದರಲ್ಲದೆ "ರಂಗಭೂಮಿಯನ್ನು ಕೇವಲ ಮನೋರಂಜನದ ಮಾಧ್ಯಮವಾಗಿ ಬಳಸದೇ ಹಿಂದುಸ್ಥಾನದ ಪುರಾತನ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಇದರ ಆಶ್ರಯ ಪಡೆಯುವದು ಅವಶ್ಯ" ಎಂದು ಉದ್ಗಾರ ತೆಗೆದರು .

"ಕನ್ನಡಕ್ಕೆ ಕಾಳಿದಾಸನ ಶಾಕುಂತಲ ನಾಟಕವನ್ನು ಅನುವಾದ ಮಾಡಿದವರಲ್ಲಿ ಮೊದಲಿಗರು ಚುರುಮುರಿ ಶೇಷಗಿರಿರಾಯರು. ನಾಟಕದ ಹಾಡು ಜನಪ್ರಿಯವಾದವು. ನಾಟಕದಲ್ಲಿನ ಗೀತೆಗಳನ್ನು ಪ್ರಚಲಿತವಾಗಿದ್ದ ಜಾನಪದ ಗೀತೆಗಳ ಧಾಟಿಗಳಲ್ಲಿ ಅಳವಡಿಸಲಾಗಿದ್ದಿತು. ಶೇಷಗಿರಿರಾಯನ ಪರಿವರ್ತನ ಪರಿಣತಿ , ಕನ್ನಡ ಅನುವಾದದ ಪ್ರಭಾವಪೂರ್ಣ ರಂಗವಿಧಾನ, ಆಡುಮಾತಿನ ಬಳಕೆ , ಹಾಡುಗಳ ಆಕರ್ಷಕ ಧಾಟಿ , ಈ ಎಲ್ಲ; ಅವರ ಗೆಳೆಯರಾಗಿದ್ದ ಗುರ್ಲಹೊಸೂರಿನ ಅಣ್ಣಾಸಾಹೇಬರನ್ನು ಸೆರೆಹಿಡಿದವು. ಕನ್ನಡ ಭಾಷೆಯ ಪರಿಚಯವಿದ್ದ ಅಣ್ಣಾಸಾಹೇಬರು ಚುರುಮುರಿಯವರ ಅನುವಾದದಲ್ಲಿ ರಂಗಭೂಮಿಯ ಕ್ರಾಂತಿಕಾರಕ ಸಾಧ್ಯತೆಗಳನ್ನು ಕಂಡುಕೊಂಡು, ಕ್ಷಿಪ್ರದಲ್ಲಿಯೇ ಚುರಮುರಿಯವರ ಅನುವಾದದ ಮಾದರಿ ಯಲ್ಲಿಯೇ ಮರಾಠಿ ಭಾಷೆಗೆ ಪರಿವರ್ತಿಸಿದರು. ಕೂಡಲೇ ಕಿರ್ಲೋಸ್ಕರ ಸಂಗೀತ ನಾಟಕ ಮಂಡಳಿ ಎಂಬ ವೃತ್ತಿಸಂಸ್ಥೆಯನ್ನು ಸ್ಥಾಪಿಸಿ ೧೮೮೦ ರ ಅಕ್ಟೋಬರ್ ತಿಂಗಳಲ್ಲಿ ಆ ನಾಟಕವನ್ನು ಪುಣೆಯಲ್ಲಿ ಅಭಿನಯಿಸಿಬಿಟ್ಟರು . ಮರಾಠಿ ಭಾಷೆಯಲ್ಲಿನ ಈ ಸಂಗೀತ ಶಾಕುಂತಲದ ಹುಟ್ಟಿಗೆ ಪರ್ಯಾಯವಾಗಿ ಕಾರಣರಾದ ಚುರುಮುರಿಯವರಿಗೆ ಕೃತಜ್ಞತೆಯ ಕುರುಹು ಸಲ್ಲಲಿಲ್ಲವೆಂಬ ಮಾತು ಉತ್ತರ ಕನ್ನಡ ನಾಡಿನಲ್ಲಿನ ಅಸಮಾಧಾನಕ್ಕೆ ಕಾರಣವಾಯಿತು. (ಕರ್ನಾಟಕ ರಂಗಭೂಮಿ ಡಾ. ಎಚ್. ಕೆ . ರಂಗನಾಥ ಪುಟ ೧೨೯) ವೆಂಬ ಕೊನೆಯ ಭಾಗದಲ್ಲಿ ಪ್ರಕಟಿಸಿದ ವಿಚಾರಗಳು ಮೈಸೂರಿನ ಭಾಗದ ಕನ್ನಡ ಪಂಡಿತರು, ಉತ್ತರ ಕರ್ನಾಟಕದ ಪಂಡಿತರು ಚುರುಮುರಿಯವರ ಈ ಮೇರು ಕೃತಿಗೆ ಕನ್ನಡ ಸಾಹಿತ್ಯದಲ್ಲಿ ದೊರೆಯತಕ್ಕ ಸ್ಥಾನವನ್ನು ನೀಡದೆ ಇದ್ದುದೂ ಒಂದು ಶೋಕಾಂತಿಕವಾಗಿದೆ.

"ಹೊಸ ಕನ್ನಡದ ಅರುಣೋದಯದ ಸಮಯದಲ್ಲಿ ಮಿಂಚಿಹೋದ ಕನ್ನಡ ಲೇಖಕರಲ್ಲಿ ಶೇಷೋ ರಾಮಚಂದ್ರ, ಚುರುಮುರಿ ಜನಮಾನಸದಲ್ಲಿ ಅಷ್ಟಾಗಿ ಉಳಿದಿಲ್ಲ. ವೃತ್ತಿಯಿಂದ ಓವರ್‌ಸೀಯರ್ ಆಗಿದ್ದರೂ ಕಾವ್ಯದಲ್ಲಿ , ಕನ್ನಡ ಭಾಷಾಭ್ಯುದಯದಲ್ಲಿ ತೀವ್ರ ಆಸಕ್ತಿಯಿದ್ದ ಚುರುಮುರಿಯವರು ಕಾಳಿದಾಸನನ್ನು ಕನ್ನಡಿಸಿದ ಮೊದಲ ಸಾಹಿತಿ . ಸಾಹಿತ್ಯ ಚರಿತ್ರೆ ಅವರಿಗೆ ಆ ಸ್ಥಾನ ನೀಡಬೇಕಾದದ್ದು ಅತ್ಯಗತ್ಯ (ಮಾಧವ ಮಹಿಷಿ - ಸಂ, ಕಸ್ತೂರಿ)

ಆಧುನಿಕ ಭಾರತದ ರಂಗಭೂಮಿಯ ವಿಕಾಸ ಮತ್ತು ಪ್ರಸಾರಣದ ಶ್ರೇಯ ಮುಂಬೈಯ ಅಲ್ಪಸಂಖ್ಯಾಕರಾದ ಪಾರ್ಸಿಗಳಿಗೆ ಸೇರುವದು. ಹಳೆಯ ಮೈಸೂರಿನ ರಂಗಭೂಮಿ ಇದಕ್ಕೆ ಹೊರತಾಗಿಲ್ಲ. ಪಾರ್ಸಿಗಳದ್ದು ಸುಸಂಘಟಿತ , ಉದಾರ ಉದ್ಯೋಗಶೀಲ ಸಮಾಜ. ತಮ್ಮ ಮೂಲ ಪರಂಪರೆಯನ್ನು ಬಿಡದೆ ಪಾಶ್ಚಿಮಾತ್ಯರೊಡನೆ ಸಮರಸವಾದ ಶ್ರೇಯ

ಇವರದು . ಪಾರ್ಸಿಗಳು ತಮ್ಮದೇ ಆದ ಮೇಳವನ್ನು ಕಟ್ಟಿಕೊಂಡು ನಾಟ್ಯಪ್ರದರ್ಶನ ಕೈಕೊಂಡದ್ದು ಕ್ರಿ . ಶ . ೧೮೫೩ ರಲ್ಲಿ. ಉರ್ದು, ಹಿಂದಿ , ಗುಜರಾತಿ , ಮರಾಠಿ ಕಲಾಕಾರರನ್ನು ಕಲೆ ಹಾಕಿದ್ದರು. ಭಾರತೀಯ ನಾಟ್ಯಶಾಸ್ತ್ರ ಮತ್ತು ಸಾಂಪ್ರದಾಯಿಕ ಕಟ್ಟು ನಿಟ್ಟುಗಳಿಂದ ಸ್ವತಂತ್ರರಿದ್ದ ಇವರು ಜನರಂಜನೆ ಮುಖ್ಯವಾಗಿಟ್ಟುಕೊಂಡು ಪೌರಾಣಿಕ , ಐತಿಹಾಸಿಕ ವಿಷಯ , ಸಾಧು , ಸಂತರ ಚರಿತ್ರೆಗಳನ್ನು ಹೆಚ್ಚಾಗಿ ತಮ್ಮ ನಾಟಕಗಳಿಗೆ ಕಥಾವಸ್ತುವಾಗಿ ಬಳಸಿಕೊಂಡರು. ಅವರು ತಮ್ಮ ರಂಗಮಂಚದ ಮೇಲೆ ಬಳಸುತ್ತಿದ್ದ ಸೀನರಿ, ಬಣ್ಣಬೆಳಕು , ವೇಷ - ಭೂಷಣ ಇತ್ಯಾದಿ ರಂಗಸಜ್ಜಿಕೆ , ಮೋಹಕವಾದ ಗಾನ ನರ್ತನಗಳೊಂದಿಗೆ ಸಮಗ್ರ ಭಾರತದಲ್ಲಿ ಪ್ರಭಾವ ಬೀರಿದರು . ಇಂಗ್ಲೀಷ ಶಿಕ್ಷಣ ಪಡೆದ ಇವರಲ್ಲಿ ಕೆಲವರು ಇಂಗ್ಲಂಡಕ್ಕೆ ಹೋಗಿ ನಾಟ್ಯಕಲೆಯಲ್ಲಿ ತರಬೇತಿ ಸಹ ಪಡೆದು ಮರಳಿದ್ದರು. ನಾಟಕಕಾರನ ಪ್ರತಿಭೆ , ನಟರ ಕಲಾ ಕೌಶಲ್ಯ , ಅದೆಷ್ಟೇ ಉಚ್ಚಮಟ್ಟದಾಗಿದ್ದರೂ, ಪ್ರೇಕ್ಷಕವರ್ಗ ಅದೇ ಇದ್ದರೂ ಯಶಸ್ಸಿಗೆ ಒಂದು ಬಗೆಯ ಅದ್ಭುತರಮ್ಯ ಚಿತ್ತಾಕರ್ಷಕ ನಾವಿನ್ಯ ಬೇಕೆಂಬ ಮಾತು ಪಾರ್ಸಿನಾಟಕಗಳಿಗೆ ಅಧಿಕಾಂಶ ಅನ್ವಯಿಸುತ್ತಿತ್ತು.

ಹಳೆಯ ಮೈಸೂರಿನ ಅಭಿಜಾತ ನಾಟಕ ಪರಂಪರೆಗೆ ಅಲ್ಲಿ ಪ್ರಯೋಗಿಸಲಾದ ಸಾಂಗಲೀಕರ ನಾಟಕ ಕಂಪನಿಯ ಪೌರಾಣಿಕ ನಾಟಕ (೧೮೭೬-೭೭) ಮತ್ತು ೧೮೭೨ ರಲ್ಲಿ ಅಸ್ತಿತ್ವದಲ್ಲಿ ಬಂದ " ವಿಕ್ಟೋರಿಯಾ", ಪಾರ್ಸಿ ನಾಟಕ ಕಂಪನಿ ಪ್ರಯೋಗಿಸಿದ ' ಇಂದ್ರಸಭಾ', 'ಗುಲೇಬ ಕಾವಲಿ' ನಾಟಕಗಳು ಕಾರಣಗಳಾದವು. ಇವೆರಡೂ ಉರ್ದು ನಾಟಕಗಳು. "ಕಣ್ಣು ಕೋರೈಸುವಂತಹ ರಂಗಲಂಕಾರ, ದೃಶ್ಯ ಜೋಡಣೆ, ವೇಷಭೂಷಣಗಳಿಂದ ಅಲ್ಲದೆ ತನಗೆ ತಾನೇ ಸರ ಸರನೆ ಮೇಲಕ್ಕೆ ಸುತ್ತಿಕೊಳ್ಳುವ ಹಾಗೂ ಉರುಳುತ್ತ ಕೆಳಗೆ ಬರುವ ಪರದೆಗಳಿಂದಾಗಿ ಪ್ರೇಕ್ಷಕರು ಅತ್ಯಾಶ್ಚರ್ಯ ಪಟ್ಟರು... ಭಾಷೆ ಏನೂ ತಿಳಿಯದಿದ್ದರೂ ಈ ಪರದೆಯ ಪವಾಡವನ್ನು ನೋಡುವ ಸಲುವಾಗಿ ದೂರದ ಹಳ್ಳಿಗಳಿಂದ ಜನಬಂದಿತು. ನಾಡಿನ ಕಲೆಯನ್ನೂ ಸಾಧನ ಸಾಮಗ್ರಿಗಳನ್ನೂ ಬಳಸಿಕೊಂಡು ನಮ್ಮದೇ ಆದ ನಾಟಕ ರಂಗವನ್ನು ರೂಪಿಸುವ ಸಾಧ್ಯತೆಯ ಬಗೆಗೆ ಹೊಸಕನಸುಗಳನ್ನು ಹುಟ್ಟಿಸಿದವು. ಮೈಸೂರಿನ ದೊರೆ ಚಾಮರಾಜೇಂದ್ರ ಒಡೆಯರು ಕ್ರಿ. ಶ. ೧೮೮೦ ರಲ್ಲಿ ಅರಮನೆಗೆ ಸೇರಿದ ರಾಯಲ್ ಪಾಠಶಾಲೆಯ ವಿದ್ಯಾರ್ಥಿಗಳಿಂದ ನಾಟಕವನ್ನು ಆಡಿಸುವ ಪ್ರಯತ್ನ ಮಾಡಬೇಕೆಂದು ನಿರೂಪ ಕೊಟ್ಟುದರ ಮೇರೆಗೆ ಶಾಲೆಯ ಮುಖ್ಯಾಧಿಕಾರಿಗಳ ನೇತೃತ್ವದಲ್ಲಿ ರಂಗ ಸಜ್ಜಿಕೆಗಳನ್ನು ಹೊಂದಿಸಿಕೊಂಡು, ವಿಶೇಷವಾದ ವೇಷಭೂಷಣ ಅಲಂಕಾರಾದಿಗಳನ್ನು ತಯಾರಿಸಿ 'ಪ್ರಲ್ಹಾದ' ಎಂಬ ಮೊದಲ ನಾಟಕವನ್ನು ಅಭಿನಯಿಸಿದರು.... ಭಾಷೆ ಮರಾಠಿ. ಆದರೂ ಅರಮನೆಯ ದಶಾವತಾರ ಮೇಳದ ಆಟಗಳಿಗಿಂತ ಬೇರೆಯಾಗಿ, ಪ್ರಯೋಗದ ದೃಷ್ಟಿಯಿಂದ ಮರಾಠಿ ಮತ್ತು ಪಾರ್ಸಿ ನಾಟಕ ಮಂಡಳಿಗಳ ಪ್ರದರ್ಶನದ ರೀತಿಯನ್ನು ಅನುಕರಿಸಿದ್ದ ಈ ನಾಟಕ ರಾಜರನ್ನೂ ರಾಣಿವಾಸದವರನ್ನೂ ಆಸ್ಥಾನದ ವಿದ್ವಾಂಸರನ್ನೂ ರಂಜಿಸಿತು (ಡಾ. ಎಚ್. ಕೆ.. ರಂಗನಾಥ

- ಕರ್ನಾಟಕ ರಂಗಭೂಮಿ . ಪುಟ ೧೫೧ - ೧೫೨)

ಅರಸು ಶ್ರೀ ಚಾಮರಾಜೇಂದ್ರ ಒಡೆಯರು ಅದೇ ಬಗೆಯ ನಾಟಕಗಳನ್ನು ಪ್ರಯೋಗಿಸಲು ಆದೇಶ ನೀಡಿದರು. ಅವರ ಆದೇಶಾನುಸಾರ ಮೊದಲು ಹೊರಬಂದದ್ದು ಬಸವಪ್ಪ ಶಾಸ್ತ್ರಿ ಅವರು ಕನ್ನಡಕ್ಕೆ ಅನುವಾದಿಸಿದ "ಶಾಕುಂತಲ ನಾಟಕ". ಈ ನಾಟಕದ ರಂಗ ಪ್ರದರ್ಶನ ಕೈ ಕೊಂಡದ್ದು ೧೮೮೧ ರಲ್ಲಿ. ಈ ನಾಟಕವನ್ನು ನೋಡಿದ ಅರಮನೆಯ ಪಂಡಿತರು ಬಸವಪ್ಪ ಶಾಸ್ತ್ರಿಗಳಿಗೆ" ಅಭಿನವ ಕಾಳಿದಾಸ "ಬಿರುದನ್ನು ಕೊಟ್ಟಿತು. "ಶಾಕುಂತಲ ಕರ್ನಾಟಕ ಸಭಾ" ಎಂಬ ಅರಮನೆಯ ಪೋಷಿತ ಸಂಸ್ಥೆಗೆ ಜನುಮಕೊಟ್ಟಿತು. ಅಲ್ಲದೆ ೧೮೮೨ ರಲ್ಲಿ "ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ " ಎಂದು ಬದಲಿಸಲಾಯಿತು.

ಹೊಸಗನ್ನಡ ರಂಗಭೂಮಿಯ ಆದ್ಯತನ ಶಾಂತಕವಿಗಳಿಗೆ ಸೇರುವದು. ಆದರೂ ಅವರ ನಾಟಕಗಳು ಚುರಮುರಿಯವರ ಬಗೆಯ ನಾಟಕ ಮಾಲಿಕೆಯಲ್ಲಿ ಬರುವಂತಿಲ್ಲ. ಕಿರ್ಲೋಸ್ಕರರ ಮರಾಠಿ ಶಾಕುಂತಲ ನಾಟಕ ೧೮೮೦ ರಲ್ಲಿ ರಂಗಭೂಮಿಗೆ ಬಂದು ಯುಗ ಪ್ರವರ್ತಕ ನಾಟಕವೆಂಬ ಕೀರ್ತಿಯನ್ನು ಗಳಿಸಿತು. ಈರ್ವರೂ ಭಾಷಾಂತರದ ಮಾನದಂಡಗಳನ್ನು ಸರಿಸದ ಪರಿವರ್ತನಗಳಿಲ್ಲದಿದ್ದರೂ, ಚುರಮುರಿ ಮತ್ತು ಕಿರ್ಲೋಸ್ಕರರ ಶಾಕುಂತಲ ನಾಟಕಗಳಲ್ಲಿ ಸ್ವತಂತ್ರವೆನಿಸುವಷ್ಟು ಅವರವರ ಪ್ರತಿಭೆ ಅನುಭವಗಳಿಂದ ಕೂಡಿದ ತಾತ್ಕಾಲೀನ ಹಳೆ ಹೊಸ ಬಗೆಯ ಲೋಕಪ್ರಿಯ, ಸಾಮಾನ್ಯ ಮತ್ತು ರಾಗದಾರಿ ಮಟ್ಟುಗಳಲ್ಲಿರುವ ಹಾಡು ಅಷ್ಟಿಷ್ಟು ವ್ಯಾಕರಣಬದ್ಧವಿದ್ದರೂ ಬಳಕೆ ಮಾತಿನ ಶೈಲಿಯಲ್ಲಿರುವ ಗದ್ಯ ಸಂಭಾಷಣೆ ಆಕರ್ಷಕವಾಗಿವೆ. ಮೀನಗಾರ - ಗ್ರಾಮ್ಯ, ಬಾಲಕ ಸರ್ವದಮನ - ತೊದಲು ವಿದೂಷಕ - ಗ್ರಾಮ್ಯ ಭಾಷೆ ಮಾತಾಡುವದು ಆಕರ್ಷಕವಾಗಿದೆ.

ಒಂದು ಉದಾಹರಣೆ

ಚುರಮುರಿ : ೨ ನೇ ಅಂಕವು.

(ಆ ಮ್ಯಾಲೆ ಬಹು ದಣಿದುಕೊಂಡಂಥಾ ವಿದೂಷಕನು* ಬರುತ್ತಾನೆ.)

ವಿದೂಷಕ : (ಶ್ವಾಸಬಿಡುತ್ತ) ಏನ್ ನನ್ನ ಕರ್ಮಪ್ಪಾ ! ಈ ಅರಸಿನ ಬ್ಯಾಟೀ ಕಾಲಾಗ ನಾ ನನಕಾ ದಣಿದ ಹೋದ್ನಿ. ಕವವ ಚಿಗರಿ! ಕವವ ಕಾಡಂದಿ! ಕವವ ಹುಲಿ! ಅಂತ ವದರ್ಯಾಡಿಕೊಂತ ಈ ಅಡಿವ್ಯಾಗಿಂದಾ ಅಡಿವಿ ಆ ಅಡಿವ್ಯಾಗಿಂದೀ ಅಡಿವಿ ಓಡಿ ಓಡಿ ಸಾಕ ಸಾಕಾತ್ನೋ ನಮ್ಮಪ್ಪಾ! ಬಿಸಲಂತೀ ಗಿರೀಸ ಮರತು., ಕೇಳೂದೇನತಿ, ರಣ ರಣ ಕುಟ್ಟೇ

* ಹಾಸ್ಯಗಾರನು.

ಕುಟ್ಟುತತಿ; ಮದ್ಯಾಣ ದ್ಹೊತ್ತಿನಾಗ ವಂದಜರಾ ಗಿಡದಬುಡಕ ಕುಂತೇನಂದರ ನೆಳ್ಳರ ಆತೆ? ಅದೂ ಇಲ್ಲ. ನೀರಡಸಾದಾತೊಪ್ಪಲ ಬಿದ್ದ ಕೊಳತ ಹಳದಾಸ ನೀರ ಕುಡ್ಯಾಣ, ಹನುವಾಗಾದಾ ಹೊತ್ತಲ್ಲದ್ಹೊತ್ತಿನ್ಯಾಗ ಹಸೆಖಂಡತಿಂಸಾಣಾ! ಇವನ ಕುದರೀ ಹಿಂದ ಓಡಿ ಓಡಿ ಕೈ ಕಾಲೆಲ್ಲಾ ಸಂದ ದಪ್ಪಿ ಹೋದುವು. ರಾತರಿನ್ಯಾಗ ಕಂಣ ತುಂಬಾ ನಿದ್ದ್ಯಾರ ಆಕ್ಕತೆ ? ಅದೂ ಇಲ್ಲ ; ಒಂದ ಜರಾ ಜಂಪ ಹತ್ತತ್ತೋ ಇಲ್ಲೊ ಆಟರಾಗ ಬ್ಯಾಟೀ ಆಡೋ ಮಮ್ಮಕ್ಕಳು ವದರ್ಯಾಡಿಕೊಂತ ಬಂದ ಕ್ಯಾಸಿ ಎಚ್ಚಿಸಿವರ ! ಎಲಾ ಇವರ ಮಂಜಾಳ ಹೋಗಲಿ *

ಇಷ್ಟಾದರೂ ಆಗಲಿ, ಮತ್ತೂ ಕುರವಿನ ಮ್ಯಾಗ ಹುಂಣ ಹುಟ್ಟಿದ್ಹಾಂಗ ನಿನ್ನೆ ಅಪನಾರು ಚಿಗರೀ ಬೆನ್ನತ್ತಿ ನಮ್ಮನ್ನು ಬಿಟ್ಟಕ್ಯಾಸಿ ಮುಂದ ನಡದ ನುಸಿಗೊಳ ವನದಾಗ ಹೊಕ್ಕೊಂಡರ; ಅಲ್ಲಿ ಸಕುಂತರೆಂತ ವಂದ ಹುಡಿಗಿ ಇವನ ಕಂಣಿಗೆ ಬಿತ್ತಂತ ; ಇನ್ನೇನ ಬರತಾನಿವ ಊರಿಗೆ! ಯಾಶಿವನ! ನಮ್ಮ ಕಾಡೂ ಕಾಲಲೆ ಬಾ ನೀ ಏನ ಮಾಡಿ ! ಇಲ್ಲೇ ಅಡಿವ್ಯಾಗ ನಮ್ಮ ದಾಕ್ಕತಿ, ಅವಗಂತೀ ನಿನ್ನೆ ರಾತರಿನ್ಯಾಗ ನಿದ್ದೀನ ಇಲ್ಲ. ಮನಸೆಲ್ಲಾ ಆ ಹುಡಿಗೀ ಹಂತ್ಯಾಕ! ಯವ್ವಾ ಎತ್ತ ಮಾರ್ಯಾಗಿ ಕುಂತಿದ್ದಿ!

(ಅತ್ತಿತ್ತ ತಿರಗಿ ನೋಡುತ್ತ) ಹಾ ನನ್ನ ವಡ್ಯಾ ಇತ್ತೇ ಬರತಾನು; ಸಂಡಾಕ ಅಡವೀ ಚಿಂಚೇರ ಹೆಂಗಸರ ಬ್ಯಾರೆ ಕೊಳ್ಳಾಗ ಮಾಲಿ ಹಾಕ್ಕೊಂಡಕ್ಯಾಸಿ ಬಿಲ್ಲ ಹಿಡ ಹಿಡಕೊಂಡ ಬರತದಾರು ಬರಲಿ ; ನಾನೂ ಒಂದ ಜರಾ ಮತ್ತಟ ದಣದ್ಹಾಂಗ ಮೋತಿ ಮಾಡಿಕೊಂಡ ಕ್ಯಾಸಿ ಇಲ್ಲೇ ನಿಲ್ತೇನ, ಅಂದರಾರ ನನ್ನ ಬಿಟ್ಟಾನಿವ. (ಎಂದು ಊರ ಗಟಗಿಗೆ ಗದ್ದವನ್ನು ಹೊಂದಿಸಿ ನಿಲ್ಲುತ್ತಾನೆ. ಆಮೇಲೆ ಮೇಲೆ ಹೇಳಿದ ಪ್ರಕಾರ ಅರಸು ಅಡವೀ ಸಂಚಾರಿಯರ ಕೂಡ ಬರುತ್ತಾನೆ.)

ಅಸರು : (ಶಕುಂತಲೆಯ ಧ್ಯಾನದಲ್ಲಿ ಮುಳುಗಿ ತನಗೆ ಅಂದುಕೊಳ್ಳುತ್ತಾನೆ.)

(ಧಾಟಿ ||ಪದ|| - " ವಯ್ಯಾರೀ ವಲಸೀದಳೇನೊ || ಪಲ್ಲ|| ಅತಿ ಮೋಹವೆರಸಿ | ರತಿಸುಖ ಸುರಸಿ|| ಕೃತಿಮೆ ಎನ್ನನು ಮರಸೀದಳೇನೋ || ೧|| ಇದರಂತೆ ಇರುತ್ತದೆ.)
ಮೋಹಾಬ್ಧಿಯೊಳ್ಮುಗೀಹೆನಯ್ಯೊ||ಪಲ್ಲ|| ಯುವತಿಯ ಸಾಧನಾ |ಇರಲತಿ ಕಠಿಣಾ|| ಅವಳ ಭಾವಗಳೆಲ್ಲ| ನೆನದು ನಾ ||೧|| ಕನಸಿನೊಳ್ ಸುಖವನು| ಕಂಡು ಹಿಗ್ಗುವ ||ಒಲು|| ಮನದಿ ಜಾಗೃತನಿರ| ಲನುಭವಿಸುವೆನಾ ||೨|| ಮನಸಿಜನು ಕೃತಾರ್ಥನು ಆಗದ ಮುನ್ನಾ|| ಮನಸಿರ್ವರವು ಕ್ರೀಡಿಸುತಿ ರೆನಾ ||೩|| (ಸ್ವಲ್ಪ ನಕ್ಕು) ತಾನು ಒಬ್ಬರಲ್ಲಿ ಇಚ್ಛೆ ಮಾಡಲು ತನ್ನ ಮನಸ್ಸು ಹ್ಯಾಂಗೆ ಅವರಲ್ಲಿರುವದೊ ಅದೇ ಪ್ರಕಾರವೆ ಅವರ ಮನಸ್ಸು! ತನ್ನಲ್ಲಿರುವವೆಂದು

*" ಮಂಜಾಳ ಹೋಗಲಿ " ಎಂದರೆ " ಮನಿ ಜ್ವಾಲಿ ಹೋಗಲಿ " ಎಂಬುದಾಗಲಿ ಅಥವಾ " ಮನೀ ಜೋಳ ಹೋಗಲಿ" ಎಂಬುದಾಗಲಿ ಅರ್ಥವಿರಬಹುದು.

ಕಾಮಿಪುರುಷನು ತರ್ಕಕಟ್ಟುತ್ತಾನೆ; ಇದರಿಂದೆ ಆತನು ಉಪಹಾಸಕ್ಕೆ ಮಾತ್ರ ಪಾತ್ರನಾಗುತ್ತಾನೆ.

||ಪದ||

(ಧಾಟಿ - "ಹರಿಯೇ ಪೋಗುವೆ ನಾನು ಮುಂ। ನಿರುತಿರುವಾಬ್ಬನೆ ನೀನು|| ತಿರಕನಾಗಿ ಇರುತಿರುವ ಭೂಸುರನು। ಭರದಲ್ಯೊದ್ದು ತಂನ್ನಿರಿಯತನೇನು" ಇದರಂತೆ ಇರುತ್ತದೆ.)

ಬರಿದೆ ಮಹಾನಂದಾದೊಳ್ನಾ। ನಿರುವೆ ನಾಶ್ಚರಿಯವಿದು|| ತರುಣಿಯ ಭಾವಗರೆಳಿ ಸಹಜಿಕವು। ಮರುಳ ಹೆನೆನ್ನ ಗೋ। ಸ್ಕರ ವೆಂದರಿದು ||ಪಲ್ಲ|| ಚಲ್ಲಾಗಾರ್ತಿನಿ ತಂಬದ ಭಾರಕೆ। ಮೆಲ್ಲಕೆ ಹೆಜ್ಜೆಗಳಿಡಲು|| ಬಳ್ಳಿಲಿಕರಗನು। ಬಟ್ಟಿನ ಕುಚಯುಗ। ಳಲ್ಲಿ ಸರಿಸಿದೂರಾ। ದಲ್ಲಿ ನಿಂದಿರಲು ||೧|| ತನ್ನೋಳು ತಾ ಧ್ಯಾನಿಸುತ ಮತ್ತನ್ಯಾ ವಸ್ತುಗಳನ್ನು|| ರಂನೆ ನೋಡಿ ನಗು। ವಂನ್ಯಗ ಕಸ್ಮಿಕ। ವೆನ್ನನೀಕ್ಷಿಸಿಕ್ಷಣ। ಕಂಣು ದಪ್ಪಿಸಲು ||೨ || ಬಾಲೆ ತಾ ಪೋಗುವ ವ್ಯಾಳ್ಯದಿ। ಕಲೋಳು ದರ್ಭವು ನಡಲು|| ಕೀಳಿ ತೆಗುವನೆವ। ಕಾಗಿತಾ ನಿಲಲು। ತಾಳಿದಳ್ಳಮತೆ ಎನ್ನೊಳೆಂದರಿದು ||೩||

ಸಾರಾಂಶ ಅವಳೇನೇನು ಮಾಡಿದಳೋ ಅದೆಲ್ಲಾ ನನ್ನ ಗೋಸ್ಕರವೇ ಮಾಡಿದಳೆಂದು ನಾನು ತಿಳಿಯುತ್ತೇನೆ. ಕಾಮೀ ಜನರಿಗೆ ಎಲ್ಲವೂ ತಮ್ಮಂತೆ ಕಾಣಿಸುತ್ತದೆ.

ವಿದೂಷಕ : (ಹಾಂಗೇ ನಿಂತುಕೊಂಡು) ನನ್ನ ವಡ್ಯಾರಾರಾ ಮಾಡಾಕ ನನ್ನ ಕೈಯತ್ತಾಣೆಲ್ಲ, ಬರೆ ಬಾಂಬರೇನ ಅಂತೇನ.

ಅರಸು : ಏನೋ ಹನಮನಾಯಕಾ ಹೀಂಗ್ಯಾಕಾಯಿತು. ನಿನ್ನ ವಷ್ಠಿ?

ವಿದೂ : ಹಃ ತಾನ ಬಡದ ಕ್ಯಾಸಿ ಮತ್ತ ತಾನ ಅಳತಿ ಯಾಕಂತ ಕೇಳ ತಾನು!

ಬಸವಪ್ಪ ಶಾಸ್ತ್ರಿ : ದ್ವಿತೀಯಾಂಕಂ.

(ಬಳಿಕ ದುಃಖಿತನಾದ ವಿದೂಷಕನು ಪ್ರವೇಶಿಸುವನು.)

ವಿದೂಷಕನು - *(ನಿಟ್ಟುಸಿರನ್ನು ಬಿಟ್ಟು) ಅಯ್ಯೋ ದೈವವೆ ಬೇಟೆಯಲ್ಲೇ ಆಸಕ್ತನಾದ

* ರಾಗ ಧೀರಶಂಕರಾಭರಣ ನೋಟು ||ಆದಿತಾಳ ||

ವಿದೂಷಕನು - ಹಾಹಾ ವಿದೇನಿದು। ಮೋಹವಾದುದು|| ಊಹೆ ಗೈಯದರಸ ನೊಡನೆ। ಸ್ನೇಹವಾಂತುದು ||ಪ|| ಎಲ್ಲಿ ನೋಡುವೆ ಎಲ್ಲಿ ಗೈದುವೆ|| ಹುಲ್ಲೆಯೊಡನೆ ಹೋದ ನೃಪನ। ನೆಲ್ಲಿ ಹುಡುಕುವೆ ||೧|| ಹೊತ್ತು ಪೊತ್ತಿಗೆ। ತತ್ತಬಾಯಿಗೆ। ಇತ್ತು ಕಾಣೆ ಹತ್ತಿತ್ತು ಬಲು ।ಪಿತ್ತನಿತ್ತಿಗೆ ||೨|| ಬೇಡಬೇಡವು। ಬೇಟೆಯಾಟವು|| ಕಾಡ ತಿರುಗಿ ತಿರುಗಿ ಮೈ। ಬಾಡಿತಲ್ಲವು. ||೩||

ಈ ರಾಯನ ಸ್ನೇಹದಿಂದ ಕೆಟ್ಟೆನಲ್ಲಾ! ಇದೋ ಹುಲ್ಲೆ! ಇದೋ ಹಂದಿ! ಇದೊ ಹುಲಿ! ಎನ್ನುತ್ತಾ ಮಧ್ಯಾಹ್ನದಲ್ಲಿಯೂ ಬೇಸಗೆಯಿಂದ ದಟ್ಟವಾಗಿ ಮರದ ನೆರಳಿಲ್ಲದ ಅಡವಿಗಳಲ್ಲಿ ಸುತ್ತಿ ಸಾಕಾಯಿತು.ಉದುರಿದಲೆಗಳಿಂದ ಒಗರಾಗಿ ಬೆಚ್ಚಗಿರುವ ಬೆಟ್ಟದ ಜೋಗಿನ ನೀರುಗಳನ್ನೆಲ್ಲಾ ಕುಡಿದಾಯಿತು. ಇದು ಹೊರತಾಗಿ ಹೊತ್ತುಗೊತ್ತಿಲ್ಲದೆ ಸುಟ್ಟಮಾಂಸವೇ ಹೆಚ್ಚಾಗಿರುವ ಆಹಾರವು ಭುಂಜಿಸಲ್ಪಟ್ಟಿತು ; ಕುದುರೆಯ ಹಿಂದೋಡಿ ಶರೀರದ ಕೀಲುಗಳೆಲ್ಲಾ ಸಡಿಲಿ ನೋವಿಂದ ರಾತ್ರಿಯಲ್ಲಿಯೂ ನಾನು ಚೆನ್ನಾಗಿ ಮಲಗಲಿಲ್ಲ. ಆಮೇಲೆ ಬೆಳಕು ಹರಿಯುದಕ್ಕಿಂತ ಮುಂಚೆಯೇ ಅರಣ್ಯವನ್ನು ಆಕ್ರಮಿಸುವ ತೊತ್ತಿನ ಮಕ್ಕಳಾದ ಹಕ್ಕಿಯ ಬೇಟೆಗಾರರ ಕಲಕಲಧ್ವನಿಯಿಂದ ಎಚ್ಚರವಾಯಿತು ; ಇಷ್ಟಾದರೂ ಇನ್ನೂ ಕಷ್ಟ ತಪ್ಪಲಿಲ್ಲ. ! ಆದುದರಿಂದ ಕುರುವಿನಮೇಲೆ ಬೊಕ್ಕೆಯೆದ್ದಂತಾಯಿತು. ನೆನ್ನೆಯ ದಿವಸ ನಮ್ಮನ್ನು ಹಿಂದೆ ಬಿಟ್ಟು ಹುಲ್ಲೆಯನ್ನು ಅಟ್ಟಿಕೊಂಡು ಆಶ್ರಮವನ್ನು ಹೊಕ್ಕ ನಮ್ಮ ರಾಯನಿಗೆ ನನ್ನ ದುರದೃಷ್ಟವು ಶಕುಂತಳೆಯೆಂಬವಳನ್ನು ಬೇರೇ ತೋರಿಸಿತು. ಈಗ ನಮ್ಮ ರಾಯನು ಊರಿಗೆ ಹೋಗುವ ಸಮಾಚಾರವನ್ನೇ ಎತ್ತುವದಿಲ್ಲ. ಈಗಲೂ ಆ ಸಂಗತಿಯನ್ನೇ ಚಿಂತಿಸುತ್ತಿರುವ ನನಗೆ ಕಣ್ಣುಗಳನ್ನು ಬಿಟ್ಟುಕೊಂಡಿದ್ದ ಹಾಗೆಯೇ ಬೆಳಗಾಯಿತು. ಮಾಡತಕ್ಕುದೇನು ? ಪ್ರಾತಃಕಾಲದ ಕಾರ್ಯಗಳನು ಮುಗಿಸಿಕೊಂಡು ಬರುವ ಆತನನ್ನು ಯಾವಾಗ ಕಂಡೇನು ? (ಸ್ವಲ್ಪ ನಡೆದು ನೋಡಿ) ಇದೋ ಕಾಡುಹೂಗಳನ್ನು ಮುಡಿದು ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡಿರುವ ಯವನಸ್ತ್ರೀಯರ ಗುಂಪಿಂದ ಪರಿವೃತನಾಗಿ ಈ ಕಡೆಯೇ ನನ್ನ ಮಿತ್ರನು ಬರುವನು. ಆಗಲಿ; ಅಂಗಭಂಗವಿಕಲನಂತೆ ನಿಂದಿರುವೆನು. ಹೀಗಾದರೆ ತಾನೆ ವಿಶ್ರಾಂತಿಯನ್ನು ಹೊಂದಬಹುದು. (ಎಂದು ದೊಣ್ಣೆಯನ್ನು ಊರಿಕೊಂಡು ನಿಲ್ಲುವನು.)

ಇದು ಪ್ರವೇಶಕವು.

(ಅನಂತರ ಪರೋಕ್ತ ಪರಿವಾರದೊಡನೆ ರಾಜನು ಪ್ರವೇಶಿಸುವನು.)

ರಾಜಂ.- ಕಂದ|| ಮುನಿತನಯೆ ಸುಲಭೆಯಲ್ಲಂ|
ಮಾನಮಾದೊಡೆ ಕಳವಳಿಪುದು ತದ್ಭಾವ ಲೋ||
ಕನದಿಂ ಕಾಮಂ ಸಾರ್ಥಕ |
ನೆನಿಸದೊಡಂ ಮಾಳ್ಪುದೀರ್ವರಾಸೆಯೆ ರತಿಯಂ.|| ೩೫

(ನಸುನಕ್ಕು) ಇಷ್ಟ ಜನದ ಚಿತ್ತವೃತ್ತಿಯನ್ನು ತನ್ನ ಅಭಿಪ್ರಾಯಕ್ಕೆ ಅನುಸಾರಿಯನ್ನಾಗಿ ಹೀಗೆ ಕಲ್ಪಿಸಿಕೊಳ್ಳುವ ಕಾಮುಕನು ಹಾಸ್ಯಕ್ಕೆ ಗುರಿಯಾಗುವನು. ಹಾಗೆಯೇ ಸರಿ,

ವೃತ್ತ|| ಬೇರೆಡೆಯಿಟ್ಟ ದಿಟ್ಟಿಯಿನಭೀಕ್ಷಿಸುವಾಕೆಯ ನೇಹನೋಟವುಂ|
ತೋರನಿತಂಬಭಾರಕಲಸುತ್ತವೆ ಪೋಪಳ ಮುಂದಯಾಮುಂ||
ಸಾರದಿರೆಂದ ತನ್ನ ಸಖಿಗುತ್ತರವಂ ಮುನಿದಾಕೆಯಿತ್ತುದಂ|
ತೋರಿದುದನ್ನದಾಗ ಹಹ ಕಾಮುಕನೀಕ್ಷಿಪನಲ್ಲೆ ನೈಜಮಂ|| ೩೬

ವಿದೂ (ಮೊದಲಿನಂತೆ ದಂಡವನ್ನು ಊರಿಕೊಂಡು ನಿಂತು) ಎಲ್ಲೈ ಮಿತ್ರನೆ,

*

ಸ್ವಾರಸ್ಯ ಪೂರ್ಣ ಕೃತಿಗಳನ್ನು ಬೇರೊಂದು ಸಾಹಿತ್ಯದಿಂದ ತಮ್ಮ ಮಾತೃಭಾಷೆಗೆ ಪರಿವರ್ತಿಸಿ ಜಿಜ್ಞಾಸುಗಳನ್ನು ತಣಿಸುವದು ಭಾಷಾ ಪಂಡಿತರು ಕೈಕೊಳ್ಳುವ ಒಂದು ಪ್ರವೃತ್ತಿ. ಇದು ಜ್ಞಾನ ವಿಸ್ತಾರಕ್ಕೆ ಮಹತ್ವದ ಸಾಧನೆ. ಕಾವ್ಯ, ನಾಟಕಗಳಲ್ಲಿ ಈ ಕಾರ್ಯ ಕೈಗೂಡಿ ಯಶ ದೊರೆಯುವುದು ಸುಲಭವಾಗಿರುವುದಿಲ್ಲ. ಕಾರಣ ಪ್ರತಿಯೊಂದು ಭಾಷೆಗೆ ತನ್ನದಾದ ಒಂದು ಮಾಧುರ್ಯವಿರುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಕೈಕೊಂಡ ಭಾಷಾಂತರ ಎಷ್ಟೇ ಮೂಲಕ್ಕೆ ಸಮೀಪವಿದ್ದರೂ ವ್ಯತ್ಯಾಸಗಳು ಇರುವದು ಅನಿವಾರ್ಯ. ಶಬ್ದಶಃ ಭಾಷಾಂತರಿಸಿದರೆ ಕೃತಿ ಸಪ್ಪಗಾಗಿ ವಿಕೃತವೆನಿಸುವಷ್ಟು ಹದಗೆಡುವದು.

ಕನ್ನಡದಲ್ಲಿ ನಾಗವರ್ಮ ಚಂಪೂರೂಪದಲ್ಲಿ ಪರಿವರ್ತಿಸಿದ ಬಾಣನ ಗದ್ಯ ಕಾದಂಬರಿ ಮೊದಲಿನದಾಗಿ ಕಾಣುವದು. ಪರಿವರ್ತನೆಯನ್ನು ಮೂಲದೊಡನೆ ತುಲನೆ ಮಾಡಿ ನೋಡಿದರೆ ನಾಗವರ್ಮ ತನಗೆ ಅನವಶ್ಯಕ ವೆನಿಸಿದ ವರ್ಣನೆಗಳನ್ನು ತೆಗೆದು ಹಾಕಿರುವನು, ಕೆಲವನ್ನು ಯಥಾ ಸ್ಥಿತಿಯಲ್ಲಿ ಇಟ್ಟಿರುವನು. ಅನ್ಯ ಪದ ಪ್ರಯೋಗ ಕೈ ಕೊಂಡಿರುವನಲ್ಲದೆ ಕೆಲವನ್ನು ಸಂಕ್ಷೇಪಿಸಿದ್ದೂ ಕಂಡುಬರುವುದು. ಆದರೂ ಕಥಾನಕ ಪಾತ್ರಗಳ ಜೀವಾಳ ವರ್ಣನಾ ಸ್ವಾರಸ್ಯಾದಿಗಳಿಗೆ ಕುಂದು ಬರದಂತೆ ಮೂಲವನ್ನು ಬಿಡದೆ ಸಲೀಲವಾಗಿ ಬರೆದಿದ್ದಾನೆ. ತನ್ಮೂಲಕ ಅನುಕೃತಿ ಸ್ವತಂತ್ರ ವಾಗಿದೆ ಎಂಬುದು ವಿಮರ್ಶಕರ ಅಭಿಪ್ರಾಯ. ಇದರಿಂದ ಆತನಿಗೆ ಗೌರವಾನ್ವಿತ ಸ್ಥಾನ ಪ್ರಾಪ್ತವಾಗಿದೆ.

ನಂತರ ಕನ್ನಡ ಸಾಹಿತ್ಯಕ್ಕೆ ಬಂದುದು ಸಿಂಗರಾರ್ಯನ " ಮಿತ್ರವಿಂದಾ ಗೋವಿಂದ".ರಂಗ ಭೂಮಿಗಾಗಿ ಜನುಮಪಡೆದ ಹಳಗನ್ನಡ ಕಂದ ವೃತ್ತ ಭೂಮಿಷ್ಠಕೃತಿ. ಭಾಷೆ ಕೃತಕವೆನಿಸಿದರೂ ಲಲಿತ, ಶೃಂಗಾರಿಕ , ನರ್ಮವಿನೋದದಿಂದ ತಾತ್ಕಾಲಿನ ಅಭಿರುಚಿಗನುಸರಿಸಿ ಅರಮನೆ ರಂಗಭೂಮಿಗೆ ಕಳೆ ತಂದಿರಬಹುದು.

ತದನಂತರ ಬೆಳಕಿಗೆ ಬಂದ ಕೃತಿ ಚುರಮುರಿ ಶೇಷಗಿರಿರಾಯರ ಮಹಾಕವಿ ಕಾಲಿದಾಸನ ಲಕ್ಷಣ ಬದ್ಧ ನಾಟಕ - ಅಭಿಜ್ಞಾನ ಶಾಕುಂತಲದ ಕನ್ನಡ ಅನುವಾದ. ಕನ್ನಡ ಮರಾಠಿ ರಂಗಭೂಮಿಗೆ ಮಾತೃಸ್ಥಾನದಲ್ಲಿರುವ ಪ್ರಪ್ರಥಮ ಹೊಸಬಗೆಯ ಸಾಗ್ರ ಸಂಗೀತ ಮಾರ್ಗಿಕೃತಿ. ಪ್ರೇಕ್ಷಕರ ಸರ್ವತೋಪರಿ ಮೆಚ್ಚುಗೆ ಪಡೆಯುವ ಉದ್ದೇಶದಿಂದ ತಮಗೆ ಉಚಿತವೆನಿಸಿದ ಬದಲಾವಣೆ, ಭಾಷಾ ವ್ಯತ್ಯಾಸ ಇತ್ಯಾದಿಗಳೊಂದಿಗೆ ಮುಂದುವರೆದಿದೆ. ಉದಾಹರಣೆಗಾಗಿ ಎರಡನೆಯ ಅಂಕಿನಲ್ಲಿ ವಿದೂಷಕ ತನ್ನ ಗೋಳನ್ನು ತೋಡಿಕೊಳ್ಳುವಾಗ ದುಷ್ಯಂತರಾಜ ಅರಣ್ಯ ಕುಸುಮ ಮಾಲೆಗಳನ್ನು ಧರಿಸಿದ ಯವನ ಪರಿಚಾರಿಕೆಯರೊಂದಿಗೆ ಪ್ರವೇಶಿಸುವನು. " ಯುವನೀಭಿ:" ಎಂಬ ವಾಕ್ಯವನ್ನು "ಯವನ ಸ್ತ್ರೀಯರು" ಎಂದು ಬಸವಪ್ಪ ಶಾಸ್ತ್ರಿಗಳು ಹೇಳಿರುವರು. ಚುರಮುರಿ ಧಾರವಾಡದವರು. ಧಾರವಾಡ ಪಶ್ಚಿಮ ಸೆರಗಿನಲ್ಲಿ ಬೇಡರ

ವಸತಿ ಹೆಚ್ಚು. ಬೇಟೆ ಅವರ ಜೀವನೋಪಾಯ. " ಅಡವಿಯಲ್ಲಿ ಸಂಚರಿಸುವವರು" ಎಂಬುದು " ಅಡವಿ ಚಿಂಚೇರ " ಎಂದು ಅಪಭ್ರಂಶವಾಗಿದೆ. ಇದನ್ನು ಇಲ್ಲಿ ನೆನೆಯುಬೇಕು. ಚುರಮುರಿ ತಮ್ಮ ಅನುವಾದದಲ್ಲಿ ' ಯವನೀಭಿಃ' ಯನ್ನು ' ಅಡವಿ ಚಿಂಚರ ಹೆಂಗಸರು ' ಎಂದು ಪರಿವರ್ತಿಸಿರುವರು. ಮುದವೀಡು ಕೃಷ್ಣರಾಯರು ' ಮೂಲ ಶಾಕುಂತಲದಲ್ಲಿರುವ ಅಗಾಧವಾದ ಕಲ್ಪನಾ ಚಮತ್ಕೃತಿ, ಅಸದೃಶ್ಯವಾದ ವರ್ಣನಾ ಚಾತುರ್ಯ, ಅನನ್ಯ ಸಾಧಾರಣವಾದ ಅಲಂಕಾರ ನಿಯೋಜನೆ ಮೊದಲಾದ ಕಾಳಿದಾಸನ ಕಲಾವೈಶಿಷ್ಟ್ಯಗಳನ್ನು ಅಚ್ಚಗನ್ನಡದ ಮುಸೆಯಲ್ಲಿ ಎರಕ ಹೊಯ್ಯುವಾಗ ಚುರುಮುರಿಯವರು ತಮಗೆ ನಿಸರ್ಗ ಸಿದ್ಧವಾದ ಕವಿತ್ವ ಪ್ರತಿಭೆಯ ಪ್ರಭಾವದಿಂದ ಚೆನ್ನಾಗಿ ವಿಕಾಸಗೊಳಿಸಿ ಮೂಲಕೃತಿಯ ಅಂದ ಚೆಂದಗಳಿಗೆ ಹೆಚ್ಚಿನ ಸಿಂಗಾರವನ್ನು ತಂದು ಕೊಟ್ಟಿರುವರು" ಹೇಳಿರುವರು.

ಚುರುಮರಿಯವರು ಶಾಕುಂತಲ ನಾಟಕದಲ್ಲಿ ಅವರು ರಚಿಸಿದ ರೂಪಾಂತರಿಸಿದ ಪದ್ಯಗಳಲ್ಲಿ ಛಂದ ಶಾಸ್ತ್ರದ ದೋಷಗಳಿರಬಹುದು. ಶಬ್ದ ಮಣಿದರ್ಪಣ ಶಬ್ದಾನುಶಾಸನ ಸೂತ್ರಗಳ ವರೆಗಲ್ಲಿಗೆ ಹಚ್ಚಿದಲ್ಲಿ ವ್ಯಾಕರಣ ದೋಷಗಳನ್ನು ಹಲಕೆಲವು ಹೊರಡಬಹುದು. ಸಾಹಿತಿಗಳೆಂಬ ಶಾಸ್ತ್ರಾಭ್ಯಾಸ ನಿಪುಣನಿಗೆ ಇಂಥವು ಸರಿ ಬರಲಾರವೆಂಬುದು ಕಟ್ಟಿಟ್ಟ ಮಾತೇ ಸರಿ. ಆದರೆ ಇದನ್ನು ಬರೆದ ಕಾಲ, ಅವರು ಬೆಳೆದ ಪರಿಸ್ಥಿತಿ, ಸಂಪಾದಿಸಿದ ಶಿಕ್ಷಣ ಮೊದಲಾದ ಆನುಷಂಗಿಕ ಸಂಗೀತಗಳನ್ನೆಲ್ಲ ಮನಸ್ಸಿಗೆ ತಂದು ನೋಡಿದರೆ ಇಂಥ ದೋಷಗಳನ್ನು"ಆರ್ಷೀ ಪ್ರಯೋಗ"' ಎಂಬ ಕಾವ್ಯ ಲಕ್ಷಣದಲ್ಲಿ ಸೇರಿಸುವದು ಸೂಕ್ತವೆನಿಸುವದು "(ಮುದವೀಡು ಕೃಷ್ಣರಾಯರು ೧೯೩೪ ರಲ್ಲಿ ಪ್ರಕಟವಾದ ಶಾಕುಂತಲನಾಟಕದ ಮುನ್ನುಡಿ ಇದೇ ಸಂದರ್ಭದಲ್ಲಿ ಬಸವಪ್ಪ ಶಾಸ್ತ್ರಿಗಳ ಶಾಕುಂತಲ ನಾಟಕವನ್ನು ಉಲ್ಲೇಖಿಸಿ ಅವರದು " ಹೊಸಗನ್ನಡದ ಗದ್ಯ ದಿಂದೊಡಗೂಡಿದ ಪದ್ಯಗಳಲ್ಲಿ ಶಾಸ್ತ್ರಿಗಳವರ ಅಗಾಧ ಪಾಂಡಿತ್ಯಕ್ಕೆ ಅನುರೂಪವಾಗುವಂತೆ ಪಳಗನ್ನಡ ನುಡಿದಾರಿಯನ್ನೊಳಗೊಂಡತಿ ಪಂಡಿತ ಪ್ರಬುದ್ಧ ಪ್ರಿಯವಾಗಿ ಮೂಲದ ಪ್ರತಿಕೃತಿ ಯಲ್ಲಿ ಇದ್ದಕ್ಕಿದ್ದಂತೆಯೇ ಆದರೂ ಸೊಗಸಾಗಿ ಸುಂದರವಾಗಿ ಸುಮನೋಹರವಾಗಿ ಒಡಮೂಡಿಸಕೊಡಬಲ್ಲ ಛಾಯಾಚಿತ್ರಕಾರನ (photographer) ಕಲಾಭಿಜ್ಞೆಯೂ ನೈಪುಣ್ಯವಿಶೇಷವೂ ಕಂಡು ಬರುತ್ತದೆ " ಎಂದು ಅಭಿಪ್ರಾಯ ಪಟ್ಟಿರುವರು.

ಇಂದಿನವರಾದ ನಮಗೆ ಚುರಮುರಿ ಮತ್ತು ಬಸವಪ್ಪ ಶಾಸ್ತ್ರಿಗಳು ವಂದ್ಯರು, ಕನ್ನಡ ರಂಗಭೂಮಿಯ ದೀಪ ಸ್ತಂಭರಾಗಿದ್ದಾರೆ. ಆದರೆ ಚುರಮುರಿ ಅವರ ಶಾಕುಂತಲ ನಾಟಕಕ್ಕೆ ಇರುವ ಮುದವೀಡು ಅವರ ಮುನ್ನುಡಿಯನ್ನು ಅನುಲಕ್ಷಿಸಿ "ಚುರಮುರಿಯವರ ಗ್ರಂಥ ಲೋಕೋತ್ತರ ವಾದುದೆಂದೂ ಬಸವಪ್ಪನವರ ಗ್ರಂಥಕ್ಕಿಂತಲೂ ಹಿಂದಿನದಷ್ಟೇ ಅಲ್ಲದೇ ಶ್ರೇಷ್ಠವಾದುದೆಂದೂ ಶ್ರೀ ಮುದವೀಡು ಕೃಷ್ಣರಾಯರು ಅದರ ಮುನ್ನುಡಿಯಲ್ಲಿ ಹೇಳಿರುವರಾದರೂ ಅದು ಅರ್ಥವಿಲ್ಲದ ಪ್ರಾಂತಾಭಿಮಾನವೆನ್ನಬೇಕು. ಮೊದಲು ಯಾರಾದರೂ ಭಾಷಾಂತರಿಸಿರಲಿ ಎಲ್ಲಿಯ ಬಸವಪ್ಪ ಶಾಸ್ತ್ರಿಗಳು ಎಲ್ಲಿಯ ಚುರಮುರಿ ಅಜಗಜಾಂತರ

ಅಷ್ಟೆ. ಪಬ್ಲಿಕ್ ವರ್ಕ್ಸ ಡಿಪಾರ್ಟಮೆಂಟನಂತಹ ನೀರಸ ಕೆಲಸದಲ್ಲಿ ತೊಡಗಿದ್ದವರು ಪುಣೆಯ (ಇಂಜನೀಯರಿಂಗ ಕಾಲೇಜು ವಿದ್ಯಾರ್ಥಿ) ಪಂಡಿತರಿದ್ದಿದ್ದಿಲ್ಲ. ಪದವೀಧರರಿದ್ದಿದ್ದಿಲ್ಲ. ಭಾಷಾ ಶಾಸ್ತ್ರದಲ್ಲಿ ಪ್ರಾವಿಣ್ಯ ಪಡೆದವರಿದ್ದಿದ್ದಿಲ್ಲ. ಅವರ ಪ್ರಯತ್ನ ವೇನೋ ಸ್ತುತ್ಯಾರ್ಹ. ಆದರೆ ಮುದವೀಡು ಕೃಷ್ಣರಾಯರು ಅವರ ಬಗ್ಗೆ ಮಾಡಿರುವ ಪ್ರಶಂಸೆಯ ಮಟ್ಟಿಗೆ ಅತಿಶಯೋಕ್ತಿಯನ್ನದೇ ಗತ್ಯಂತರವಿಲ್ಲ. (ಕನ್ನಡ ನಾಟಕ ಮಹಾಪ್ರಬಂಧ ತ.ಸು. ಶಾಮರಾಯರು; ಪುಟ - ೧೦೫)

ಚುರಮುರಿಯವರ ಅನುವಾದ ರಂಗಭೂಮಿಗೆಂಬುದು ಸ್ಪಷ್ಟವಿದ್ದರೂ,ಶಾಸ್ತ್ರಿಗಳ ಕೃತಿ ಕೂಡ ರಂಗಭೂಮಿಗಾಗಿ ರಾಜರ ಆದೇಶಾನುಸಾರ ಜನುಮಪಡೆದುದು ಎಂಬುದು ಗೊತ್ತಿದ್ದರೂ.ಈರ್ವರ ಬಾಷಾಂತರ ಕೌಶಲ್ಯ ವನ್ನು ಈ ಮೊದಲೇ ಉದಾಹರಣೆ ಸಹಿತ ತೋರಿಸಿದೆ.

" ಕೈ ಹುಣ್ಣಿಗೆ ಕನ್ನಡಿ ಬೇಡ".೧. ನಾಟಕದವಲ್ಲಿಯ ಸಂಭಾಷಣೆ ಮನುಷ್ಯ ಸಹಜ ಮಾತುಗಾರಿಕೆಗೆ ಹೊಂದುವಂತೆ ಅಳವಡಿಸುವದು ಅವಶ್ಯ. ೨. ಪಾತ್ರಗಳು ನಾವು ನಿಜ ಜೀವನದಲ್ಲಿ ನೋಡಿದವರಂತೆ ಇರಲುಬೇಕು, ಓಡಾಡ ಬೇಕು. ೩. ಇದರಿಂದ ನಾಟಕಕಾರನಿಗೂ ಪ್ರೇಕ್ಷಕನಿಗೂ ಇರುವ ಕೃತಕ ಅಂತರ ದೂರಾಗಿ ಆತ್ಮೀಯವಾದ ಸಂಪರ್ಕ ಉಂಟಾಗುವದು ಅವಶ್ಯ.

ಚುರಮುರಿಯವರ ಶಾಕುಂತಲ ನಾಟಕದಲ್ಲಿ ನಮಗೆ ಮನುಷ್ಯ ಸಹಜ ಮಾತುಗಾರಿಕೆ ಕಂಡು ಬರುವದು. ಬಸವಪ್ಪಶಾಸ್ತ್ರಿಗಳು ತಮ್ಮ ಶಾಕುಂತಲ ನಾಟಕದಲ್ಲಿ ಪಂಡಿತವರ್ಗಕ್ಕೆ ತಿಳಿಯುವಂತೆ ಮಾತುಗಾರಿಕೆ ಬಳಸಿದ್ದು ಅಲ್ಲಗಳೆಯಲು ಸಾಧ್ಯವಿಲ್ಲ. ಎರಡನೆಯದಾಗಿ ಚುರಮುರಿ ಅವರು ಧಾರವಾಡದವರು. ಇಲ್ಲಿ ಶಾಲ್ಮಲಾ ನದಿ ಇದ್ದುದು ಅರಿತ ಸಂಗತಿ. ಈ ನದಿಯ ಒಂದು ದಂಡೆಗೆ ಕಣ್ವರ ಆಶ್ರಮ , ಅರಣ್ಯ. ಇನ್ನೊಂದು ದಂಡೆಗೆ ದುಷ್ಯಂತ ರಾಜನ ಪಟ್ಟಣ, ರಾಜನ ಅರಮನೆ ಇದ್ದ ಕಲ್ಪನೆಯಲ್ಲಿ ನಿಜಜೀವನ ಚಿತ್ರ ಮತ್ತು ಮಾತನಾಡುವ ರೀವಿಯನ್ನು ಬಳಸಿದ್ದಾರೆ. ಸರ್ವದಮನನ ಮಾತುಗಾರಿಕೆ ಆತನ ವಯೋಮಾನಕ್ಕೆ ತಕ್ಕಂತೆ ತೊದಲು ಮಾತುಗಳನ್ನು ಆಡುವನು. ಇದರಿಂದ ಆ ಪಾತ್ರ ನಮ್ಮೆದುರು ಓಡಾಡುವದು. ಇದು ನಾಟಕಕಾರಿಗೆ ದೊರೆತ ಒಂದು ಬಹು ದೊಡ್ಡ ಸಾಧನೆ. ಈ ರೀತಿ ಸಂಭಾಷಣೆಗಳನ್ನು (ವಿದೂಷಕ, ಮೀನಗಾರ, ಕೊತವಾಲ) ನಾಟಕದಲ್ಲಿ ಬಳಸುವದನ್ನು ಪ್ರಾರಂಭಿಸಿದ ಮೊಟ್ಟ ಮೊದಲಿನ ಶ್ರೇಯ ಚುರಮುರಿ ಅವರಿಗೆ ಸಲ್ಲುವದು. ಈ ಪರಂಪರೆಯ ಆದ್ಯತನ ಅವರದಾಗಿದ್ದು ನಂತರದ ನಾಟಕಕಾರಿರಗೆ ಅವರು ಮಾದರಿಯಾಗಿದ್ದಾರೆ. ಅಂತೆಯೇ ಆದ್ಯರಂಗಾಚಾರ್ಯರು"ಸರಳವಾದ ಗದ್ಯ ಮತ್ತು ಹಾಡುಗಳಿಂದ ಕೂಡಿದ ಅದ್ಭುತ ಭಾಷಾಂತರ" (ಭಾರತೀಯ ರಂಗಭೂಮಿ ಪುಟ ೧೪೪) ಎಂದು ಕೊಂಡಾಡಿದ್ದು ಕಡಿಮೆ ಪ್ರಶಂಸೆ ಅಲ್ಲ. ಬಸವಪ್ಪ ಶಾಸ್ತ್ರಿ ತಮ್ಮ ಶಾಕುಂತಲ ನಾಟಕದಲ್ಲಿ ಚಿತ್ರಿಸಿದ ಬಾಲಕ, ವಿದೂಷಕ, ಕಾವಲುಗಾರರು, ನಗರಾಧಿಕಾರಿಯ ಭಾವನು ಪುರುಷ (ಮೀನಗಾರ) ಈ ಪಾತ್ರಗಳು

ಪಂಡಿತ ಪ್ರಚುರ ವ್ಯಾಕರಣ ಶುದ್ಧ ಮಾತನಾಡುವದು ಕೃತಕವಾಗಿದೆ. ಇದು ಬಸವಪ್ಪ ಶಾಸ್ತ್ರಿಗಳಿಗೆ ಒದಗಿದ ಬಹುದೊಡ್ಡ ಸೋಲು. ಇದನ್ನು ಹಿರಿಯರಾದ ತ.ಸು. ಶಾಮರಾಯರು ಗಮನಕ್ಕೆ ತಂದಿಲ್ಲವಲ್ಲ. ಚುರುಮರಿಯವರು ಪಬ್ಲಿಕ್ ವರ್ಕ್ಸ ಡಿಪಾರ್ಟಮೆಂಟಿನಂತಹ ನೀರಸ ಕೆಲಸದಲ್ಲಿ ತೊಡಗಿದ್ದವನು - ಎಂಬ ಆಕ್ಷೇಪಕ್ಕೆ ಕಲ್ಲು ಮಣ್ಣುಗಳೊಡನೆ ಸಂಬಂಧ ವಿದ್ದ ಶೇಷಗಿರಿರಾಯರು ಅದರಲ್ಲಿಯೂ ರಸಿಕತೆಯನ್ನು ಕಂಡ ಪ್ರತಿಭಾವಂತರು. ಚುರಮುರಿಯವರಂತೆ ವಿಶ್ವೇಶ್ವರಯ್ಯಾ ಮೋಕ್ಷಗುಂಡಂ ಪುಣೆಯ ಇಂಜನೀಯರ ಕಾಲೇಜಿನ ವಿದ್ಯಾರ್ಥಿ, ಅವರದೂ ಕಲ್ಲು ಮಣ್ಣುಗಳೊಡನೆ ಸಂಬಂಧವಿದ್ದ ರುಕ್ಷ ನೀರಸ ಕೆಲಸ ಎಂಬ ಸತ್ಯ ಸಂಗತಿ ತ.ಸು. ಶಾಮರಾಯರಂತಹ ನಾಟಕ ಇತಿಹಾಸ ಬಲ್ಲಪಂಡಿತರು ಮರೆತಿರುವರು.

ಮುದವೀಡುಕೃಷ್ಣರಾಯರು ಚುರಮುರಿ ಅವರ ಶಾಕುಂತಲ ನಾಟಕದ ನಾಲ್ಕನೆಯ ಆವೃತ್ತಿಯಲ್ಲಿ ಹೇಳಿದ ವಿಚಾರಗಳು ತಮಗೆ ಸಂದರ್ಭಕ್ಕೆ ಯೋಗ್ಯವಾಗುವಂತೆ ತ.ಸು. ಶಾಮರಾಯರು ಬಳಸಿಕೊಂಡು " ಚುರಮುರಿ ಅವರು ಪಂಡಿತರಿದ್ದಿದ್ದಿಲ್ಲ ಪದವಿ ಧರರಿದ್ದಿದ್ದಿಲ್ಲ, ಭಾಷಾ ಶಾಸ್ತ್ರ ಪ್ರಾವೀಣ್ಯ ಪಡೆದವರಿದ್ದಿದ್ದಿಲ್ಲ." ಎಂದಿದ್ದಾರೆ.ಎಲ್.ಸಿ.ಇ. ಎಂಬುದು ಆಗಿನಕಾಲ ಪುಣೆ ಇಂಜನೀಯರ ಕಾಲೇಜ ವಿದ್ಯಾರ್ಥಿಗಳಿಗೆ ದೊರೆಯುವ ಒಂದು ಅಧಿಕಾರ ಇಲ್ಲವೇ ಪದವಿ ಎನ್ನಬಹುದು. ಇದನ್ನು ಚುರಮುರಿಯವರಂತೆ ವಿಶ್ವೇಶ್ವರಯ್ಯ ನವರೂ ಪಡೆದಿದ್ದರು. ಪಂಡಿತರಿದ್ದಿದ್ದಿಲ್ಲ. ಎಂಬುದನ್ನು ಅಲ್ಲಗಳೆಯಲು ಅವರು ಮಡಿದಬಳಿಕ ಅವರ ಪುಸ್ತಕ ಭಾಂಡಾರದ ಬೆಲೆ ೧೮೮೨ ರಲ್ಲಿ ೩೦೦೦ (ಮೂರು ಸಾವಿರ) ರೂಪಾಯಿದಾಗಿತ್ತು. ಎಂಬುದನ್ನು ಗಮನದಲ್ಲಿಡುವದಾಗಿದೆ.

"ಚುರಮುರಿಯವರು ಭಾಷಾ ಶಾಸ್ತ್ರದಲ್ಲಿ ಪ್ರಾವಿಣ್ಯ ಪಡೆದವರಿದ್ದಿದ್ದಿಲ್ಲ- ಚುರಮುರಿಯವರ ಶಾಕುಂತಲ ನಾಟಕ ನಾಲ್ಕನೆಯ ಆವೃತ್ತಿ ೧೯೩೪ ರಲ್ಲಿ ಮುದವೀಡು ಅವರ ಮುನ್ನುಡಿಯೊಡನೆ ಹೊರ ಬಂದಿತು. ಡಾ.. ಎಚ್ ಕೆ. ರಂಗನಾಥರ Karnataka Theatre 1960 ರಲ್ಲಿ ಬೆಳಕು ಕಂಡಿತು. ತ.ಸು. ಶಾಮರಾಯರು ಕನ್ನಡ ನಾಟಕ ಮಹಾಪ್ರಬಂಧ ಪ್ರಕಟಿಸಿದ್ದು ೧೯೬೨ ರಲ್ಲಿ. ಡಾ. ಶ್ರೀ ನಿವಾಸ ಹಾವನೂರರ 'ಹೊಸಗನ್ನಡ ಅರುಣೋದಯ' ಮುದ್ರಣವಾದುದು ೧೯೭೪ ರಲ್ಲಿ." ಕೆಲವೇ ಮಟ್ಟಿಗೆ ಚುರಮುರಿಯವರ ಪಾಂಡಿತ್ಯ ತಿಳಿದು ಬಂದುದನ್ನು ತಮ್ಮ ಪಿ.ಎಚ್.ಡಿ. ಪ್ರಬಂಧದಲ್ಲಿ ಹಾವನೂರ ಉಲ್ಲೇಖಿಸಿದ್ದಾರೆ. ಪ್ರಸ್ತುತ ಲೇಖಕನಿಗೆ ೧೯೮೦" ರಲ್ಲಿ. ಕೆಲವು ಮಟ್ಟಿಗೆ ಅವರ ಲೇಖನಗಳು ದೊರೆತವು.ಕಸ್ತೂರಿ ೧೯೮೩"ಆಗಸ್ಟ ತಿಂಗಳ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದವು.

ತತ್ಕಾಲೀನ ಸಂಸ್ಕೃತ ಭಾಷಾ ಪಂಡಿತರಾದ ಬೇನ್ಫಿ ಮತ್ತು ಮ್ಯಾಕ್ಸ ಮುಲ್ಲರರ ವಿಚಾರಗಳನ್ನು ಚುರಮುರಿ ಅವರು ತಮ್ಮಲೇಖನದಲ್ಲಿ ಖಂಡಿಸಿದ್ದು ನೋಡಲು ದೊರೆಯುವದು. ಈ ಸಂಶೋಧನೆ ಕೈಕೊಂಡ ಸಮಯ ಡಾ. ಭೀಮರಾವ ಚಿಟಗುಪ್ಪಿ ಮತ್ತು ಡಾ. ಶ್ರೀನಿವಾಸ ಹಾವನೂರ ಸಾಕಷ್ಟು ಪ್ರೋತ್ಸಾಹಿಸಿದರು

ನನ್ನ ಮೇಲೆ ಉಲ್ಲೇಖಿಸಿದ ವಿಚಾರ ಹೇಗಿದ್ದರೂ ರಂಗಪ್ರದರ್ಶನ ದೃಷ್ಟಿಯಿಂದ ಬಸವಪ್ಪ ಶಾಸ್ತ್ರಿಗಳ ಕೃತಿ ಮತ್ತು ಅದು ಅರಮನೆಯ ರಂಗಕ್ಕೆ ಬಂದ ಅವರ ಮತ್ತು ಅನ್ಯಪಂಡಿತ ಮಾನ್ಯ ಕೃತಿಗಳು ಸಾಮಾನ್ಯ ಪ್ರೇಕ್ಷಕರಿಗೆ ಅವೆಷ್ಟು ಸಪ್ಪೆಯಾಗಿದ್ದವೆಂಬುದು ಇತ್ತೀಚೆಗೆ ಬೆಳಕಿಗೆ ಬಂದ ಸತ್ಯ ಸಂಗತಿಯಿಂದ ತಿಳಿದವರು ನಿರ್ಣಯಿಸಲು ಅನುವಾಗುವುದು. ಸ್ವತಃ ಚಾಮರಾಜರ ಕೃಪಾಶ್ರಯದಲ್ಲಿ ಬೆಳೆದ ಮಂಡ್ಯದ ರಂಗಾಚಾರ್ಯರರೆಂಬ ನಾಟ್ಯ ಕಲಾ ಕುಶಲರು ಅರಮನೆಯ ರಂಗದಿಂದ ಹೊರಬಂದು "ರಾಜಧಾನಿ ನಾಟಕಮಂಡಳಿ" ಎಂಬ ಪ್ರಿಯ ಮೇಳವನ್ನು ಕಟ್ಟಿ ಅರಮನೆ ಕಂಪನಿಯೊಂದಿಗೆ ಹುರುಡು ಕಟ್ಟಿ ಸೆಣಸಾಡಿದವರು. ಅದೇ ಊರಲ್ಲಿ ಅದೇ ರಾತ್ರಿ ಇಕ್ಕೆಲಗಳಲ್ಲಿ ನಾಟಕಗಳು ನಡೆಯತೊಡಗಿದವು. ಆಗ ಮಹಾರಾಜರ ಕೋಪಕ್ಕೆ ಪಾತ್ರರಾಗಬಹುದೆಂಬ ಭೀತಿಯಿಂದ ಸರಕಾರಿ ಉದ್ಯೋಗಿಗಳು ನಿಸ್ಸಾರವಾದ ಅರಮನೆ ಪ್ರದರ್ಶನಗಳಿಗೆ ಹೋಗುತ್ತಿದ್ದರು. ಅರಮನೆ ನಾಟಕ ಶಾಲಾಧ್ಯಕ್ಷ ಅಂಬಿಲ್ ನರಸಿಂಹಯ್ಯಂಗಾರರು ನಾಟಕ ರಂಗವನ್ನು ಬಿಟ್ಟೊಡನೆಯೇ ಅವರೆಲ್ಲರೂ ರಂಗಾಚಾರ್ಯರ ನಾಟಕ ಮಂದಿರಕ್ಕೆ ಬಿದ್ದೋಡುತ್ತಿದ್ದರಂತೆ. ರಂಗಾಚಾರ್ಯರ ನಾಟಕ ಇತರ ಕೆಲವು ನಾಟಕಗಳೊಂದಿಗೆ ಎಸ್. ಜಿ. ನರಸಿಂಹಾಚಾರ್ಯ ಕೃತ್ಯ ಶಾಕುಂತಲವನ್ನೂ ಪ್ರದರ್ಶಿಸುತ್ತಿದ್ದರಂತೆ (ಬಣ್ಣ ಬೆಳಕು - ಡಾ. ಎಚ್. ಕೆ. ರಂಗನಾಥ ಪುಟ ೬ - ೭) ಇದಕ್ಕೂ ಹೆಚ್ಚಿನ ಊಹಾಪೋಹ ಅನಗತ್ಯ. ನನಗೆ ಸಂಸ್ಕೃತಿ ಮತ್ತು ಕನ್ನಡ ಕಲಿಸುತ್ತಿದ್ದ ಗುರುಗಳು ಕೆಲವು ಗಾದೆ ಮಾತು ಹೇಳುತ್ತಿದ್ದರು. " ೧. ಹನುಮನ ಎದುರಿಗೆ ಹಾರಲೇ ಗುಬ್ಬಿ " " ೨. ಪ್ರಾಸಾದಶ್ಯ ಶಿಖರೆ ಕಾಕೋನ ಗರುಡಾಯತೆ " ಅದನ್ನು ಇಲ್ಲಿ ಉಲ್ಲೇಖಿಸಿರುವೆ.

ಅನ್ಯ ಅಭಿಪ್ರಾಯಗಳು ಯಾವದೇ ಬಗೆಯದಾಗಿರಲಿ - ಪ್ರಾಸ್ತಾವಿಕ ಪದ್ಯದಲ್ಲಿ ಸ್ವತ ಚುರಮುರಿ ಅವರೆಗೆ ಬೇರ ಬೇರೆ ಭಾಷೆಗಳಲ್ಲಿ ಪ್ರಕಟಗೊಂಡ ಕಾಳಿದಾಸನ ಈ ಅಮರ ಕೃತಿ ಶಾಕುಂತಲದ ಅನುವಾದಗಳೊಂದಿಗೆ "ಸವಿಯೊಳು ಹಚ್ಚೆ ನೋಡಲೊರೆ ಕನ್ನಡಿ ನೆನ್ನದು ಹೆಚ್ಚದಿರ್ದೋಡೀ ಕವಿತೆಯ ಗಂಡು ಮೆಟ್ಟು ಕರನಾಟಕ ಬಿಟ್ಟು ತೆರಳ್ದು ಪೋಗುವೆಂ." ಎಂದು ಹೇಳಿ, ಮರುಕ್ಷಣ ಮೂಲದ ಘನತೆ, ಅದನ್ನು ರಚಿಸಿದ ಕವಿಯ ಘನತೆ ಅವೆಲ್ಲಿ, ತಾವೆಲ್ಲಿ ಎಂಬುದರ ಅರಿವು ಉಂಟಾಗಿ ಬಡಕವಿಗೆ (ತಮಗೆ) ಈ ಕುರೂಪಿ ಕನ್ಯೆ ಪುಟ್ಟಿರುವಳು ಜಾಣರ ಅಡಿದಾಸಿಯಾಗಿ ಬಾಳೆಂದು ಅವಳನ್ನು ಕಳಿಸಿದ್ದೇನೆ, ಅವಳ ಯೋಗ್ಯತೆ ಅಷ್ಟೇನೆ. ಇದಕ್ಕೆ ತಪ್ಪಿ ನಡೆದರೆ ಡೊಂಬರದಾಸರೊಳ್ ಸಾಯನಡೆ ಎಂದು ಅವಳನ್ನು ಮರಳಿ ಅಟ್ಟಬಿಡಿ ತೊಂದರೆ ಬೇಡವೆಂದು ಬೇಡಿಕೊಂಡಿರುವರು.

ಹೊಸಗನ್ನಡ ತಿಳಿಮಾತಿನ ಸಾಗ್ರಸಂಗೀತ ಅಭಿಜಾತ ನಾಟಕಗಳ ಆದ್ಯ ಪ್ರವರ್ತಕರು ಚುರಮುರಿ ಶೇಷಗಿರಾಯರು. ಅವರ ನಾಟಕದ ಪ್ರಭಾವದಿಂದ ಹೊರಬಂದ ಕಿರ್ಲೋಸ್ಕರ ಶಾಕುಂತಲ ನಾಟಕ ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ಕನ್ನಡ ಮರಾಠಿ ರಂಗಭೂಮಿಯನ್ನು ಆಳಿತು. ಕಿರ್ಲೋಸ್ಕರರ ಶಾಕುಂತಲ ೩೧.೧೦.೧೮೮೦ ರಂದು ಪುಣೆಯ ಆನಂದೋದ್ಭವ ನಾಟ್ಯ

ಮಂದಿರದಲ್ಲಿ ಪ್ರಯೋಗ ವಾದಂದಿನಿಂದ ವಿಕ್ರಮ ಸ್ಥಾಪಿಸಿತು. ಮರಾಠಿ ಸಾಹಿತಿ ವಿಷ್ಣುಶಾಸ್ತ್ರಿ ಚಿಪಳೋಣಕರ ಶಾಕುಂತಲ ನಾಟಕ ಮರಾಠಿ ರಂಗಭೂಮಿಗೆ ಹೊಸ ತಿರುವು ಕೊಟ್ಟಿರುವದೆಂದು ಮನವಾರೆ ಕೊಂಡಾಡಿದರು. ಆಚಾರ್ಯ ಪ್ರಲ್ಹಾದ ಕೇಶವ ಅತ್ರೆ , "ಮರಾಠಿ ಅಭಿಜಾತ ಜಾನಪದ ನಾಟಕ ಆಟಗಳ ಮೂಲ ಬೇರುಗಳು ಉತ್ತರ ಕರ್ನಾಟಕದ ಮಣ್ಣಿನಲ್ಲಿದೆ " ಎಂದು ೨೮.೧೨.೧೯೪೧ ರಲ್ಲಿಯ ಮರಾಠಿ ನಾಟ್ಯ ಸಮ್ಮೇಲನದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದಾರೆ.

ಇನ್ನೊಂದು ಅಭಿಮಾನದ ಸಂಗತಿ: ಚುರಮುರಿಯವರ ಶಾಕುಂತಲ ನಾಟ್ಯಪದ ಕನ್ನಡ ಶ್ರೀ ಕೃಷ್ಣ ಪಾರಿಜಾತ, ಶೃಂಗಾರ ಗೀತೆ, ಜಾನಪದ ಪದಗಳನ್ನು ಮರಾಠಿ ಸಂಗೀತ ನಾಟಕಗಳಲ್ಲಿಯ ಪದಗಳಿಗೆ ದಾಟಿ ಮಟ್ಟುಗಳಾಗಿ ಬೆಳೆಸಿದವರಲ್ಲಿ ಮೊದಲಿಗರು ಅಣ್ಣಾ ಸಾಹೇಬ ಕಿರ್ಲೋಸ್ಕರ ಗೋವಿಂದ. ಬಲ್ಲಾಲ, ದೇವಲ ಕೃಷ್ಣಾಜಿ. ಪ್ರಭಾಕರ ಖಾಡಿಲಕರ ಮತ್ತು ಶ್ರೀಪಾದ ಕೃಷ್ಣ ಕೊಲ್ಹಟಕರ. ಆ ಬಳಿಕಿನ ಮರಾಠಿ ನಾಟಕಕಾರರು ತಮ್ಮ ತಮ್ಮ ನಾಟಕಗಳಲ್ಲಿ ಇದೇ ಪರಿಪಾಠವನ್ನು ಅವಲಂಬಿಸಿದರು. ಅದರಲ್ಲಿ ಮಹತ್ವದ ಕೆಲವು ನಾಟಕಗಳ ಹೆಸರನ್ನು ಇಲ್ಲಿ ಹೇಳಬಯಸುವೆ. - ೧. ತುಕಾರಾಂ ನಾಟಕ . ೨. ಕುಂಜ ವಿಹಾರಿ ೩. ಸೊನ್ಯಾಚಾ ಕಳಸ ೪. ಹಾಚಮುಲಾಚಾಬಾಪ, ೫. ಸತ್ತೇಚೆ ಗುಲಾಮ ೬. ಜಾಗತೀ ಜ್ಯೋತ ೭. ರಾಕ್ಷಸೀಮಹತ್ವಾಕಾಂಕ್ಷಾ . ೮. ರಣದುಂದುಭಿ. ೯. ಆತ್ಮ ತೇಜ. ೧೦. ಪುಣ್ಯ ಪ್ರಭಾವ. ೧೧. ಏಕಚೆ ಪಾಲಾ. ೧೨. ಶಹಾ ಶಿವಾಜಿ. ೧೩.ಆಶಾನಿರಾಶಾ. ೧೪. ಸನ್ಯಸ್ಥಖಡ. ೧೫. ಪಟವರ್ಧನ ೧೬. ಪಂತಾಟಿಸೂನ. ೧೭. ಕನ್ಯೋಪಾತ್ರಾ. ೧೮. ಲಗ್ನಾಚಿ ಬೇಡಿ. ೧೯. ಕುಲವಧು. ೨೦. ವಂದೆ ಭಾರತಂ. ಇತ್ಯಾದಿ ಇತ್ಯಾದಿ..ಇದೇನು ಕಡಿಮೆ ಸಾಧನೆಯೇ ?

ಸಿರಿವಂತ ಸಂಸ್ಥಾನಗಳ ಅಧಿಪತಿಗಳ ಪೋಷಣೆಯಲ್ಲಿ ಓರ್ವಕವಿ ತನ್ನ ಮಾತೃ ಭಾಷೆಯಲ್ಲಿ ನಾಟಕವನ್ನು ರಚಿಸುವನು. ಅದು ರಾಜರ ಆಶೀರ್ವಾದದಿಂದ ರಂಗಭೂಮಿಗೆ ಬರುವದು. ಅಧಿಪತಿಗಳ ಹಿಂದು ಮುಂದೆ ಅವರ ಕೃಪಾ ಪೋಷಿತರಾಗಲು ವಿದ್ವಾಂಸರ ತಂಡವಿರುವದು. ಒಬ್ಬ ಇನ್ನೊಬ್ಬನನ್ನು ಸ್ತುತಿಸುವದು ಅರಿತ ಸಂಗತಿ. "ನಿರಸ್ತ ಪಾದೇ ಪಿ ದೇಶೋ ಏರಂಡೋಪಿ ದ್ರುಮಾಯತೆ. "

ಪ್ರಸ್ತುತ ಲೇಖಕ ಸಂಪಾದಿಸಿದ ಚುರುಮರಿಯವರ ' ಶಾಕುಂತಲ ನಾಟಕ ' ಮುಂಬೈ ವಿ. ವಿ. ವತಿಯಿಂದ ೧೯೯೫ ರಲ್ಲಿ ಪ್ರಕಟಗೊಂಡಿತು. ಪುಸ್ತಕ ವಿಮರ್ಶೆಯ ಶೀರ್ಷಿಕೆಗಳು, ಮತ್ತು ಅಂಶಗಳು ಈ ರೀತಿ ಇವೆ.

೧. ಉದಯವಾಣಿ ೨೯.೪. ೯೫. ಬಸವಪ್ಪ ಶಾಸ್ತ್ರಿಗಳ " ಕರ್ನಾಟಕ ಶಾಕುಂತಲ ನಾಟಕಂ." ಗಿಂತ (೧೮೮೩) ಹದಿಮೂರು ವರುಷ ಮೊದಲು ಪ್ರಕಟವಾದ ಚುರುಮುರಿಯವರ "ಶಾಕುಂತಲ ನಾಟಕ" ಇಂದಿಗೂ ಅಧ್ಯಯನ ಯೋಗ್ಯವಾದ ಸತ್ವ ಪೂರ್ಣ ಕೃತಿ ಯಾಗಿದೆ. ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಈ ಪ್ರಕಟನೆ ಸ್ವಾಗತಾರ್ಹ "

೨ ರಂಗತೋರಣ - ಓದಿದ ನಾಟಕ - ನಾಟಕ ಕೃತಿಗಳ ಸಮೀಕ್ಷೆ ೧೯೬೫ ಶ್ರೀ ಶೇಖರ, ಲದವಾ ಗದಗ. ಕನ್ನಡ ಮರಾಠಿ ರಂಗ ಸಂಗೀತ ಬಗೆಗೆ ಸಂಪಾದಕರ ಲೇಖನ ಉಪಯುಕ್ತವಾಗಿದೆ. ಕೊನೆಗೆ ಅನುಬಂಧವಾಗಿ ಸೇರಿಸಲಾದ ಚುರಮುರಿಯವರ ವ್ಯಕ್ತಿತ್ವ ಹಾಗೂ ಅವರ ಕೃತಿಯ ಕಿಂಚಿತ್ ಪರಿಚಯವನ್ನು ಮುದವೀಡು ಕೃಷ್ಣರಾವ್ ಅವರು ನಾಲ್ಕನೆಯ ಆವೃತ್ತಿಗೆ ಬರೆದ ಮುನ್ನುಡಿ ಕೂಡ ಸಹಾಯಕಾರಿಯಾಗಿದೆ.

೩. ಕನ್ನಡ ಪ್ರಭಾ ೨೪.೯. ೧೯೬೫. " ಪ್ರತಿ ಸೃಷ್ಟಿಯ ಸೊಬಗು " ಪ್ರೊ ಮಲ್ಲೇಪುರಂ . ಜಿ. ವೆಂಕಟೇಶ. (ಕೇವಲ ಶೀರ್ಷಿಕೆ.)

೪. ಸಂಯುಕ್ತ ಕರ್ನಾಟಕ ೨೧. ೧. ೧೯೯೬. " ರಂಗಭಾಷೆಯ ಅಧ್ಯಯನಕ್ಕೆ ಉತ್ತಮ ದಾಖಲಾತಿ. " ಡಾ. ಬಿ.ಪಿ. ವೆಂಕಟಕೃಷ್ಣ (ಕೇವಲ ಶೀರ್ಷಿಕೆ)

೫. ಪ್ರಜಾವಾಣಿ ೨೧. ೪. ೧೯೯೬ ಆಕರ್ಷಕ ಅನುವಾದ ಡಾ. ಎಂ.ಕೆ. ಶ್ರೀಧರ ಸಾರಾಂಶ " ಆಯಾ ಭಾಷೆಗಳ ಸಂವಹನ ಸಾಮರ್ಥ್ಯ ನುಡಿಗಟ್ಟುಗಳ ಬಳಕೆ ಸಾಮಾಜಿಕ, ಸಾಂಸ್ಕೃತಿಕ ಪರಿಸರಗಳ ಹಿನ್ನೆಲೆ ಮುಂತಾದ್ದನ್ನು ತಂದು ಕೊಡುತ್ತದೆ. ಚುರಮುರಿಯವರ ಭಾಷಾಂತರ ಕೃತಿಯಲ್ಲಿ ಅಂತಹ ಅಸಾಧಾರಣ ಶಕ್ತಿ ಇದ್ದು ಆ ಕೃತಿಯನ್ನು ಮತ್ತೊಮ್ಮೆ ಕನ್ನಡ ಜನತೆಗೆ ನೀಡಿ ಹೊಸ ಸಂಶೋಧನೆಗೆ ಬೆಳಕು ಚೆಲ್ಲಿರುವ ಮುಂಬೈ ವಿ. ವಿ. ಕನ್ನಡ ವಿಭಾಗದವರು ಮೆಚ್ಚುಗೆಗೆ ಪಾತ್ರರು.

೬. ಸಂಶೋಧನ ವ್ಯಾಸಂಗ ಜೂನ ೧೯೯೬ ಶಾಕುಂತಲ ನಾಟಕವು ಡಾ. ಬಸವರಾಜ ಸಬರದ ಸಾರಾಂಶ " ಜಾನಪದ ಮೂಲದಿಂದ ಸ್ತ್ರೀವಾದಿ ನೆಲೆಯಿಂದ ಹೀಗೆ ಇನ್ನೂ ಅನೇಕ ಮುಗ್ಗುಲಗಳಿಂದ ಇಂತಹ ನಾಟಕವನ್ನು ಚರ್ಚೆಗೊಳಪಡಿಸಲು ಸಾಧ್ಯವಿದೆ. ಇಂತಹ ಸಾಧ್ಯತೆಗಳಿಗೆ ಈಗ ಡಾ. ತಾಳಜೆಯವರು ಡಾ. ಮುದ್ಗಲ್ ಅವರು ಈ ಕೃತಿ ಪ್ರಕಟನೆಯ ಮೂಲಕ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಇನ್ನೂ ಅನೇಕ ವಿದ್ವಾಂಸರು ಪತ್ರ ಬರೆದು ಅಭಿನಂದಿಸಿದ್ದಾರೆ. ಆಧುನಿಕ ಕನ್ನಡ ಪಂಡಿತರು ೧೮೭೦ ರಲ್ಲಿ ಪ್ರಕಟಗೊಂಡ ಈ ಕೃತಿಯನ್ನು ೧೯೬೫ ರಲ್ಲಿ ಯಾವ ಬಗೆಯಿಂದ ಕಂಡಿರುವರೆಂಬುದು ತಿಳಿಯುವದು. ಇಷ್ಟಾಗಿಯೂ " ಶಾಸ್ತ್ರಿಗಳ ಭಾಷಾಂತರ ಶಾಕುಂತಲದಲ್ಲಿ ಅದ್ಭುತವಾಗಿಕಂಡು ಬಂದಿದೆ. ಕಾಲಿದಾಸನ ಕಲಾಶಕ್ತಿ ಶಾಸ್ತ್ರಿಗಳ ಶಾಕುಂತಲದಲ್ಲಿ ಪರಿಣತಿಗೊಂಡಿದೆ. " ಎಂದು ಬಿ. ಶಿವಮೂರ್ತಿಗಳು ವ್ಯಕ್ತ ಪಡಿಸಿದ ವಿಚಾರಗಳು."ಕೂಪಮಂಡೂಕ"ವಿಚಾರದ್ದಾಗಿದೆ.

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೬ ದ ಪ್ರಧಾನ ಸಂಪಾದಕರಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಬಸವಪ್ಪ ಶಾಸ್ತ್ರಿಗಳನ್ನು ಕುರಿತು ಸಿ.ಜಿ. ಪುರುಷೋತ್ತಮ್ ಅವರ ಲೇಖ ಪ್ರಕಟಿಸಿದ್ದು ಚುರಮುರಿ ಅವರ ಬಗ್ಗೆ ಲೇಖವಿಲ್ಲ. ಇದಕ್ಕೆ ಅವರು ಕೊಡುವ ಕಾರಣ:"

ಆರನೆಯ ಸಂಪುಟವೇ ಈ ಯೋಜನೆಯ ಕೊನೆಯ ಸಂಪುಟವೆಂದೂ ಮುಂದಿನ ಸಂಪುಟಗಳಲ್ಲಿರುವ ವಿಷಯಗಳು ಈಗಾಗಲೇ ಬೇರೆ ಬೇರೆ ವಿಚಾರ ಸಂಕಿರಣದ ವಸ್ತುವಾಗಿ ಕೃತಿರೂಪದಲ್ಲಿ ಬಂದಿರುವದರಿಂದ ಒಂದು ರೀತಿಯ ಸಮಗ್ರತೆ ಈ ಸಂಪುಟಗಳಿಗೆ ಬಂದಿದೆ" ಎಂದುದು ಅವರು, " ಪಲಾಯನ ವಾದ"ದಲ್ಲಿ ಪ್ರವೀಣರಿದ್ದುದು ತಿಳಿದು ಬರುವದು.

ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿದ " ವಿಶ್ವಕೋಶ " ದಲ್ಲಿ ಚುರಮುರಿ ಅವರ ಉಲ್ಲೇಖವಿಲ್ಲ. ಚುರಮುರಿ ಶೇಷಗಿರಿರಾಯರ ಜೀವನ, ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮಹತ್ವದ್ದಾಗಿದ್ದು ಮೈಸೂರು ವಿಶ್ವವಿದ್ಯಾಲಯದ ವಿದ್ವಾಂಸರು ಮಹತ್ವದ ಉಲ್ಲೇಖ ಮಾಡದೇ ಇರುವದಕ್ಕೆ ಅವರು ಚುರಮುರಿ ಅವರ ಬಗ್ಗೆ " ಆತ - ತಾಯಿತನ " ತೋರಿಸಿದ್ದಾರೆಂಬುದು ಅಪ್ರಸ್ತುತವಾಗದು.

" ದೇಶಿ ಸಂಸ್ಥಾನಿಕರ ಲಹರಿಗನುವಾಗಿ ಫೌಜದಾರನು ನ್ಯಾಯಾಧೀಶನಾಗಿ, ನ್ಯಾಯಾಧೀಶನು ಹೆಡ್ಮಾಸ್ತರನಾಗಿ, ಸರಕಾರಿ ಡಾಕ್ಟರನು ದಿವಾನನಾಗಿ ನೇಮಕ ಹೊಂದುವದು ಶಕ್ಯ ಕೋಟಿಯದೇ. ಅದರಂತೆ ಬಸವಪ್ಪ ಶಾಸ್ತ್ರಿ ಅಭಿನವ ಕಾಳಿದಾಸ ಪಂಡಿತ ಬಸವಪ್ಪ ಶಾಸ್ತ್ರಿಗಳು ಆಗುವದು ಶಕ್ಯ ಕೋಟಿಯದೇ ಸರಿ.

ಡಾ. ಹಾವನೂರರು ತಮ್ಮ " ಹೊಸಗನ್ನಡ ಅರುಣೋದಯ"ದಲ್ಲಿ " ಸಹಜ, ಸಜೀವ ಸಂಭಾಷಣೆಗಳನ್ನು ನಾವು ಶೇಷಗಿರಿರಾಯನಲ್ಲಿ (ಚುರಮುರಿ) ಯಥೇಚ್ಛವಾಗಿ ಕಾಣುತ್ತೇವೆ. ಹೀಗೆ ಒಬ್ಬನ ದೃಷ್ಟಿಯು ಮೂಲದ ಸಾಹಿತ್ಯ ಗುಣದ ಕಡೆಗಿದ್ದರೆ ಇನ್ನೊಬ್ಬನದು ಅದರ ರಂಗ ಪ್ರಯೋಗದ ಕಡೆಗೆ ಹೆಚ್ಚಾಗಿ ವಾಲಿದ್ದಿತು.

(ಟಿಪ್ಪಣಿ - ಇದು ನಮಗೆ ಮಾನ್ಯವಿಲ್ಲ. ಈರ್ವರ ಕೃತಿ ರಂಗಭೂಮಿಗಾಗಿಯೇ ರಚಿಸಿದ ಕೃತಿ. ಇದನ್ನು ಈ ಮೊದಲೇ ಹೇಳಿದೆ.).... ಯೋಗ್ಯತೆಯಲ್ಲಿ ಒಂದು ಹೆಚ್ಚು, ಇನ್ನೊಂದು ಕಡಿಮೆ ಎಂದು ತೀರ್ಮಾನಿಸ ಹೋಗುವದೆಂದರೆ ಮಲ್ಲಿಗೆ ಮತ್ತು ಸಂಪಿಗೆ ಗಳಲ್ಲಿ ಯಾವುದು ಹೆಚ್ಚು ಚಂದ ಎಂದು ಕೇಳಿದಂತೆಯೇ ಸೈ " ಎಂದು ವಿಚಾರ ವ್ಯಕ್ತ ಪಡಿಸಿದ್ದಾರೆ. ಮಲ್ಲಿಗೆ ಸಂಪಿಗೆ ಹೂಗಳನ್ನು ಬಳಸಿ ಹೇಳಿದ್ದು " ಮುಂಡಿಗೆ"ಯಲ್ಲಿ ಬರುವದು. " ಮಲ್ಲಿಗೆ " ಶಾಂತದ ದ್ಯೋತಕವಿದ್ದು 'ಸಂಪಿಗೆ' ಉಗ್ರವೆಂದು ಭಾವಿಸಬೇಕು, ಹಾಗಾದಲ್ಲಿ ಚುರಮುರಿ ಅವರ ಶಾಕುಂತಲ = ಮಲ್ಲಿಗೆ ,ಬಸವಪ್ಪ ಶಾಸ್ತ್ರಿಗಳ ಶಾಕುಂತಲ = ಸಂಪಿಗೆ.,

ಈ ಲೇಖ ಬರೆಯಲು ನನಗೆ ಅನೇಕ ಗ್ರಂಥಪಾಲಕರು (ಕನ್ನಡ, ಮರಾಠಿ) ಮತ್ತು ಅವರ ಸಿಬ್ಬಂದಿ ನೆರವಾದರು. ಅನೇಕರು ದೂರವಾಣಿಯಿಂದ, ಪತ್ರ ಮುಖೇನ ಉತ್ತೇಜನ ನೀಡಿದರು. ಅವರೆಲ್ಲರಿಗೆ ಆಭಾರಿ. ಕನ್ನಡ ವಿಭಾಗ ಮುಖ್ಯಸ್ಥ ಮುಂಬೈ ವಿ.ವಿ. ಪ್ರೊ. ವಸಂತಕುಮಾರ ಮತ್ತು ಅವರ ಪತ್ನಿ ಡಾ. ಸೌ. ಮಣಿಮಾಲಿನಿ ಅನೇಕ ಬಗೆಯಿಂದ ಸಲಹೆ ನೀಡಿದರು. ಶ್ರೀ ಉಪಾಧ್ಯ ಲೆಕ್ಚರರ ಮುಂಬೈ ಕನ್ನಡ ವಿ. ವಿ.ವಿಭಾಗ ಮತ್ತು ಸಂಶೋಧಕ ವಿಧ್ಯಾರ್ಥಿಗಳು

ಕೊಟ್ಟ ಸಹಕಾರ ವರ್ಣಿಸಲು ಬಾರದು. ಇನ್ನೂ ಅನೇಕರು ಇರುವರು, ಅವರೆಲ್ಲರಿಗೆ ನಾನು ಆಭಾರಿ.

ಗ್ರಂಥ ಋಣ

೧. ಶಾಕುಂತಲ ನಾಟಕವು ೧೮೭೦. ಶೇ. ರಾ. ಚುರಮುರಿ.

೨. ಕರ್ಣಾಟಕ ಶಾಕುಂತಲ ನಾಟಕಂ. ೧೮೮೩. ಬಸವಪ್ಪ ಶಾಸ್ತ್ರಿ.

೩. ಅವಲೋಕನ ೧೯೮೫ ವಿಶ್ವ ಕನ್ನಡ ಸಮ್ಮೇಳನ, ಬೆಂಗಳೂರು.

೪, ಕರ್ನಾಟಕ ರಂಗಭೂಮಿ (Karnataka theatre) 1918 -1960. Dr. H. K. Ranganath.

೫. ಬಣ್ಣ ಬೆಳಕು - ಅದೇ.

೬. ಕನ್ನಡ ನಾಟಕ ಮಹಾಪ್ರಬಂಧ ತ.ಸು. ಶಾಮರಾವ ೧೯೬೨.

೭. ಹೊಸಗನ್ನಡದ ಅರುಣೋದಯ ಡಾ. ಶ್ರೀನಿವಾಸ ಹಾವನೂರ ೧೯೭೪.

೮. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂ. ೬. ಬೆಂಗಳೂರು ವಿ.ವಿ. ೧೯೯೧.

೯. ಕನ್ನಡ ವಿಶ್ವಕೋಶ - ಮೈಸೂರು. ವಿ.ವಿ.

೧೦. ಅರ್ಥಕೋಶ ಡಾ. ಶಿವರಾಮ ಕಾರಂತ. ೧೯೪೧.

೧೧. ಭಾರತೀಯ ರಂಗಭೂಮಿ.ಆದ್ಯರಂಗಾಚಾರ್ಯ ೧೯೭೧.

೧೨. ದಿ. ಡಾ. ಬೆಟಗೇರಿ ಕೃಷ್ಣಶರ್ಮರೊಡನೆ ಕೈ ಕೊಂಡ ಪತ್ರವ್ಯವಹಾರಗಳು. ೧೯೭೩.

೧೩. ಶ್ರೀಕೃಷ್ಣ ಪಾರಿಜಾತ ಸಂ. ಆರ್. ಜಿ. ಕುಲಕರ್ಣಿ. ೧೯೭೨.

೧೪. ಕಸ್ತೂರಿ. ೧೯೮೩. ಆಗಸ್ಟ ಸಂಚಿಕೆ.

೧೫. ಉತ್ತರ ಕರ್ನಾಟಕ ದ ಬಯಲಾಟಗಳು. ಡಾ.. ಬಸವರಾಜ ಮಲಶೆಟ್ಟಿ ೧೯೮೨.

೧೬. ಮನ್ವಂತರ ನಾಟಕಾಂಕ ೫. ೬ ಮನ್ವಂತರ ಪ್ರಕಾಶನ ಧಾರವಾಡ ೧೯೬೭.

೧೭. ನಡೆದು ಬಂದ ದಾರಿ.

೧೮. ಬುರುಡೆ ಬಿಂದಾಚಾರ್ಯರು (ಕಥೆ) ರಾವಬಹಾದ್ದೂರ.

ಮರಾಠಿ

೧೯. ತಾರತಮ್ಯ ಪ್ರೊ. ಸ.ಗಂ. ಮಾಲಸೆ.

೨೦. ರೂಪಡ್ಯಾಂಚಿರೊಪಕಥಾ. ಜ.ರಾ. ಅಜಗಾಂಕರ

೨೧. ವಿವಿಧ ಜ್ಞಾನ ವಿಸ್ತಾರ ಗ್ರಂಥ ಸೂಚಿ. ಪ್ರೊ. ಪುಷ್ಪಾ. ಭಾವೆ.

೨೨. ದಾತೆಗ್ರಂಥ ಸೂಚಿ.

೨೩. ಖರೇಚಿ ಪಾಣಿ - ಆಚಾರ್ಯ ಅತ್ರೆ.

೨೪. ಮರಾಠಿ ಶ್ರೀಕೃಷ್ಣ ಪಾರಿಜಾತ.

೨೫. Marathi theatre: Popular Prakashan 1961

ಅಬಾಧಿತ ' ಇಗ್ಗಪ್ಪ ಹೆಗ್ಗಡೇ - '

ನಾ. ದಾಮೋದರ ಶೆಟ್ಟಿ

(ಎಪ್ರಿಲ್ ೧೯೯೯ ರ ಸಂಚಿಕೆಯಲ್ಲಿ " ಕನ್ನಡದ ಪ್ರಥಮ ನಾಟಕ:ವಿವಾಹ " ಎಂಬ ಉದಯಕುಮಾರ ಹಬ್ಬು ಅವರ ಲೇಖನವನ್ನು ಗಮನಿಸಿ ಈ ಪತ್ರ. ಈಗಾಗಲೇ "ಡಾ" ಜಯಪ್ರಕಾಶ ಮಾವಿನ ಕುಳಿಯವರು ಉದಯವಾಣಿ ಪತ್ರಿಕೆಯಲ್ಲಿ ಇದೇ ಬಗೆಯ ಒಂದು ಲೇಖನ ಬರೆದಿದ್ದರು. ಅದಕ್ಕೆ ಉತ್ತರವಾಗಿ ನಾನು ಬರೆದ ಲೇಖನವನ್ನು ತಮ್ಮ ಅವಗಾಹನೆಗಾಗಿ ಮತ್ತು ಪ್ರಕಟಣೆಗಾಗಿ ಕಳುಹಿಸುತ್ತಿದ್ದೇನೆ. ಇಬ್ಬರೂ ಒಂದೇ ಬಗೆಯ ಪ್ರಶ್ನೆ ಎತ್ತಿದ್ದು ಅದಕ್ಕೆ ಬೇರೆಬೇರೆ ಉತ್ತರ ಬರೆಯುವುದು ಸಮಂಜಸವಲ್ಲವೆಂದು ತಿಳಿಯುವೆ . ಈಗಾಗಲೇ ಈ ಲೇಖನ ಉದಯವಾಣಿಯಲ್ಲಿ ಪ್ರಕಟವಾಗಿದೆ .)

ಕನ್ನಡದ ಮೊದಲ ನಾಟಕ ಸಲೋಮ ಭಾಸ್ಕರ ಬರೆದ 'ವಿವಾಹವನ್ನು ಕುರಿತಾದ್ದು'- ಎಂಬ ಶಿರೋನಾಮೆ ಹೊತ್ತ ಡಾ . ಜಯಪ್ರಕಾಶ ಮಾವಿನಕುಳಿ ಅವರ ಲೇಖನವೊಂದು ಉದಯವಾಣಿಯ ಕಲಾವಿಹಾರ (ಪುರವಣಿ) ದಲ್ಲಿ ಪ್ರಕಟವಾಗಿತ್ತು. (೧೩.೨. ೧೯೯೮) . ಇಲ್ಲಿಯತನಕ ೧೮೮೭ ರಲ್ಲಿ ಸೂರಿ ವೆಂಕಟರಮಣ ಶಾಸ್ತ್ರಿಯವರು ರಚಿಸಿದ "ಇಗ್ಗಪ್ಪ ಹೆಗ್ಗಡೇ ವಿವಾಹ ಪ್ರಹಸನ " ವನ್ನು ಕನ್ನಡದ ಸ್ವತಂತ್ರ ಸಾಮಾಜಿಕ ನಾಟಕ ಎಂಬುದಾಗಿ ಪರಿಗಣಿಸಲಾಗಿತ್ತು. ಹೀಗೊಂದು ಹೊಸ ಮಾತು ಮೂಡಿಬಂದ ಸಹಜ ಕುತೂಹಲದಿಂದ ಡಾ. ಎಚ್. ಜಿ . ಶ್ರೀಧರರು ಸಂಪಾದಿಸಿದ (ಪ್ರಕಾಶಕರು: ಕನ್ನಡ ಸಂಘ , ವಿವೇಕಾನಂದ ಕಾಲೇಜು ಪುತ್ತೂರು, ೧೯೯೮) 'ವಿವಾಹ ' ಕೃತಿಯನ್ನು ಅಭ್ಯಾಸಕ್ಕೆ ಎತ್ತಿಕೊಂಡಾಗ ಅನೇಕ ಸಂದೇಹಗಳು ಎದುರಾದುವು .

'ವಿವಾಹ' ಕನ್ನಡದ ಮೊದಲ ನಾಟಕವೆ ? ಕನ್ನಡದ ನಾಟಕವೆ ? ಅನುವಾದವೆ ? ಅದಕ್ಕೆ ಚಾರಿತ್ರಿಕ ದಾಖಲಾತಿಯ ಅರ್ಹತೆ ಇದೆಯೆ ? ಇತ್ಯಾದಿ .

ಡಾ . ಎಚ್ .ಜಿ . ಶ್ರೀಧರ್ ತಾವು ಸಂಪಾದಿಸಿದ ವಿವಾಹಕ್ಕೆ ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ . ಬಂಗಾಳಿ ಹಾಗೂ ಮರಾಠಿ ರಂಗಭೂಮಿಗಳು ಕನ್ನಡ ರಂಗಭೂಮಿಗಿಂತ ಮೊದಲಿನದ್ದು ಎನ್ನುವುದಾಗಿ ಹೇಳಿ ಅದಕ್ಕಿರುವ ಸಮರ್ಥನೆಯನ್ನೂ ನೀಡಿದ್ದಾರೆ . ನಾಟಕದ ಆ ದಿನಗಳ ಸಾಮಾನ್ಯ ವಸ್ತುವಾಗಿದ್ದ ವಿವಾಹ , ಕನ್ಯಾಶುಲ್ಕ, ಸ್ತ್ರೀ ಶಿಕ್ಷಣ ಇತ್ಯಾದಿಗಳ ಬಗ್ಗೆ ಪ್ರಸ್ತಾಪವಿದೆ. ಆಮೇಲೆ "ಆಧುನಿಕ ಕನ್ನಡ ನಾಟಕ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಾದ ಕನ್ನಡದ ಸಾಮಾಜಿಕ ನಾಟಕ ಪರಂಪರೆಗೆ ಭದ್ರವಾದ ತಳಹದಿಯನ್ನು ಹಾಕಿದ ವಾಸ್ತವವಾದಿ ನೆಲೆಗಟ್ಟಿನಲ್ಲಿ ಮೂಡಿಬಂದ ಮಹತ್ವದ ಕೃತಿ "ವಿವಾಹ" ನಾಟಕ. . ಸಾಹಿತ್ಯ ಚರಿತ್ರೆಯ ಗ್ರಂಥಗಳಲ್ಲಿ , ಕನ್ನಡ ನಾಟಕ ಸಾಹಿತ್ಯದ ಬಗೆಗೆ ಬಂದ ವಿಮರ್ಶಾ ಕೃತಿ ಅಥವಾ ಲೇಖನಗಳಲ್ಲಿ ಗಮನಿಸದೇ ಅವಜ್ಞೆಗೆ ಒಳಗಾದ ಈ ಕೃತಿ ಇಗ್ಗಪ್ಪ ಹೆಗಡೇ

ವಿವಾಹ ಪ್ರಹಸನಕ್ಕಿಂತ (೧೮೮೭)ಹನ್ನೆರಡು ವರ್ಷ ಮೊದಲೇ ಪ್ರಕಟವಾದುದು ಗಮನೀಯ ಅಂಶ.(ವಿವಾಹ ಪ್ರಸ್ತಾವನೆ. ಪು . ೫) ಎಂಬ ಮಾತನ್ನು ಹೇಳಿದ್ದಾರೆ .

ಕ್ರಿ.ಶ. ೧೮೭೫ ರಲ್ಲಿ ಬಾಸೆಲ್ ಮಿಶನ್ ಪ್ರೆಸ್‌ನಲ್ಲಿ ಮುದ್ರಣಗೊಂಡ ಈ ಕೃತಿಗೆ "The Married Life"ಎಂಬ ಹೆಸರಿದ್ದುದಾಗಿಯೂ ಕೃತಿಯಲ್ಲಿ The wedding, Husband and Wife , Parents and Children ಎಂಬ ಮೂರು ಭಾಗಗಳಿರುವುದಾಗಿಯೂ ತಿಳಿಸಿದ್ದಾರೆ . ಎರಡನೆಯ ಹಾಗೂ ಮೂರನೆಯ ಭಾಗಗಳು ಈಶ್ವರದಾಸರ ಉಪನ್ಯಾಸವಾಗಿದ್ದು ಸಲೋಮ ಭಾಸ್ಕರ ಹಾಗೂ ಕ್ರಿಸ್ತಾನುಜರೆಂಬುವರು ಅವನ್ನು ಕನ್ನಡಕ್ಕೆ ಅನುವಾದಿಸಿದ್ದಾಗಿ ಬಾಸೆಲ್ ಮಿಶನಿನ ವರದಿಯಲ್ಲಿ ಮಾಹಿತಿಯಿದೆ ಎನ್ನುವ ಶ್ರೀಧರರು 'ಒಂದನೇ ಭಾಗವಾದ'ವಿವಾಹದ'ಬಗ್ಗೆ ಮೌನವಾಗಿಬಿಡುತ್ತಾರೆ" ಎಂದೂ

ತಿಳಿಸುತ್ತಾರೆ . ಅಂದರೆ ಅದು ಸ್ವತಂತ್ರ ಕೃತಿ ಎಂಬ ಭ್ರಮೆಯನ್ನು ಮೂಡಿಸುವುದಕ್ಕೆ ಕೊನೆಯ ಸಾಲು ಸಹಕಾರಿಯಾಗುತ್ತದೆ .

ನಾಟಕದಲ್ಲಿ ಬರುವ ಪಾತ್ರಗಳ ಹೆಸರುಗಳನ್ನು ಗಮನಿಸಬೇಕು .ತ್ರಿಯಂಬಕರಾವ'ರಾಧಾಬಾಯಿ, ಬಾಳು, ನರಸುಬಾಯಿ , ಚಂದುಲಾಲ , ಬಾಜಿರಾವ , ಗುಲಾಬಿ ಸಾನಿ , ಮುಂತಾಗಿ ಮರಾಠಿ ಜಾಯಮಾನಕ್ಕೆ ಒಗ್ಗುವ ,ಕನ್ನಡದಲ್ಲಿ ಕಾರಣಾಂತರಗಳಿಂದ ಕಾಣಿಸಿಕೊಳ್ಳಬಹುದಾದ ಹೆಸರುಗಳವು. ಸಂಭಾಷಣೆಯಲ್ಲೂ ಸಾಕಷ್ಟು ಮರಾಠಿಪದಗಳು ಕಾಣಿಸಿಕೊಳ್ಳುತ್ತಿದ್ದು ಸಲೋಮ ಭಾಸ್ಕರ ಗದಗದವ ಎಂಬುದಷ್ಟೇ ಅದಕ್ಕೆ ಕಾರಣವಾಗಬೇಕಾದ ಅಗತ್ಯವಿಲ್ಲ. ಚಂದುಲಾಲನು (ಮಾರವಾಡಿ) ತನ್ನ ಮಾತಿನುದ್ದಕ್ಕೂ ಅನೇಕಾನೇಕ ಮರಾಠಿ ಪದಗಳ ಬಳಕೆ ಮಾಡುತ್ತಾನೆ .

೧.೯.೯೬ ರಂದು ಡಾ .ಶ್ರೀನಿವಾಸ ಹಾವನೂರರಿಗೆ ಡಾ . ಶ್ರೀಧರ್ ಬರೆದ ಕೆಲವು ಪತ್ರದ ಸಾಲುಗಳು ... "ನಿಮ್ಮ ಹೊಸಗನ್ನಡ ಅರುಣೋದಯದಲ್ಲಿ ಸೋಲೋಮನ್ ಭಾಸ್ಕರ್ ದಾಂಪತ್ಯ (ವಿಷಯಕ್ಕೆ ಸಂಬಂಧಿಸಿ ಮರಾಠಿಯಿಂದ - ಇಷ್ಟು ಭಾಗವನ್ನು ಬರೆದು ಹೊಡೆಯಲಾಗಿದೆ) ವಿಚಾರವನ್ನು ಕನ್ನಡಕ್ಕೆ ತಂದದ್ದು , ಇದು ಬೇರೊಬ್ಬನ ಕೃತಿ (ಪು . ೧೯) ಎಂಬ ಮಾಹಿತಿ ಸಿಕ್ಕಿತು" - ಎಂದಿದ್ದಾರೆ .

ಇಷ್ಟು ವಿವರಗಳು ಡಾ . ಶ್ರೀಧರ್ ಅವರಿಗೆ ತಿಳಿದಿರುವಾಗ ಹಾಗೂ ಕೃತಿಯಲ್ಲಿ ಮರಾಠಿಯ ಗಂಧ ಸಾಕಷ್ಟಿರುವಾಗ ಅದರ ಮೂಲವನ್ನು ಹುಡುಕಿ ಅದೊಂದು ಅನುವಾದಿತ ಕೃತಿ ಎಂಬುದನ್ನು ಸಾಬೀತು ಪಡಿಸುವ ಬದಲಿಗೆ ಮೂಲದ ಮಾತನ್ನು ಮರೆತು ಅಥವಾ ಮರೆಮಾಚಿ ಅದನ್ನು ಸ್ವತಂತ್ರ ಕೃತಿ ಎಂಬಂತೆ ಪ್ರಕಟಿಸುವುದರ ಅಗತ್ಯವಿರಲಿಲ್ಲ.

ಮಾತ್ರವಲ್ಲದೆ ೧೮೭೫ ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿ ೧೯೯೮ ರಲ್ಲಿ ಏಳನೆಯ ಮುದ್ರಣ ಕಾಣುವಾಗ ಅದರ ನಡುವಣ ಆರು ಮುದ್ರಣಗಳು ಜನರ ನಡುವೆ ಬಂದಿರಲೇ

ಆಗೆಲ್ಲ ಪ್ರಾಮುಖ್ಯ ಕಾಣದ ಈ ಕೃತಿ, ಏಳನೆಯ ಮುದ್ರಣಕ್ಕಾಗುವಾಗ "ಕನ್ನಡದ ವಾಸ್ತವವಾದಿ ಸಾಹಿತ್ಯದ ಹಲವು ನೆಲೆಗಳು ಈ ಕೃತಿಯಲ್ಲಿರುವುದು ಗಮನಾರ್ಹ (ಪ್ರಸ್ತಾವನೆ. ಪುಟ ೧೩), ಕನ್ನಡ ಸಾಹಿತ್ಯದ ಅನೇಕ ಪ್ರೇರಣೆಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡಿರುವುದು ಪರಿಶೀಲಿಸಬೇಕಾದ ವಿಷಯ (ಪುಟ ಅದೇ)"ಇತ್ಯಾದಿ ರಣಭಾರದ ಅಣಿಮುತ್ತುಗಳನ್ನು ಹೊತ್ತುಕೊಂಡು ಬಂದುದು ಅಪ್ರಸ್ತುತ ಎನಿಸುವುದಿಲ್ಲವೆ ?

ಡಾ . ಶ್ರೀನಿವಾಸ ಹಾವನೂರರಿಗೆ ವಿವಾಹ ಕೃತಿಯ ಏಳನೆಯ ಆವೃತ್ತಿ ಪ್ರಕಟವಾದ ಬಗ್ಗೆ ಹಾಗೂ "ಇಗ್ಗಪ್ಪ ಹಗಡೇ-" ಗಿಂತ ಮೊದಲ ಕೃತಿ ಎಂಬುದಾಗಿ ಜಾಹೀರಾತುಗೊಳಿಸುವ ರೀತಿಯ 'ಪ್ರಸ್ತಾವನೆ'ಯ ಬಗ್ಗೆ ತಿಳಿಸಿದಾಗ , ಅವರು ಆ ಕೃತಿಯ ಮರಾಠೀ ಮೂಲವನ್ನು ತಾನು ಓದಿರುವುದಾಗಿಯೂ ಅದರ ಮೂಲ ಹೆಸರು "ವ್ಯವಹಾರೋಪಯೋಗಿ" ನಾಟಕ ಎಂಬುದಾಗಿಯೂ ನಾಟಕಕಾರರು ಮಾಡಗಾಂವಕರ್ ಎಂಬುದಾಗಿಯೂ ೧೮೫೭ ರಲ್ಲಿ ಜ್ಞಾನ ಪ್ರಸಾರಕ ಪತ್ರಿಕೆಯಲ್ಲಿ ಪ್ರಕಟವಾಯಿತೆಂದೂ ತಿಳಿಸಿದರು. ಆ ಬಗ್ಗೆ ಇನ್ನಷ್ಟು ವಿವರಣೆಯನ್ನು ಅಪೇಕ್ಷಿಸಿದಾಗ , ಅವರು ೨.೪.೯೮ ರಂದು ಪತ್ರ ಬರೆದು , ಮೂಲ ಕೃತಿಯನ್ನು ಇನ್ನೊಮ್ಮೆ ಹುಡುಕಿ ತೆಗೆಯಲು ಸಾಕಷ್ಟು ಸಮಯಾವಕಾಶ ಬೇಕೆಂದೂ ತಾನು ಅಮೇರಿಕಾಕ್ಕೆ ಹೊರಟು ನಿಂತಿರುವುದರಿಂದ ಕೈಗೆ ಸಿಕ್ಕಿದ " ಮರಾಠಿ ವಾಙ್ಮಯ ಇತಿಹಾಸ "ದಿಂದ (ಮರಾಠಿ ಸಾಹಿತ್ಯ ಚರಿತ್ರೆ) ಇಷ್ಟು ವಿವರ ಕಳುಹಿಸುತ್ತಿದ್ದೇನೆಂದೂ ತಿಳಿಸಿ . ಕೆಳಕಂಡ ಮಾಹಿತಿ ನೀಡಿದರು: " ಚಿಕ್ಕ ವ್ಯವಹಾರೋಪಯೋಗಿ ನಾಟಕ ರೂಪದ ನಿಬಂಧವಿದು- ಇದರಲ್ಲಿ ಬಂದಿರುವ ಪ್ರತಿಯೊಂದು ವಿಷಯವು ಅನುಭವಜನ್ಯವಾಗಿದ್ದು ಮೇಲಿಂದ ಮೇಲೆ ಜನರ ಗಮನಕ್ಕೆ ಬಂದೇ ಇದೆ . ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಮದುವೆ ಮಾಡುವದು ,ತಮ್ಮ ಯೋಗ್ಯತೆಯನ್ನು ಮೀರಿದ ಆಢ್ಯತೆಯಿಂದ ಮಾಡುವಲ್ಲಿ ನಮ್ಮ ಜನ ಉತ್ಸಕರಿರುತ್ತಾರೆ ಹಾಗೂ ಅದನ್ನು ಸಾಧಿಸಲು ಅಷ್ಟೊಂದು ಒದ್ದಾಡುತ್ತಾರೆ ಎಂಬುದನ್ನು- ಬೇರೆ ಬೇರೆ ಪಾತ್ರಗಳ ಮೂಲಕ ಇಲ್ಲಿ ತೋರಿಸಿದ್ದೇನೆ . ಅವಿಚಾರದಿಂದ ಬಂದಂಥ ಇಂಥ ಎತ್ತುಗಡೆಯನ್ನು ನಮ್ಮವರು ಮಾಡಬಾರದು ಎನ್ನುವುದನ್ನು ಅವರ ಗಮನದಲ್ಲಿ ತರಲೆಂದು ಇದನ್ನು ಪ್ರಕಟಿಸಿದ್ದಾಗಿದೆ. " (ನಾಟಕಕಾರರ ಮಾತು)

ಈ ನಾಟಕದ ಕಥಾನಕವು ತೀರಾ ಸಾದಾ ಇದ್ದು ಇದರಲ್ಲಿ ಕೇವಲ ೫ ಪ್ರವೇಶಗಳಿವೆ . ೧೫ ರೂಪಾಯಿ ಮಾಸಿಕ ಸಂಬಳ ಪಡೆಯುವ ತ್ರಿಯಂಬಕ ರಾವ್ ಎಂಬ ಸರಕಾರಿ ನೌಕರ , ತನ್ನ ಹೆಂಡತಿ ಹಾಗೂ "ಉಪಾಧ್ಯರ "ಒತ್ತಡದ ಮೇರೆಗೆ ತನ್ನ ಶಾಲೆಯಲ್ಲಿ ೩ ನೇ ತರಗತಿ ಕಲಿಯುವ ಹುಡುಗ ಮತ್ತು ಅವನಿಗಿಂತ ಚಿಕ್ಕವಳಿರುವ ಒಬ್ಬ ಚಿಕ್ಕಹುಡುಗಿ , ಇವರ ಲಗ್ನ ಮಾಡಲು ತೊಡಗುತ್ತಾನೆ. ಲಗ್ನವು ಒಳ್ಳೆ ಥಾಟಿನಿಂದ ನಡೆಯಬೇಕೆಂದು ಮಾರವಾಡಿಗೆ ಮನೆಯನ್ನು ಅಡವಿಟ್ಟು ಸಾಲಪಡೆಯುತ್ತಾನೆ. ಕಿರಾಣಿ ಅಂಗಡಿಗಳಿಂದ ತುಪ್ಪ , ಬಟ್ಟೆ ಉದ್ದರಿಯಿಂದ ತರುತ್ತಾನೆ. ಅದರಂತೆ ಪಾಶ್ಚಾತ್ಯಬ್ಯಾಂಡ್, ಸಾನಿಯೊಬ್ಬಳ ನಾಚು , ಅವು ಬೇಕೇ ಬೇಕೆಂಬ ಇರಾದೆಯಿಂದ ತರುತ್ತಾನೆ. ಈ ಮುಂದಿನ ಸಂಭಾಷಣೆಯಿಂದ ಅದರ ಕಲ್ಪನೆ ಬರುವಂತಿದೆ.

ನೌಕರ (ಪ್ರವೇಶಿಸಿ ತ್ರಿಯಂಬಕ ರಾವನಿಗೆ ಹೇಳುತ್ತಾನೆ): ಕಾಕಾ, ಈ ಸಾನಿಯರು ಹಾಗೂ ಬ್ಯಾಂಡಿನವರು ಇಷ್ಟೊಂದು ಏರಿ ಕೂತಿದ್ದಾರಲ್ಲ- ಅದು ಹೇಳಲಾಸಲ್ಲ.

ಲಗ್ನ ಮುಗಿದ ಮೇಲೆ ಸಾಲ ಇತ್ಯಾದಿ ಕೊಟ್ಟವರು ತ್ರಿಯಂಬಕ ರಾವ್ ಬಾಗಿಲಿಗೆ ಬಂದು ಕೂಡುತ್ತಾರೆ. ಕೊನೆಗೆ ತ್ರಿಯಂಬಕರಾವ್ ನಾದಾರಿ ಅರ್ಜಿ ಕೊಡುತ್ತಾನೆ ಮಾರವಾಡಿ ಅವನನ್ನು ಹೊರಹಾಕಿ ಆ ಮನೆಯನ್ನು ವಶಪಡಿಸುತ್ತಾನೆ.

"ನಾಟಕ ಅನ್ನುವ ದೃಷ್ಟಿಯಿಂದ ಅದಕ್ಕೆ ವಿಶೇಷ ಮಹತ್ವ ಇಲ್ಲದಿದ್ದರೂ , ಒಂದು ಸಾಮಾಜಿಕ ಸಮಸ್ಯೆಯನ್ನು ನಾಟಕರೂಪದಲ್ಲಿ ಬಿಂಬಿಸಲು ಯತ್ನಿಸಲಾಗಿದೆ ". (ಮರಾಠಿ ವಾಙ್ಮಯಾಚಾ ಇತಿಹಾಸ, ೪ ನೇ ಭಾಗ . ಸಂ .ರಾ . ಶ್ರೀ. ಜೋಗ .ಪುಟ ೪೪೪-೫)

ಇಲ್ಲಿ ಗಮನಿಸಬೇಕಾದ ಕೆಲವು ವಿಚಾರಗಳಿವೆ. ಮೂಲ ಮರಾಠಿ ನಾಟಕದಲ್ಲಿ ಐದು ಪ್ರವೇಶಗಳಿವೆ ಎನ್ನಲಾಗಿದೆ. "ವಿವಾಹವನ್ನು ಕುರಿತಾದ್ದು" ವಿನಲ್ಲಿ ಏಳು ಪ್ರವೇಶಗಳಿವೆ .

ತುಸು ಎಚ್ಚರಿಕೆಯಿಂದ ಗಮನಿಸಿದರೆ "ವಿವಾಹ" ಐದನೆಯ ಪ್ರವೇಶದ ಉತ್ತರಾರ್ಧವನ್ನು, ಆರನೆಯ ಪ್ರವೇಶವೆಂದು ಕರೆಯಲಾದದ್ದು ಗಮನಕ್ಕೆ ಬರುತ್ತದೆ. ಮದುವೆಯ ಪ್ರಸಂಗ ಐದನೆಯ ಪ್ರವೇಶದಲ್ಲಿ ಮುಗಿಯುತ್ತದೆ. ಆರನೆಯ ಪ್ರವೇಶದಲ್ಲಿ ವಿವಾಹದ ಪರಿಣಾಮವಾಗಿ ಸಾಲದಲ್ಲಿ ಮುಳುಗಿದ ತ್ರಿಯಂಬಕರಾಯರು ನಾದಾರಿ ಅರ್ಜಿಕೊಟ್ಟು , ಮನೆಯನ್ನು ಮಾರ್ವಾಡಿಗೆ ಬಿಟ್ಟುಕೊಟ್ಟು , ಮಗನನ್ನು ಶಾಲೆ ಬಿಡಿಸಿ , ತಾನೊಂದು ಬಾಡಿಗೆ ಮನೆ ಹಿಡಿಯುವ ವಿವರ ಬರುತ್ತದೆ . ಮಾತ್ರವಲ್ಲದೆ ಬಾಜಿರಾಯನು "ಹೀಗೆ ನಿಮಗೆ ಆಗುವ ಹಾಗಿದ್ದರೆ, ಲಗ್ನ ಮಾಡುವುದಕ್ಕೆ ಯಾಕೆ ಕೈ ಹಚ್ಚಿದಿರಿ"? ಎಂದು ಪ್ರಶ್ನಿಸುವ ವಿವರವೂ ಬಂದಿದ್ದು ನಾಟಕಕ್ಕೆ ಚಿಂತನಾತ್ಮಕ ಮುಕ್ತಾಯವೂ ಲಭಿಸುತ್ತದೆ.

ಸಾಲ ಮಾಡಿ ಬಹು ಡಂಬಾಚಾರದಿಂದ ಲಗ್ನ ಯಾರು ಮಾಡುತ್ತಾರೋ ,ಅವರು ಮೂರ್ಖರೇ, ಹುಚ್ಚರೇ, ಸರಿ! ಎಂಬ ಭರತ ವಾಕ್ಯದೊಂದಿಗೆ ನಾಟಕದ ಆರನೆಯ ಪ್ರವೇಶ ಅಂತ್ಯಗೊಳ್ಳುತ್ತದೆ. ಐದನೆಯ ಪ್ರವೇಶದ ಉತ್ತರಾರ್ಧವನ್ನು ವಿಭಜಿಸಿ ಆರನೆಯ ಪ್ರವೇಶವನ್ನಾಗಿ ಮಾಡಿಕೊಂಡದ್ದಕ್ಕೆ ಬಾಲ್ಯವಿವಾಹದ ಪರಿಣಾಮವನ್ನು ಪ್ರತ್ಯೇಕ ಹೇಳುವ ಉದ್ದೇಶವಿದ್ದುದು ಕಾರಣವಿರಬೇಕು.

ಏಳನೆಯ ಪ್ರವೇಶ ಮೂಲನಾಟಕಕ್ಕೆ ನೇರವಾಗಿ ಸಂಬಂಧಪಟ್ಟದ್ದಲ್ಲ. ಮತ್ತು ಅದರಲ್ಲಿ ನಾಟಕವೂ ಇಲ್ಲ. ತ್ರಿಯಂಬಕ, ಕೃಷ್ಣ ಶಾಸ್ತ್ರಿ ಮೊದಲಾದ ಪಾತ್ರಗಳೆದುರು ಸತ್ಯಾರ್ಥಿ ಎಂಬಾತ (ಧರ್ಮ ಪ್ರಚಾರಕ) ಕ್ರೈಸ್ತ ಧರ್ಮದಲ್ಲಿ ವಿವಾಹಪದ್ಧತಿ ಹೇಗಿದೆ ಎಂಬುದನ್ನೂ ಬಾಲ್ಯ ವಿವಾಹ ಎಷ್ಟು ಕೆಟ್ಟದ್ದು ಎಂಬುದನ್ನೂ ನಿರೂಪಿಸುವ ಉಪದೇಶಾತ್ಮಕವಾದ ಚರ್ಚೆಯಷ್ಟೇ ಅಲ್ಲದೆ ರೆವರೆಂಡ್ ಸಲೋಮ ಭಾಸ್ಕರರು ತನ್ನ ಉದ್ದೇಶಕ್ಕೆ ಹೊಂದುವ ಈ ಮರಾಠಿ ನಾಟಕವನ್ನು ಕನ್ನಡಕ್ಕೆ ಅನುವಾದಿಸಿ ಕೊನೆಯ ದೃಶ್ಯವೊಂದನ್ನು ಸೇರಿಸಿಕೊಂಡಿರಬಹುದು.

ಈಗಂತೂ "ವಿವಾಹವನ್ನು ಕುರಿತಾದ್ದು" ಅನುವಾದ ನಾಟಕ ಎಂಬುದಾಗಿ ಸಾಬೀತಾಗಿರುವುದರಿಂದ ಅದು "ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ"ಕ್ಕಿಂತ ಮೊದಲ ನಾಟಕವಾದ ಸಿಂಗರಾರ್‍ಯನ ಮಿತ್ರವಿಂದಾ ಗೋವಿಂದಾ ಕ್ರಿ.ಶ. (೧೬೮೦) ಕ್ಕಿಂತ ಹಿಂದಿನ ನಾಟಕವೂ ಅಲ್ಲ. ಹಾಗಾಗಿ ಯಾವುದೇ ಬಗೆಯ ಚಾರಿತ್ರಿಕ ದಾಖಲಾತಿಯನ್ನು "ವಿವಾಹವನ್ನು ಕುರಿತಾದ್ದು" ಅರ್ಹಿಸುವುದಿಲ್ಲ. ಎಂಬ ವಾಸ್ತವಾಂಶವನ್ನು ವಿದ್ವಜ್ಜನರ ಗಮನಕ್ಕೆ ತರಬಯಸಿದ್ದೇನೆ.

ಪೆರಿಯಾರ ಬಿಟ್ಟು ಹೋದ ಊರುಗೋಲು

ತಂದೆ ಪೆರಿಯಾರರ ಊರೆಗೋಲು
ಗಾಂಧೀಜೀಯವರು ಬಿಟ್ಟು ಹೋದ ಊರೆಗೋಲಿನ ಥರ
ಅಹಿಂಸೆಯ ಮಾತಾಡಲರಿಯದು , ಏಕೆಂದರೆ ,
ಅದು ಅಪ್ಪಟ ಕರುಣೆ ಅಲ್ಲ; ಬಾಡುಣೆ ಅನುಭವ ಪಡೆದದ್ದು
ಸಾಮಾಜಿಕ ಅನ್ಯಾಯವ ಬಡಿದೋಡಿಸಲು
ನಾಡಿನ ಉದ್ದಗಲಕ್ಕೆ ಕಾಲು ಚಾಚಲು ಬಳಸಿದ್ದಲ್ಲವೇ ?
ಅದು , ಮೌನ ಪ್ರಥಾಚರಣೆಯ ಸಂಸ್ಕೃತಿಯದಲ್ಲ
ಮಹಾನ್ ಕಾವ್ಯ -ಪುರಾಣ ಕಟ್ಟು ಕಥೆಗಳನ್ನೆಲ್ಲ
ಕೆದರಿ , ಬಿಡಿಸಿ , ಜಾಲಾಡಿಸಿ ನ್ಯಾಯಾನ್ಯಾಯ ತಪಾಸಣೆ ಗೈದಿದೆ.

ಬೋಧಿ ಮಾಧವ ಕುಳಿತು ಜ್ಞಾನೋದಯ ಗಳಿಸಿದಂಥ
ದೊಡ್ಡಾಲಮರದ ರಂಬೆಯ ಕೊಂಬು,
ಪೆರಿಯಾರರು ಬಳಸಿದ ಊರೆಗೋಲು - ಅದನ್ನು
ಮುರಿಯಲು ಬಯಸಿದ್ದವರೆಲ್ಲ
ನೆಗೆದು ಬಿದ್ದರು. ಇನ್ನು ಅದ ನೋಡಿದ ಸನಾತನಿಗಳು
ಬೆವರಿಳಿಸಿದ್ದುಂಟು.

ಇನ್ನೆಷ್ಟು ಕಾಲ ಮೌಢ್ಯದ ಮಂಡಿಗಳು
ಮೊಣಕಾಲೂತ್ತಾ ನೆಲಕ್ಕೆ ಮಣಿದಾವು ?
ಅಯ್ಯ! ಅವರು ಬಳಸಿದ ಊರೆಗೋಲಿಂದ
ಮೆಲ್ಲನೆ ತಾಗಿಸಿಕೊಂಡರೆ,
ಸಾಕು. ಇನ್ನು ಸತ್ತೆವೆಂದು ಸಮ್ಮತಿ ತಿಳಿಸಿದವು
ಮರಣ ಶಯ್ಯೆಯಲ್ಲಿ ಅಂಗಾತ ಪುಸುಗುಟ್ಟಿದ
ಅಂಧಾನುಕರಣೆಗಳು.

ವಿಟವ-ಗಟ್ಟಿತನದ ಮಾತುಗಳನ್ನೇ ಆಡಿದವರ
ಊರೆಗೋಲಿನ ದೆಸೆಯಿಂದ
ಮೆಲ್ಲನೆ ಸದ್ದಡಗಿಸಿ ಗುಸುಗುಸೆಂದು ಆಡಿದವರೆಲ್ಲ
ಅಂದರೆ - ದಲಿತರು ಹಿಂದುಳಿದವರೆಲ್ಲರೂ ಬಲಿಷ್ಠರಾದರು
ಅವರೆಲ್ಲರಿಗೂ ಗಟ್ಟಿತನ ಸಿದ್ಧಿಸಿತು.

ಕೆಲವೊಮ್ಮೆ ಪೆರಿಯಾರರ ಊರೆಗೋಲು
ಅವರಿಗೆ ಮೂರನೇ ಕೈಯೇ ಆಯಿತು.
ಸಾಮಾನ್ಯರ ಎಡಗೈ ಬಲಗೈಯಂಥದ್ದಾಗಿರದೆ
ಅನ್ಯಾಯ - ಅವ್ಯವಸ್ಥೆಗಳನ್ನು ಬಗ್ಗು ಬಡಿಯುವ
ಓಬವ್ವನ ಒನಕೆಯೇ ಆಯಿತೆನ್ನಬೇಕು.

ಆತುರಗೊಂಡು ಅವರನ್ನು ಮೇಲೆತ್ತಿದಾಗ
ಶೂದ್ರಾತಿ ಶೂದ್ರರ ಪಾಲಿಗೆ ಲಭಿಸಿದ್ದ ಅಪನಿಂದೆ - ಅಪಮಾನಗಳು
ಗಾಳಿಪಾಲಾದವು ; ಅವರು ಮಾನವರಾದರು. ಅಷ್ಟೇ ಅಲ್ಲ ....,
ಕಾಳಗದಲ್ಲಿ ಅದೇ ದೊಣ್ಣೆಯ ಬೀಸುತ್ತಾ, ಸುತ್ತುತ್ತಾ ' ವರಸೆ ' ನಡೆಸಿದಾಗ
ಮನುಧರ್ಮದ ಅಸ್ಥಿಪಂಜರಕ್ಕೇ ಮಾರಣ ಪೆಟ್ಟಾಯಿತು
ಅಂದರೆ ,
ಯಾವ ' ಫುತ್ತೂರಿನ ಬೋನ್ ಸೆಟ್ಟ ' ರಿಂದಲೂ
ಅದನ್ನು ಒಪ್ಪ ಮಾಡಲಿಕ್ಕಾಗದೆ,
ಎದ್ದು ನಿಲ್ಲಲೂ ಸಹ ಅಶಕ್ತವಾಯಿತು.

ಕಾಳಗ ಮುಗಿಸಿ , ಜಾಗ ಖಾಲಿ ಮಾಡಿದಾಗ
ಪೆರಿಯಾರರು ನಮಗೆ ತಂದು ಕೊಟ್ಟು
ಬಿಟ್ಟು ಹೋದ ಅದೇ ಊರೆಗೋಲು ಇದೀಗ
ದ್ರಾವಿಡ ಜನಾಂಗದವರ ಭಾಗದ
ಬೆನ್ನುಮೂಳೆಯೇ ಆಗಿ, ಉಳಿದು ಕೊಂಡಿದೆ ,
ಚಿಂತನಾಕ್ರಾಂತಿಗೆ ನಾಂದಿ ಹಾಡುತ್ತದೆ .

●

೧೯೯೮ ರ ಪ್ರಕಟನೆಗಳು

ದಲಿತ ಚಳುವಳಿ ಒಂದು ಅವಲೋಕನ : ಡಾ. ವಿ. ಮುನಿವೆಂಕಟಪ್ಪ, ವಿಚಾರವಾದಿ ಪ್ರಕಾಶನ, ಕುವೆಂಪುನಗರ, ಮೈಸೂರು ೫೭೦೦೨೩; ರೂ. ೮೦

ಓದುಗರು ಮತ್ತು ಓದುವಿಕೆ (ವಿಮರ್ಶೆ): ಸಿ.ಎನ್. ರಾಮಚಂದ್ರನ್, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ ೫೭೭೫೩೧ ; ರೂ. ೫೦

ಬಯಲ ಬಿತ್ತನೆ (ಸಣ್ಣಕಥೆ) : ಸಿದ್ಧರಾಮ ಹೊನ್ಕಲ್, ಜಾಗೃತ ಪ್ರಕಾಶನ, ಕಾವ್ಯಾಲಯ ಶಹಾಪುರ (ಗುಲಬರ್ಗಾ) ೫೮೫೨೨೩ ; ರೂ ೪೦.

ಹಳ್ಳಿಯಿಂದ ದಿಲ್ಲಿಗೆ (ಜೀವನ ಚರಿತ್ರೆ) : ಡಾ. ಸ್ವಾಮಿರಾವ ಕುಲಕರ್ಣಿ, ಖಾದಿ ಗ್ರಾಮೋದ್ಯೋಗ ಸಂಘ, ಗುಲಬರ್ಗಾ ; ರೂ. ೪೦

ರಂಗ ನಾಟಕಗಳ ರಸ ಪ್ರಸಂಗಗಳು : ಡಾ. ಸ್ವಾಮಿರಾವ ಕುಲಕರ್ಣಿ, ರಂಗಮಾಧ್ಯಮ, ಗುಲಬರ್ಗಾ - ૩ ; ರೂ. ૩૫

ಕಳದೈತ್ಯೋ ಪ್ರೀತಿ ಕಳದೈತಿ (ಕಾವ್ಯ): ಡಾ. ಸ್ವಾಮಿರಾವ ಕುಲಕರ್ಣಿ, ಶಿರಪುರ ಪ್ರಕಾಶನ, ಬ್ರಹ್ಮಪುರ, ಗುಲಬರ್ಗಾ - ೩ ; ರೂ. ೪೦

ಕೃತ (ಸಣ್ಣಕಥೆ) : ಎಂ.ವ್ಯಾಸ, ಕಾಸರಗೋಡು ಪ್ರಕಾಶನ, ವಿದ್ಯಾನಗರ, ಕಾಸರಗೋಡು ೬೭೧೧೨೩ ; ರೂ ೫೦

ಕ್ಷೇತ್ರ (ಕಾವ್ಯ) : ಎಂ.ವ್ಯಾಸ, ಕಾಸರಗೋಡು ಪ್ರಕಾಶನ, ವಿದ್ಯಾನಗರ, ಕಾಸರಗೋಡು ೬೭೧೧೨೩ ; ರೂ ೫೦

ಯಶೋಮಾನಾ (ಕಾದಂಬರಿ) : ಗುಡಿಬಂಡೆ ಪೂರ್ಣಿಮಾ, ಐ ಬಿ ಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು ೫೬೦೦೦೯ ; ರೂ. ೬೦

ನೆಲಗುಮ್ಮ (ಕಾವ್ಯ): ವಿ. ಗ. ನಾಯಕ, ಸ್ಮೃತಿ ಪ್ರಕಾಶನ, ಅಡ್ಯನಡ್ಕ, ದ.ಕ. ೫೭೪೨೬೦; ರೂ. ೨೫

ಕವಿಯಿಂದ ಕಿವಿಗೆ (ಚಿಂತನೆಗಳು) . ವಿ. ಗ. ನಾಯಕ, ಸ್ಮೃತಿ ಪ್ರಕಾಶನ, ಅಡ್ಯನಡ್ಕ, ದ.ಕ. ೫೭೪೨೬೦; ರೂ. ೨೫

ಚಂದ್ರಗಾವಿ (ಕಾವ್ಯ) : ಭಾಗೀರಥಿ ಹೆಗಡೆ, ಕನ್ನಡ ಲೇಖಕಿಯರ ಪರಿಷತ್ತು, ಬೆಂಗಳೂರು ೫೬೦೦೪೦ ; ರೂ. ೨೦

ಚಿಪ್ಪಿನೊಳಗಿನ ಜೀವ (ಒಗಟುಗಳು) : ಗಣಪತಿ ದಿವಾಣ, ದಿವಾಣ ಪ್ರಕಾಶನ, ಎಡನಾಡು, ಕುಂಬಳೆ ೬೭೧೩೨೧ ; ರೂ. ೩೦.

ಗತಿಶೀಲ (ಕಾವ್ಯ) : ಮೈನುದ್ದೀನ ರೇವಡಿಗಾರ, ಸೌಜನ್ಯ ಪ್ರಕಾಶನ, ಬಾಗಲಕೋಟ ೫೮೭೧೦೧ ; ರೂ. ೨೦

ವಿಮುಕ್ತಿ : ಎಚ್. ಎಸ್. ವೆಂಕಟೇಶಮೂರ್ತಿ, ಕನ್ನಡ ಸಂಘ, ಕ್ರೈಸ್ತ ಕಾಲೇಜ, ಬೆಂಗಳೂರು ೫೬೦೦೨೯ ; ರೂ. ೫೦

ಇಂತಾಕಿ ನನ ಕವಿತಾ (ಕಾವ್ಯ) : ಪ್ರಕಾಶ ಹಲಗೇರಿ, ಮಹೇಶ್ವರ ಪ್ರಕಾಶನ ಬತ್ತಿಕೊಪ್ಪ (ಹಿರೇಕೇರೂರ - ಹಾವೇರಿ) ; ರೂ. ೨೫.

ನನ್ನೊಲವಿನ ಚೇತನ (ಕಾವ್ಯ) : ಪುಷ್ಪಾನಂದ ಉಳ್ಳಾಲ, ಪುಷ್ಪಾವತಿ ಪ್ರಕಾಶನ, ಉಳ್ಳಾಲ, ದ. ಕ. ; ರೂ. ೩೦

ನಾವು ಗೆಲುವೆವು (ಕಾವ್ಯ) : ಸಂ. ಡಾ. ಐ. ಎ. ಲೋಕಾಪೂರ, ಪ್ರಗತಿಪರ ಬರಹಗಾರರ ಒಕ್ಕೂಟ, ಹರಿಹರ ೫೭೭೬೦೧ ; ರೂ. ೨೫.

ಮೊದಲ ಪಾಪ (ಕಾವ್ಯ) : ಧನಂಜಯ ಕುಂಬ್ಳೆ ಕಾಸರಗೋಡು ಪ್ರಕಾಶನ, ವಿದ್ಯಾನಗರ, ಕಾಸರಗೋಡು ; ರೂ. ೧೫.

ಉಡಿಯಲ್ಲಿಯ ಉರಿ (ಹನಿಗವನ) : ಶಿವಣ್ಣ ಇಜೇರಿ, ವಿಚಾರ ಪ್ರಕಾಶನ, ಶಹಾಪುರ ೫೮೫೨೨೩ ; ರೂ ೨೦

ಬಂದಾನು ಮತ್ತೊಬ್ಬ ಸರದಾರ (ಕಾವ್ಯ) : ಶೈಲಪ್ಪ ನಾಗರಕಟ್ಟೆ, ಶ್ರೀಮತಿ ಸುಶೀಲ ಈಶ್ವರಪ್ಪ ಪ್ರಕಾಶನ, ಚಿತ್ರದುರ್ಗ ೫೭೭೫೦೧ ; ರೂ. ೩೫

ನಾನೊಂದು ಮರವಾಗಿದ್ದರೆ (ಕಾವ್ಯ) : ಮೂಡ್ನಾಕೂಡು ಚಿನ್ನಸ್ವಾಮಿ, ವಿಶ್ವಾಲಯ ಪ್ರಕಾಶನ, ಇಂದಿರಾನಗರ, ಬೆಂಗಳೂರು ೫೬೦೦೩೮ ;ರೂ. ೩೫.

ನೆಲ ಮುಗಿಲು (ಕಾವ್ಯ) : ಶಂಕರ ಮುತ್ತಣ್ಣವರ, ರಾಮಕೃಷ್ಣ ಪ್ರಕಾಶನ, ಯಡಳ್ಳಿ (ಗಲಗಲಿ) ೫೮೭೧೧೭ ; ರೂ. ೫೦.

●

ಈ ಸಂಚಿಕೆಯ ಲೇಖಕರು

ಡಾ . ಎನ್. ವಿ. ಕರುಣಾಕರ : ಕನ್ನಡ ಅಧ್ಯಯನ ವಿಭಾಗ , ಮಂಗಳೂರು ವಿ.ವಿ. ಮಂಗಳ ಗಂಗೋತ್ರಿ ೫೭೪೧೯೯

ಶಿವರಾಮಯ್ಯ : ಕನ್ನಡ ಪ್ರವಾಚಕರು, ಅಮ್ಮಾಜಿ , ನಂ . ೧೨೧ , ೧೩ ನೇ ಮುಖ್ಯರಸ್ತೆ , ಬಿನ್ನಿ ಲೇಔಟ , ವಿಜಯನಗರ , ಬೆಂಗಳೂರು ೫೬೦೦೪೦

ಶ್ರೀಧರ ವಿ : ಅಧ್ಯಾಪಕ , ಅಭಿವೃದ್ಧಿ ಅಧ್ಯಯನ ವಿಭಾಗ , ಕನ್ನಡ ವಿ .ವಿ ,ಹಂಪಿ

ವಿಠ್ಠಲ ಪೇರುಮನೆ : ಶಿಕ್ಷಕ , ಆನಂದಾಶ್ರಮ ಹೈಸ್ಕೂಲು , ಬೆಂಕಿಕೊಡ್ಲ(ಉ.ಕ.) ೫೮೧೩೧೯

ಡಾ . ಪ್ರಹ್ಲಾದ ಮುದಗಲ್ಲ : ೯ -೨ , ಶ್ರದ್ಧಾಮಠ , ಸಿ ಹೆಚ್ ಎಸ್, ಐ ಐ ಟಿ ಮೇನ್ ಗೇಟ ಎದುರು , ಆದಿಶಂಕರಾಚಾರ್ಯ ರಸ್ತೆ , ಪೋವೈ ಮುಂಬಯಿ ೪೦೦೦೭೬

ಡಾ .ನಾ .ದಾಮೋದರ ಶೆಟ್ಟಿ : ಪ್ರೊಫೆಸರ್ ಮತ್ತು ಮುಖ್ಯಸ್ಥ ,ಕನ್ನಡ ವಿಭಾಗ,ಸಂತ ಎಲೋಶಿಯಸ್ ಕಾಲೇಜು , ಮಂಗಳೂರು ೫೭೫೦೦೩

ಈರೋಡು ತಮಿಳ್ಬನ್ : ವೇಮಣ್ಣ , ೧೨೨ / ಬಿ , ೪ ನೇ ಬ್ಲಾಕ್, ೫ ನೇ ಮೇನ್, ರಾಜಾಜಿನಗರ , ಬೆಂಗಳೂರು ೫೬೦ ೦೧೦

ಮೇ ೧೯೯೯ ರ ಸಂಚಿಕಯಲ್ಲಿ 'ಪ್ರಮೀಳೆಯರು ರಾಜ್ಯವಾಳುವುದೆಂತು?' ಕವನ ಬರೆದ ಮಾಧವಿ ಭಂಡಾರಿಯವರ ವಿಳಾಸ , ತಪ್ಪಾಗಿ ಮುದ್ರಿತಗೊಂಡಿತ್ತು . ಸರಿಯಾದ ವಿಳಾಸ : ಕೆರೆಕೋಣ, ಅಂಚೆ : ಅರೆಅಂಗಡಿ (ಹೊನ್ನಾವರ -ಉ.ಕ.) ೫೮೧೪೩೦

ಸದ್ಯ ಲಭ್ಯವಿರುವ ಪ್ರಕಟನೆಗಳು

(ಚಂದಾದಾರರಿಗೆ ಶೇಕಡಾ ೧೦ ರಿಯಾಯತಿ)

೧. ಹನಿ ಹನಿ : ಸಂಪಾದಕಿ - ಡಾ. ಕಮಲಾ ಹೆಮ್ಮಿಗೆ
...ಗ ನಲವತ್ತು ಕವಿಗಳ ಸುಮಾರು ೫೦೦ ಹನಿಗವನಗಳ ಸಂಕಲನ೬೦-೦೦

೨. ...ಪಾ ನಾಟಕಗಳು -
(...ಳು, ...ಪ್ಪ, ಗುರ್ತಿನವರು, ಕುಂಟಾಕುಂಟಾ ಕುರವತ್ತಿ, ಟಿಂಗರ ಬುಡಣ್ಣ, ಕತ್ತಲ ರಾತ್ರಿ, ಗೋಕರ್ಣದ ಗೌಡಶಾನಿ ಮತ್ತು ಐದು ಬಿಡಿ ನಾಟಕಗಳು.) ೭೫-೦೦

೩. ಬೇಂದ್ರೆ : ನಾನು ಕಂಡಂತೆ ನನಗೆ ಕಂಡಷ್ಟು- ಚಂಪಾ ೧೦-೦೦

೪. ಕುವೆಂಪು ಸಾಹಿತ್ಯ : ಒಂದು ಮರು ಅಧ್ಯಯನ ಸಂ. : ಆರ್ಕೆ ಮತ್ತಿತರರು೨೦-೦೦

೫. ಗುಂಡಮ್ಮನ ಹಾಡು (ಗೇಯ ಕವನಗಳು)- ಚಂಪಾ ೨೨-೦೦

೬. ನನ್ನೊಳಗಿನ ನಾನು (ಕಾವ್ಯ) - ಸಿದ್ಧರಾಮ ಹಿರೇಮಠ ೨೦-೦೦

೭. ಕನ್ನಡ ಲೇಖಕರ ವಿಳಾಸಗಳು : (ತೃತೀಯ ಪರಿಷ್ಕೃತ ಆವೃತ್ತಿ)
ಸುಮಾರು ೪೦೦೦ ಲೇಖಕರ ಅಂಚೆ ವಿಳಾಸಗಳು) ೭೫-೦೦

೮. ಕೋಗಿಲೆಗೆ ಕಲಿಸಲಾರೆ (ಕಾವ್ಯ)-ಮೀನಾ ಸದಾಶಿವ ೨೦-೦೦

೯. ವಿಳಾಸ : ಸಂಕ್ರಮಣ ಪ್ರಕಾಶನ
ನಂ. ೧೮೯೪/೧, ೩೧ನೇ ಕ್ರಾಸ್, ೨ನೇ ಸ್ಟೇಜ್,
ಬನಶಂಕರಿ , ಬೆಂಗಳೂರು ೫೬೦೦೭೦